41st Year of Publication   Phone : 3728.   ಬೆಲೆ 75 ಪೈ.

ಪ್ರಭಾತ

ಸ್ವಾತಂತ್ರ್ಯ ಅಂಕ 1975

ಸಂಪುಟ ೪೧. ಸಂಚಿಕೆ ೨೮. || ಸಂಪಾದಕ: ಕುಡ್ಪಿ ವಾಸುದೇವ ಶೆಣೈ. ತಾ. 17—8—1975 || VOL. 41. NO. 28.



ಜಗತ್ಪ್ರಸಿದ್ಧ ಬೇಲೂರು ಶ್ರೀ ಚೆನ್ನಕೇಶವ ದೇವಾಲಯದ ಹೊರಗಿನ
ಮಹಾದ್ವಾರ ಮತ್ತು ಗೋಪುರ.

PRABHAT ★ INDEPENDENCE NUMBER ★ 1975

ಜನಕೆ ಜಾಗ್ರತಿಯುದಯ
ವಿದುವೆ ತಾಮಸ ಜಡತೆ
ಗಳೆನ ವಿಜಯವ ಸಾರ್ವ
ಮೊದಲ ತೂರ್ಯಂ

ಪ್ರಭಾತ

ಬಗೆಗೆ ಬಾಹ್ಯಜ್ಞಾನ
ವೀವಾಪ್ಯ ಶಕ್ತಿಯಿದು
ಸದಮಲಾಂತಃಕರಣ
ತರುಣ ಪ್ರಭಾತಂ

ಸ್ವಾತಂತ್ರ್ಯ ಅಂಕ | 17—8—1975 | INDEPENDENCE NUMBER

★ ಐತಿಹಾಸಿಕ ಆಗಸ್ಟ್ ★

(ರಘುನಾಥನ್)


ಆಗಸ್ಟ್, ನಮ್ಮ ದೇಶದ ಇತಿಹಾಸದಲ್ಲಿ ಒಂದು ಚಾರಿತ್ರಿಕ ತಿಂಗಳು. ಅನೇಕ ಐತಿಹಾಸಿಕ ಮಹತ್ವದ ಘಟನೆಗಳು ಆಗಸ್ಟ್ ತಿಂಗಳಲ್ಲೇ ಸಂಭವಿಸಿವೆ. ನಮ್ಮ ರಾಷ್ಟ್ರದ ಪಿತಾಮಹ ಮಹಾತ್ಮಾ ಗಾಂಧೀಜಿಯವರು ೧೯೪೨ರ ಆಗಸ್ಟ್ ತಿಂಗಳಲ್ಲಿ ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ "ಭಾರತ ಬಿಟ್ಟು ತೊಲಗಿ" ಎಂಬ ಆಂದೋಳನವನ್ನು ಆರಂಭಿಸಿದರು. ೧೯೪೭ರ ಆಗಸ್ಟ್ ತಿಂಗಳಲ್ಲೇ ಭಾರತವು ಸ್ವಾತಂತ್ರ್ಯ ಪಡೆಯಿತು. ಪ್ರಾಸಂಗಿಕವಾಗಿಯೂ, ಚಾರಿತ್ರಿಕವಾದ ಭಾರತ-ಸೋವಿಯತ್ ಮೈತ್ರಿ ಒಪ್ಪಂದಕ್ಕೂ ೧೯೭೧ರ ಆಗಸ್ಟ್ ತಿಂಗಳಲ್ಲೇ ಅಂಕಿತ ಹಾಕಲಾಯಿತು. ಆಗಸ್ಟ್ ತಿಂಗಳಲ್ಲೇ ಸಂಭವಿಸಿದ ಈ ಎಲ್ಲ ಚಾರಿತ್ರಿಕ ಘಟನೆಗಳೂ ನಮ್ಮ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟವುಗಳಾಗಿವೆಯೆಂದೂ ಹೇಳಬಹುದು.

ಈ ಉಪಖಂಡದಲ್ಲಿ ೧೯೭೧ರಲ್ಲಿ ಪರಿಸ್ಥಿತಿ ಅಸ್ಫೋಟನಾಕಾರಿಯಾಗಿತ್ತು. ಭಾರತಕ್ಕೆ ಅದೊಂದು ಪರೀಕ್ಷಾ ಸಮಯವೇ ಆಗಿತ್ತು. ಇಂಥ ಸಂದರ್ಭದಲ್ಲಿ ಭಾರತ–ಸೋವಿಯತ್ ಶಾಂತಿ, ಸ್ನೇಹ ಮತ್ತು ಸಹಕಾರ ಒಪ್ಪಂದಕ್ಕೆ ಅಂಕಿತ ಹಾಕಿದುದು ನವ-ವಸಾಹತುಶಾಹಿಗಳಿಗೆ ಏಶಿಯಾದ ಉಪಖಂಡದಲ್ಲಿನ ವ್ಯವಹಾರಗಳಲ್ಲಿ ತಲೆಹಾಕದಿರಲು ನೀಡಿದ ಅಂತಿಮ ಸೂಚನೆಯೇ ಆದಂತಾಯಿತು.

ವಾಸ್ತವದಲ್ಲಿ ನಮ್ಮ ಸ್ವಾತಂತ್ರ್ಯ ಹಾಗೂ ಸೋವಿಯತ್ ಒಕ್ಕೂಟದೊಡನೆಯ ನಮ್ಮ ಮೈತ್ರಿ ಇವೆರಡೂ ಒಂದಕ್ಕೊಂದು ಹಾಸುಹೊಕ್ಕಾಗಿವೆ. ಕಳೆದ ಜಾಗತಿಕ ಯುದ್ಧದಲ್ಲಿ ಫ್ಯಾಸಿಸಂ ವಿರುದ್ಧ ಸೋವಿಯತ್ ಜನರು ಸಾಧಿಸಿದ ಮಹೋನ್ನತ ವಿಜಯ ಹಾಗೂ ಜಾಗತಿಕ ಸಮಾಜವಾದಿ ವ್ಯವಸ್ಥೆಯ ಉದಯಗಳು ದಾಸ್ಯ ಜನತೆಗಳ ಅಂತಿಮ ವಿಮೋಚನೆಗೂ ಮತ್ತು ಅವರ ಮುಂದಿನ ಭವಿತವ್ಯಗಳಿಗೂ ಅನುಕೂಲಕರವಾದ ಪ್ರಭಾವ ಬೀರಿದುವೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಭಾರತವು ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲೂ ಇದು ಸಹಾಯಕವಾಯಿತು.

ಅಂತೆಯೇ ೧೯೪೬ರಲ್ಲಿ ಭಾರತದ ಮಧ್ಯಂತರ ಸರಕಾರದ ಅಧಿಕಾರವನ್ನು ವಹಿಸಿಕೊಂಡಾಗ ಜವಾಹರಲಾಲ್ ನೆಹರೂ ಅವರು ತಮ್ಮ ಪ್ರಥಮ ಬಾನುಲಿ ಭಾಷಣದಲ್ಲಿ ಸೋವಿಯತ್ ಒಕ್ಕೂಟವನ್ನು ಅಭಿನಂದಿಸಿ ಹೀಗೆ ಸಂದೇಶ ನೀಡಿದ್ದರು: "ಅವರು ಏಶಿಯಾದಲ್ಲಿ ನಮಗೆ ನೆರೆಯವರು. ಅಂತೆಯೆ ನಾವು ಅವರೊಂದಿಗೆ ಅನೇಕ ಸಾಮಾನ್ಯ ಕಾರ್ಯಭಾರಗಳನ್ನು ಕೈಕೊಳ್ಳಲೇಬೇಕಾಗುತ್ತದೆ ಹಾಗೂ ಪರಸ್ಪರರು ಮಾಡಬೇಕಾದುದು ಬಹಳಷ್ಟು ಇರುತ್ತದೆ". ಮೇಲಾಗಿ, ೧೯೪೭ರ ಏಪ್ರಿಲ್ ತಿಂಗಳಲ್ಲೇ, ಎಂದರೆ, ೧೯೪೭ರ ಆಗಸ್ಟ್ ತಿಂಗಳಲ್ಲಿ ನಮ್ಮ ಸ್ವಾತಂತ್ರ್ಯದ ಔಪಚಾರಿಕ ಘೋಷಣೆಯಾಗುವುದಕ್ಕೆ ಮೊದಲೆ, ಜವಾಹರಲಾಲ್ ನೆಹರೂ ಅವರು ಸೋವಿಯತ್ ಒಕ್ಕೂಟದೊಡನೆ ಸಂಬಂಧಗಳನ್ನು ಸ್ಥಾಪಿಸಿದರು.

ಈ ರೀತಿ ನಮ್ಮ ಸ್ವಾತಂತ್ರ್ಯ ಹಾಗೂ ಸೋವಿಯತ್ ಒಕ್ಕೂಟದೊಡನೆ ನಮ್ಮ ಮೈತ್ರಿ ಇವೆರಡೂ ಜೊತೆ-ಜೊತೆಯಾಗಿಯೇ ಬೆಳೆದುಬಂದಿವೆ. ವಿಶ್ವಸಂಸ್ಥೆಯಲ್ಲೂ ಹಾಗೂ ವಿಶ್ವಸಂಸ್ಥೆಯ ಹೊರಗೂ ಸೋವಿಯತ್ ಒಕ್ಕೂಟವು ನಮಗೆ ಯಾವತ್ತೂ ಬೆಂಬಲವಾಗಿ ನಿಂತಿದೆ ಮತ್ತು ನಮ್ಮ ಸರ್ವತಂತ್ರ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸಹಾಯಕವಾಗಿದೆ ಎಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಕಾಶ್ಮೀರ ಪ್ರಶ್ನೆ ಮತ್ತು ಗೋವಾ ವಿಮೋಚನಾ ಪ್ರಶ್ನೆಗಳಲ್ಲಿ ಸೋವಿಯತ್ ಒಕ್ಕೂಟವು ನಮ್ಮ ದೇಶಕ್ಕೆ ನೀಡಿದ ಬೆಂಬಲವನ್ನು ಯಾವ ಭಾರತೀಯನೂ ಎಂದಿಗೂ ಮರೆಯಲಾರನು.



ಏಕೈಕ ಇಂದ್ರಜಾಲ

—ಕಠಿಣ ಪರಿಶ್ರಮ
—ದೂರ ದೃಷ್ಟಿ
—ದೃಢ ನಿರ್ಧಾರ
—ಶಿಸ್ತು

ಇಂದಿರಾ ಗಾಂಧಿ.

ಆರ್ಥಿಕ ಪ್ರಗತಿಯನ್ನು ಸಾಧಿಸಿ, ಆ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದಾಗ ಮಾತ್ರವೇ ಒಂದು ದೇಶದ, ಅದರಲ್ಲೂ ವಿಶೇಷವಾಗಿ, ವಸಾಹತುಶಾಹಿ ಆಡಳಿತವು ಬಿಟ್ಟುಹೋದ ಆರ್ಥಿಕ ಹಿಂದುಳಿದಿರುವಿಕೆಯನ್ನು ಎದುರಿಸಬೇಕಾಗಿರುವ ಎಳೆಯ ಸ್ವತಂತ್ರ ರಾಜ್ಯದ ರಾಜಕೀಯ ಸ್ವಾತಂತ್ರ್ಯವನ್ನು ಕ್ರೋಢೀಕರಿಸುವುದು ಮತ್ತು ಬಲಪಡಿಸುವುದು ಸಾಧ್ಯ. ಅಂತೆಯೇ, ಲಿಯೋನೀದ್ ಬ್ರೆಜ್ನೇವ್ ಅವರು ೧೯೭೩ರ ನವೆಂಬರ್ ತಿಂಗಳು ಭಾರತಕ್ಕೆ ನೀಡಿದ ಚಾರಿತ್ರಿಕ ಭೇಟಿಯ ಸಮಯದಲ್ಲಿ ಅವರ ಗೌರವಾರ್ಥವಾಗಿ ಏರ್ಪಡಿಸಲಾಗಿದ್ದ ಸಮಾರಂಭವೊಂದರಲ್ಲಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರು ಭಾರತ–ಸೋವಿಯತ್ ಮೈತ್ರಿಯ ಕುರಿತು ಮಾತನಾಡುತ್ತ ಹೀಗೆ ಹೇಳಿದ್ದರು: "ಈ ಮೈತ್ರಿಯು ಯಾವ ರೀತಿಯಲ್ಲೂ ತಮ್ಮ ಸ್ವಾತಂತ್ರ್ಯಕ್ಕೆ ಆಘಾತ ಉಂಟುಮಾಡದು. ವಾಸ್ತವದಲ್ಲಿ ನಮ್ಮ ಸ್ವಾತಂತ್ರ್ಯವನ್ನು ಬಲಪಡಿಸಿಕೊಳ್ಳಲು ನಮಗೆ ಸಹಾಯಕವಾಗುವ ಅಪೂರ್ವ ಮೈತ್ರಿ ಇದಾಗಿದೆ. ಆರ್ಥಿಕವಾಗಿ ನಾವು ಬಲಿಷ್ಠರಾಗಿದ್ದಾಗ ಮಾತ್ರ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬಲ್ಲೆವು. ಈ ಸಂಬಂಧದಲ್ಲಿ ಸೋವಿಯತ್ ಒಕ್ಕೂಟವು ನಮಗೆ ಸರ್ವತೋಮುಖ ನೆರವು ನೀಡಿದೆ. ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿಯ ಮಹಾಕಾರ್ಯದರ್ಶಿ ಎಲ್. ಐ. ಬ್ರೆಜ್ನೇವ್ ಅವರು ಭಾರತ–ಸೋವಿಯತ್ ಮೈತ್ರಿಯನ್ನು ಪುಷ್ಟೀಕರಿಸಲು ವೈಯಕ್ತಿಕವಾಗಿ ತುಂಬ ಪರಿಶ್ರಮಿಸಿದ್ದಾರೆ."

ಈಗಾಗಲೇ ಹೇಳಿರುವಂತೆ ಆ ಪರೀಕ್ಷಾ ಸಮಯದಲ್ಲಿ ಮಾಡಿಕೊಳ್ಳಲಾದ ೨೦ ವರ್ಷಗಳ ಭಾರತ–ಸೋವಿಯತ್ ಒಪ್ಪಂದವು ಸೋವಿಯತ್ ಒಕ್ಕೂಟದೊಡನೆಯ ನಮ್ಮ ಮೈತ್ರಿಯನ್ನು ಮಾತ್ರವೇ ಅಲ್ಲ, ನಮ್ಮ ಸ್ವಾತಂತ್ರ್ಯವನ್ನೂ ಕೂಡ ಇನ್ನಷ್ಟು ಬಲಪಡಿಸಿದೆ. ವಾಸ್ತವದಲ್ಲಿ ಬಂಗ್ಲಾದೇಶದ ವಿಮೋಚನೆಯೊಂದಿಗೆ ಚಾರಿತ್ರಿಕ ತಿರುಗುಬಿಂದುವನ್ನು ತರುವಲ್ಲಿ ಸಹಾಯಕವಾದ ನಿರ್ಣಾಯಕ ಸಂಗತಿಗಳಲ್ಲಿ ಇದೂ ಒಂದು. ನವ ವಸಾಹತುಶಾಹಿಯ ಕುಟಿಲೋಪಾಯ

(೧೯ನೇ ಪುಟಕ್ಕೆ ಮುಂದುವರಿದಿದೆ)

ರಫ್ತುಕ್ಷೇತ್ರದಲ್ಲಿ ಭಾರತ

(ಪ್ರೊ| ಡಿ. ಪಿ. ಚಟ್ಟೋಪಾಧ್ಯಾಯ, ಕೇಂದ್ರ ವಾಣಿಜ್ಯ ಸಚಿವರು)

ಭಾರತ ಸ್ವತಂತ್ರಗೊಂಡಾಗ ಅದರ ಆರ್ಥಿಕ ವ್ಯವಸ್ಥೆ, ಆಂಗ್ಲರ ಶೋಷಣೆ, ಯುದ್ಧ, ಕ್ಷಾಮ ಮತ್ತು ವಿಭಜನೆ ಹೊಡೆತಗಳಿಂದ ಛಿದ್ರಗೊಂಡಿತ್ತು, ಸ್ವಾತಂತ್ರ್ಯ ಪೂರ್ವದ ಭಾರತೀಯ ರಫ್ತುವ್ಯಾಪಾರವೂ ಸಹ ಸಾಮ್ರಾಜ್ಯಶಾಹಿ ದೊರೆಗಳ ರಾಜ್ಯಕ್ಕೆ ಅನುಗುಣವಾಗಿತ್ತು.

ದೇಶದ ಆ ದುರ್ದಿನಗಳು ಇಂದು ಮಾರ್ಪಾಟಾಗಿವೆ. ಈಗ ಭಾರತದ ರಫ್ತು ಹಲವಾರು ಕ್ಷೇತ್ರಗಳಿಗೆ ಹರಡಿದೆ. ಇಂದು ನಮ್ಮ ದೇಶವು ಟೀ, ಸೇಬು, ಕಾಫಿ, ಹತ್ತಿ, ಚವಳಿ, ಅಭ್ರಕ ಮತ್ತು ಮ್ಯಾಂಗನೀಸ್ ಮುಂತಾದ ಸಾಂಪ್ರದಾಯಿಕ ವಸ್ತುಗಳೇ ಅಲ್ಲದೆ ಯಂತ್ರೋಪಕರಣಗಳು, ರೈಲ್ವೆ ಇಂಜಿನ್‌ಗಳು, ಜವಳಿ ಮತ್ತು ಸಕ್ಕರೆ ಕಾರ್ಖಾನೆಯ ಯಂತ್ರಗಳು, ಟ್ರಕ್ಕುಗಳು, ಔಷಧಗಳು ಮತ್ತು ಇತರ ಅನೇಕ ಆಧುನಿಕ ಇಂಜಿನಿಯರಿಂಗ್ ವಸ್ತುಗಳನ್ನು ರಫ್ತುಮಾಡುತ್ತಿದೆ.

ದೇಶ ಈಗ ಪ್ರಗತಿಯತ್ತ ಸಾಗಿದೆ. ಸ್ವಾವಲಂಬಿ ಆರ್ಥಿಕ ಬೆಳವಣಿಗೆಗಾಗಿ ಹೆಚ್ಚು ರಫ್ತುಗಳಿಕೆ ಅಗತ್ಯ. ಪ್ರಸಕ್ತ ಪರಿಸ್ಥಿತಿಯಲ್ಲಿ ನಾವು ಈ ಗುರಿಯನ್ನು ಸಾಧಿಸುತ್ತಿದ್ದೇವೆ. ೧೯೬೯-೭೪ರ ಅವಧಿಯಲ್ಲಿ ರಫ್ತು ಹೆಚ್ಚಳದ ವಾರ್ಷಿಕ ಸರಾಸರಿ ಶೇಕಡಾ ೬.೯ರಷ್ಟಿದ್ದರೆ ೧೯೭೩-೭೪ರಲ್ಲಿ ಶೇಕಡಾ ೨೨.೫ಕ್ಕೆ ಏರಿತು. ೧೯೭೪-೭೫ರಲ್ಲಿ ಅದು ಸುಮಾರು ಶೇಕಡಾ ೨೯ರಷ್ಟಿದ್ದು, ೩೨೫೩ ಕೋಟಿ ರೂ. ವಸ್ತುಗಳನ್ನು ರಫ್ತುಮಾಡಲಾಯಿತು.

ನಮ್ಮ ರಫ್ತುವ್ಯವಹಾರ ಪ್ರಗತಿಕಾಣುತ್ತಿದ್ದಂತೆಯೇ ತೈಲ ಮತ್ತು ಆವಶ್ಯಕ ಬೆಲೆಯೇರಿಕೆಯಿಂದಾಗಿ ಆಮದಿಗಾಗಿ ಹೆಚ್ಚು ಹಣ ವ್ಯಯವಾಗುತ್ತಿದೆ. ಆದರೂ ಸಹ, ಪ್ರಸಕ್ತ ಪರಿಸ್ಥಿತಿಯಲ್ಲಿ ನಮ್ಮ ರಫ್ತುವ್ಯವಹಾರವು ಕಳೆದ ಕೆಲವು ವರ್ಷಗಳಲ್ಲಿ ಗಣನೀಯ ಪ್ರಗತಿ ಸಾಧಿಸಿದೆಯೆಂದು ಹೇಳಬಹುದು.

ತ್ವರಿತ ಪ್ರಗತಿ

ನಮ್ಮ ರಫ್ತುವ್ಯವಹಾರವು ಕಳೆದ ಮೂರು ವರ್ಷಗಳಲ್ಲಿ ಪ್ರಗತಿ ಸಾಧಿಸಿದ್ದರೆ ಅದಕ್ಕೆ ಔಪಚಾರಿಕ ಮತ್ತು ಅನೌಪಚಾರಿಕ ವಸ್ತುಗಳ ಬೇಡಿಕೆಯೇ ಕಾರಣ. ಇವುಗಳಲ್ಲಿ ಇಂಜಿನಿಯರಿಂಗ್ ವಸ್ತುಗಳು, ರಸಾಯನಿಕ ವಸ್ತುಗಳು, ಕರಕುಶಲ ವಸ್ತುಗಳು, ಕಾಫಿ, ಹದಮಾಡಿದ ಚರ್ಮದ ವಸ್ತುಗಳು, ಪಾದರಕ್ಷೆಗಳು, ಪ್ಲಾಸ್ಟಿಕ್ ವಸ್ತುಗಳು, ಕಬ್ಬಿಣದ ಅದಿರು ಮುಂತಾದುವು ಸೇರಿವೆ. ೧೯೭೪-೭೫ರಲ್ಲಿ ಇಂಜಿನಿಯರಿಂಗ್ ವಸ್ತುಗಳು, ಸಕ್ಕರೆ, ಸಣಬು ವಸ್ತುಗಳು, ಟೀ ರಸಾಯನಿಕ ವಸ್ತುಗಳು ಗೇರುಬೀಜ ಹಾಗು ಹತ್ತಿಯ ರಫ್ತು ಏರಿಕೆ ಗಣನೀಯವೆಂದು ಹೇಳಬಹುದು.


ಇಂಜಿನಿಯರಿಂಗ್ ವಸ್ತುಗಳು

ಭಾರತೀಯ ಇಂಜಿನಿಯರಿಂಗ್ ವಸ್ತುಗಳು ವಿಶ್ವಮಾರುಕಟ್ಟೆಯಲ್ಲಿ ಈಗ ಜನಪ್ರಿಯವಾಗುತ್ತಿವೆ. ೧೯೭೧-೭೨ರಲ್ಲಿ ಅವುಗಳ ರಫ್ತು ೧೨೨ ಕೋಟಿ ರೂ.ಗಳಿದ್ದರೆ ೧೯೭೩-೭೪ರಲ್ಲಿ ೨೦೧ ಕೋಟಿ ರೂ.ಗಳಿಗೇರಿತು. ೧೯೭೪-೭೫ರಲ್ಲಿ ಆರ್ಥಿಕ ಪರಿಸ್ಥಿತಿ ಏರುಪೇರುಗೊಂಡಿದ್ದರೂ ಸಹ ಭಾರತ ೩೧೨ ಕೋಟಿ ರೂ. ಮೌಲ್ಯದ ಇಂಜಿನಿಯರಿಂಗ್ ವಸ್ತುಗಳನ್ನು ರಫ್ತು ಮಾಡಿತು.

ಲೆಟಿನ್ ಅಮೇರಿಕ, ಆಫ್ರಿಕ ಮತ್ತು ಪೂರ್ವ ಯುರೋಪ್ ದೇಶಗಳು ಭಾರತದ ಪ್ರಮುಖ ಗಿರಾಕಿಗಳು. ಖಾರಿ ಪ್ರದೇಶದಲ್ಲೂ ಸಹ ಭಾರತದ ರಫ್ತು ವ್ಯವಹಾರ ಬೆಳೆಯತೊಡಗಿದೆ.

ವಿಶ್ವದ ಪ್ರಸಕ್ತ ಆರ್ಥಿಕ ಪರಿಸ್ಥಿತಿ ಅನಿಶ್ಚತೆಯಿಂದ ಕೂಡಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪ್ರಮುಖ ಕ್ಷೇತ್ರಗಳ ಹಿಂಜರಿತ ನಮ್ಮ ರಫ್ತುವ್ಯವಹಾರದ ಮೇಲೆ ಪ್ರಭಾವ ಬೀರಬಹುದಾಗಿದೆ. ಆದ್ದರಿಂದ ಮುಂಬರುವ ವರ್ಷಗಳಲ್ಲಿ ನಮ್ಮ ಆಮದು ರಫ್ತು ವ್ಯವಹಾರವನ್ನು ಸರಿದೂಗಿಸುವ ಸಲುವಾಗಿ ವಿಶೇಷ ಪ್ರಯತ್ನಮಾಡಬೇಕಾಗಿದೆ.

ವಿದೇಶೀ ಮಾರುಕಟ್ಟೆಯಲ್ಲಿ ನಾವು ಪ್ರವೇಶಿಸಿರುವುದು ನಿಜವಾದರೂ ನಮ್ಮ ಅವಶ್ಯಕತೆಗಳನ್ನು ಗಮನಿಸಿದಲ್ಲಿ ನಾವು ಸಾಧಿಸಬೇಕಾದುದು ಇನ್ನೂ ಬಹಳಷ್ಟಿದೆ. ಇದಕ್ಕಾಗಿ ಎಲ್ಲ ಕ್ಷೇತ್ರಗಳ ವಿಶೇಷ ಪರಿಶ್ರಮ ಅಗತ್ಯ.



ಕೆನರಾ ಕೊಲೇಜಿನ ಪ್ರಿನ್ಸಿಪಾಲರಾಗಿರುವ ಶ್ರೀ ಜಿ. ಕೆ. ಶೆಣೈ, ಅವರ "ಪುತ್ತೂರಿನಿಂದ ಕಾಶ್ಮೀರಕ್ಕೆ" ಎಂಬ ಪ್ರವಾಸಕಥನ ಗ್ರಂಥಕ್ಕೆ, ಕೇಂದ್ರ ಸರಕಾರದ ಶಿಕ್ಷಣ ಮತ್ತು ಸಮಾಜಕಲ್ಯಾಣ ಸಚಿವ ಖಾತೆಯಿಂದ ರೂ.1000/- ಬಹುಮಾನ ದೊರೆತಿದೆ. ಶ್ರೀ ಶೆಣೈಯವರು ಪುತ್ತೂರಿನ ವಿವೇಕಾನಂದ ಕೊಲೇಜಿನ ಪ್ರಿನ್ಸಿಪಾಲರಾಗಿರುವಾಗ ಅದನ್ನು ಬರೆದರು.

ನಮ್ಮ ದೇಗುಲ

ಅವನೇ ಇರಲಿ, ಅವ ದೇಶೀಯನೇ ಇರಲಿ, ಅವನಿಗೆ ಆರಾಧ್ಯ ದೇವತೆ ಯಾರು? ಅವನು ಯಾರಿಂದ ಪೋಷಿತನು? ಯಾರಿಂದ ರಕ್ಷಿತನು? ಎಂಬುದನ್ನು ಭಾರತೀಯರು ಹಿಂದಿನಿಂದಲೇ ತಿಳಿದಿರುವರು; ಬೋಧಿಸಿಯೂ ಇರುವರು. ಇದನ್ನು ವೇದ ಮಂತ್ರದ ಓದುಗರು ಈ ಕೆಳಗಣ ಪ್ರಭಾತ ಪ್ರಾರ್ಥನಾ ಪದ್ಯದಲ್ಲಿ ಹೊಂದುವರು.

ಸಮುದ್ರವಸನೇ ದೇವಿ ಪರ್ವತಸ್ತನ
ಮಂಡಲೇ ।
ವಿಷ್ಣುಪತ್ನಿ ನಮಸ್ತುಭ್ಯಂ
ಪಾದಸ್ಪರ್ಶಂ ಕ್ಷಮಸ್ವ ಮೇ ॥

ಸಾಗರಾಂಬರೆ, ಓ ದೇವಿ, ಪರ್ವತಗಳೇ ಸ್ತನಗಳಾಗಿರುವವಳೇ, ವಿಷ್ಣುವಿನ ಧರ್ಮಪತ್ನಿಯೇ, ನಿನಗೆ ವಂದನೆ. ನನ್ನ ಪಾದಸ್ಪರ್ಶ ನಿನಗಾಗುತ್ತಿದೆ. ಅದಕ್ಕೆ ಕ್ಷಮೆ ಕೋರುವೆ.

ಈ ಭೂಮಾತೆಯಿಂದ ಎಲ್ಲರೂ ಪೋಷಿತರಾಗಿ ಬೆಳೆಯುವರು. ಅವಳೇ ಸರ್ವರಕ್ಷಕಿ. ಅವಳಿಗೆಲ್ಲರೂ ಋಣಿಗಳು. ಈ ಋಣಿಗಳು ಪ್ರಪಂಚದ ಮಾನವರು. ಇವಳಲ್ಲಿ ಕ್ಷಮೆಯ ಯಾಚನೆ. ಜನ್ಮವಿತ್ತ ಮಾತೆ ಈಕೆ. ನಾವು ಅವಳನ್ನು ಹೊಂದಿ ಬಾಳುವೆವು. ನಮ್ಮ ಜೀವನ ಕಿರಿದು. ಅವಳ ಮುಂದೆ ನಾವು ಕಿರಿಯ ಆಯುಸ್ಸಿನವರಾಗಿ ನೆಲಸಿರುವೆವು. ಅವಳು ಸ್ಥಿರೆ, ಚಿರಾಯು, ಅವಳಿಲ್ಲವಾದರೆ ನಾವಿಲ್ಲ. ಯಾವ ಜೀವಿಯೂ ಇಲ್ಲ. ಭಾರತ ಮಾತೆ ಈ ಮಾತೆಯ ಅಂಶಭೂತೆ. ಇಂತೆಯೇ ಅನ್ಯದೇಶೀಯರಿಗೂ ಅಂಶಭೂತೆಯಾಗಿ ದೇಶಮಾತೆ ಇರುವಳು. ಈ ಗೌರವದ ಪವಿತ್ರ ಚಿತ್ರ ವೇದಮಂತ್ರದಲ್ಲಿದ್ದು ಅದು ಪವಿತ್ರತೆಗೊಂಡಿದೆ. ಈ ಮಾತೆಯ ಆರಾಧನೆಗೊಳ್ಳಲು ಎಲ್ಲರೂ ಅರ್ಹರು. ಯಾವ ಪಣಗೊಳ್ಳುವಿಕೆಯ ಅಗತ್ಯವಿಲ್ಲ. ಭಾರತವಾಸಿಗಳು ಇದಕ್ಕೆ ಕರೆಗೊಟ್ಟಿರುವರು.

ಓಂ ಸಹನಾವವತು ಸಹನೌ ಭುನಕ್ತು
ಸಹವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು ಮಾ
ವಿದ್ವಿಷಾವಹೈ ॥
ಓಂ ಶಾಂತಿಃ ಶಾಂತಿಃ ಶಾಂತಿಃ

(ಸಃ=ದೇವರು. ಹ=ನಿಶ್ಚಯದಿಂದ. ನೌ=ಆಚಾರ್ಯ ಶಿಷ್ಯರನ್ನು, ಅವತು=ಪಾಲಿಸಲಿ. ಸಹ=ಒಂದಾಗಿ ನೌ=ಆಚಾರ್ಯ ಶಿಷ್ಯರನ್ನು. ಭುನಕ್ತು=ಪಾಲಿಸಲಿ. ವಿದ್ಯಾ ಪ್ರಕಾಶದಿಂದ ಪಾಲಿಸಲಿ. ಅದರ ಫಲ ಪ್ರಕಾಶದಿಂದ ರಕ್ಷಿಸಲಿ. ಸಹ=ಒಂದಾಗಿಯೇ, ನೌ=ಶಿಷ್ಯಾಚಾರ್ಯರು, ವೀರ್ಯಂ = ವಿದ್ಯಾಕೃತವಾದ ಸಾಮರ್ಥ್ಯವನ್ನು, ಕರವಾವಹೈ = ನಿಷ್ಪಾದಿಸುವೆವು. ನೌ= ನಾವು, ಅಧೀತಂ = ಪಠಿತವಾದುದು, ಓದಿದುದು, ತೇಜಸ್ವಿನಾ ಅಸ್ತು= ವೀರ್ಯದಿಂದ ಕೂಡಿ ಆಗಲಿ. ಮಾ ವಿದ್ವಿಷಾವಹೈ = ಪರಸ್ಪರ ದ್ವೇಷವನ್ನು ಮಾಡಲಾರೆವು. ಓಂ ಶಾಂತಿಃ ಎಂದು ಮೂರು ಸಲದ ಉಚ್ಚಾರಣೆ= ಎಲ್ಲ ದೋಷ ನಾಶಕ್ಕಾಗಿ)

ಪರಸ್ಪರ ದ್ವೇಷ ಭಾವನೆಯ ಕೊಳೆಯನ್ನು ಬಿಡಬೇಕು. ಈ ದ್ವೇಷದ ಕೊಳೆ ಬಿಟ್ಟು ಸೇವಾಕರ್ಮ ಪ್ರತಿಜ್ಞಾಬದ್ಧರಾಗಬೇಕು. ಈ ಪ್ರತಿಜ್ಞೆ ಸ್ವತಂತ್ರ ನಾಗರಿಕನಿಗೆ ಉಳ್ಳುದು. ಭಾರತವು ಈ ಉಚ್ಚ ಧ್ಯೇಯಗೊಂಡಿದೆ. ಅದಕ್ಕಾಗಿಯೇ ಸ್ವತಂತ್ರತೆ ಪಡೆದಿದೆ.

ಭಾರತವು ಸತ್ಯ ಅಹಿಂಸೆಗಳಿಂದಲೇ ಸ್ವಾತಂತ್ರ್ಯವನ್ನು ಸಾಧಿಸಿದೆ, ಪಡೆದಿದೆ. ಅದನ್ನೇ ಸಾರುತ್ತಿದೆ. ದ್ವೇಷದ ಹೋರಾಟವನ್ನು ನಡೆಸಿಲ್ಲ. ಸತ್ಯ ಅಹಿಂಸೆಗಳಿಂದಲೇ ಸಾಧಿಸಲಾಗಿದೆ. ಭಾರತ ರಾಷ್ಟ್ರೀಯರೆಲ್ಲರೂ ಸನಾತನ ಧರ್ಮಪರಂಪರೆಯವರು, ಧರ್ಮ ಸನಾತನ. ಎಲ್ಲರಿಗೂ ಅವರವರ ಧರ್ಮ ಸನಾತನ. ಸತ್ಯ ಅಂತೆಯೇ ಸನಾತನ. ಸತ್ಯ ಧರ್ಮಗಳೆರಡೂ ಸನಾತನಗಳು. ಇದರಿಂದಲೇ ಅವುಗಳಿಗೆ ಅಂತರವೂ ಇಲ್ಲ, ಸತ್ಯ ಅಹಿಂಸೆಗಳಿಗೂ ಅಂತರವಿಲ್ಲ. ಈ ಕಾರಣದಿಂದಲೇ ಯಾವನೂ ದ್ವೇಷದ ಬೆಳೆ ಬೆಳೆಗೊಳಿಸತಕ್ಕವನಲ್ಲ. ದ್ವೇಷದ ಬೆಳೆ ಧರ್ಮವನ್ನು ಬೆಳೆಸದು. ಸೇವೆಯಿಂದಲೇ ಪ್ರೇಮಗೊಂಡು ಇಚ್ಛಿಸಿದರೆ ಧರ್ಮದ ಬೆಳವಣಿಗೆಯಾಗುವುದು. ಅಹಿಂಸಾ ಕಾರ್ಯದಿಂದಲೇ ಸೇವಾಕಾರ್ಯ. ಈ ಕಾರ್ಯ ಧರ್ಮದ ಉದ್ಧಾರ ಕಾರ್ಯ. ಧರ್ಮದ ಪುನರುದ್ಧಾರ ಸಂದೇಶ ಭಾರತೀಯರ ಸಂದೇಶ. ಈ ಸಂದೇಶ ಕಾರ್ಯವೇ ಸ್ವತಂತ್ರ ಭಾರತೀಯರ ಸಂದೇಶ.

ಮಾನವ ಸಮಾಜದ ವಿಕಾಸಪೂರ್ಣತೆಗುಳ್ಳುದೇ ಧರ್ಮ. ಅದು ಜೀವಿತಕ್ಕೆ ಕೈದೀವಿಗೆಯಂತೆ, ಎಲ್ಲಿಯೂ ಚೆಲುವ ಬೆಳಕು ಬೀರುವುದು. ಮೇಲು ಕೀಳುಗಳ ನೆಲೆ ಅದಕ್ಕಿಲ್ಲ, ಮಾನವನನ್ನು ಶುಚಿಗೊಳಿಸುತ್ತದೆ. ಶುಚಿತ್ವದ ಸಿದ್ಧಿಗಾಗಿಯೇ ನೆಲಸಿದೆ. ಸರ್ವರೂ ಅದಕ್ಕೆ ಸಮಾನರು. ಸರ್ವವ್ಯಾಪಿಯಾಗಿರುವ ಗಾಳಿಯಂತೆ ಇದೆ. ಇದರ ಉಸಿರು ಬಾಳ ಬೆಳಕು. ಬಾಳುವೆಗೆ ಗಾಳಿ ಎಂತು ಬೇಕೋ ಅಂತೆ ಇದು ಬೇಕು. ಎಲ್ಲರಿಗೂ ಬೇಕು. ಆಳಾಗಲಿ ಅರಸನಾಗಲಿ ಇದರ ತೂಕದಲ್ಲಿಯೇ ಇರುವನು. ಹಿರಿಮೆ ಕಿರಿಮೆಯ ಭಾರ ಕಾಂಬುದು ಇದರಲ್ಲಿ.

ಧರ್ಮವು ಬಹುಮುಖಿ. ಅದನ್ನು ಅವರವರು ಕಂಡಂತೆ ವರ್ಣಿಸುವರು. ಛಾಯಾಚಿತ್ರಕಾರನ ರೂಪ ಬಿಂಬ ಸಾದೃಶ್ಯಗೊಂಡಿರುವರು, ಅದರ ಪೂರ್ಣ ಚಿತ್ರ ಛಾಯಾಚಿತ್ರಕಾರ ಹೊಂದಿಲ್ಲ. ದೃಷ್ಟಿ ಕೋನದ ಚಿತ್ರ ಬಿಂಬ ಮಾತ್ರ ಇರುವುದು. ಸತ್ಯ ಅಹಿಂಸೆಗಳು ಧರ್ಮದ ವಸ್ತುಗಳು. ಯಾರನ್ನೂ ಸುಳ್ಳು ಹೇಳಲು ಧರ್ಮ ಹೇಳದು. ಹಿಂಸೆ ಕೊಲೆಯ ಕೆಲಸಕ್ಕೆ ಧರ್ಮ ಮೆಚ್ಚದು. ಮನುಷ್ಯನ ಮನೋಮಾಲಿನ್ಯ ಧರ್ಮದ ಮೇಲೆ ಕೊಳೆ ಕೆಸರು ಚೆಲ್ಲುತ್ತಿದೆ. ಧರ್ಮವನ್ನು ತಿಳಿಯದ ಅದರ ಅನುಷ್ಠಾನವನ್ನು ಮಾಡದ ಮನಸ್ಸಿನ ಮಾನವನು ಹಿಂಸೆ ಕೊಲೆ ಕೆಲಸಕ್ಕೆ ಇಳಿಯುವನು. ಧರ್ಮ ದೈವೀ ತತ್ವ. ಎಲ್ಲ ಧರ್ಮಗಳೂ ದೇವರನ್ನು ಹೊಗಳುತ್ತಿವೆ. ಸತ್ಯ ಅಹಿಂಸೆಗಳನ್ನು ಬೋಧಿಸುತ್ತಿವೆ. ಧರ್ಮವು ಸತ್ಯದ ವಸ್ತು. ಅಹಿಂಸೆಯ ಉಪಾಸನೆಯದು. ಸತ್ಯವಿಲ್ಲ ಎಂಬಂತೆಯೇ ಧರ್ಮವಿಲ್ಲ ಎಂಬ ಮಾತು. ಸತ್ಯವನ್ನು ತಿಳಿಯದವನು ಧರ್ಮವನ್ನು ತಿಳಿಯನು. ದೇವರನ್ನು ಕಾಣನು.

ಹಲವಾರು ಧರ್ಮಗಳು ಪ್ರಪಂಚದಲ್ಲಿವೆ. ಧರ್ಮಗಳನ್ನು ಬಾಹ್ಯ ವಸ್ತುವಿನಿಂದ ತಿಳಿಸುವಂತೆ ಮನುಷ್ಯನು ಏನಾದರೂ ಧರಿಸುತ್ತಿರುವನು. ಅವು ಆಡಂಬರದ ವಸ್ತುಗಳಾಗಿ ಮಾನವನನ್ನು ಬೇರೆ ಧರ್ಮದವನನ್ನಾಗಿ ಗುರುತಿಸುವ ಸಾಧನಗಳಾಗಿವೆ. ಈ ಸಾಧನಗಳು ಆಡಂಬರದ ವಸ್ತುಗಳಾಗಿಯೂ ಮನುಷ್ಯನನ್ನು ಮನುಷ್ಯಸಮಾಜದಿಂದ ಭಿನ್ನನನ್ನಾಗಿಯೂ ಪ್ರತ್ಯೇಕತೆಗೊಳಿಸುವುದಾಗಿಯೂ ನೆಲಸಿವೆ. ಧರ್ಮದ ಉನ್ನತಿ ಸಾಧನೆಗಾಗಿ ಇಂದು ನೆಲಸಿಲ್ಲ. ಸತ್ಯ ಅಹಿಂಸೆ ಪ್ರೇಮ ಸೇವಾ ಕಾರ್ಯಗಳಿಂದ ಅದರ ಉದ್ಧಾರ ಕಾರ್ಯಕ್ಕಾಗಿ ಹೊರಡುವುದೇ ಧರ್ಮಕಾರ್ಯ. ಸ್ಪೃಶ್ಯ ಅಸ್ಪೃಶ್ಯರೆಂಬ ಭಾವನೆಯೂ ಇಲ್ಲ. ಸರ್ವರ ಉದ್ಧಾರ ಕಾರ್ಯ ಧರ್ಮಕ್ಕಿದೆ. ಅದು ಕರ್ತವ್ಯ ಆಚರಣೆ ನಿಷ್ಠೆಗಳನ್ನು ಅವಲಂಬಿಸಿದೆ. ಮಾನವನನ್ನು ಪ್ರತ್ಯೇಕಿಸುವ ಬಾಹ್ಯ ಸಾಧನಗಳು ಆಡಂಬರದ ವಸ್ತುಗಳಾಗಿ ನೆಲಸಿವೆ. ಅವುಗಳ ಧಾರಣೆ ಸಂಜ್ಞಾಚಿಹ್ನೆಗೊಂಡು ಭಿನ್ನತೆಗೊಳಿಸುವವುಗಳಾಗಿ ಏಕತೆಯ ಸಹಜೀವನ ತತ್ವಕ್ಕೆ ವಿರುದ್ಧವಾಗಿವೆ. ಹಿಂದುವಿನ ಜನಿವಾರ, ಮುಸ್ಲಿಮನ ಗಡ್ಡ, ಕ್ರಿಸ್ತನ ಕುರ್ಸ-ಬಾಹ್ಯಾಡಂಬರದ ಧರ್ಮ ವಸ್ತುಗಳಾಗಿ ಸಮಾಜದಲ್ಲಿ ಮಾನವನನ್ನು ಇಂದು ಪೃಥಕ್ಕರಿಸಲು ಹೊರಟಿವೆ,

ಹಿಂಸೆ ಹೇಡಿತನದ ಗುರುತು. ಕೋವಿ ಖಡ್ಗಗಳು ಭಯಭೀತನ ಆಯುಧಗಳು. ಅಶಕ್ತನ ಆಯುಧಗಳು, ರಕ್ಷಣಾವಸ್ತುಗಳು. ನಿರ್ಭಯರಾಗಿದ್ದು ನೆಲಸಲಿರುವ ಶಕ್ತಿ ಸತ್ಯ ಅಹಿಂಸೆಗಳಿಗಿವೆ. ಸತ್ಯ ಅಹಿಂಸೆಗಳು ನಿರ್ಭಯ ದಾನ ಶಕ್ತಿಯವು. ಈ ಶಕ್ತಿಯಿಂದ ಅನ್ಯರ ಶಸ್ತ್ರವನ್ನು ಸೆಳೆದು ತೆಗೆಯುವುದು ಅಹಿಂಸೆ ಎಂಬುದನ್ನು ಬಾಪೂ ತೋರಿ ಕೊಟ್ಟಿದ್ದಾರೆ. ಭಾರತದ ಸೇನಾನಿಗಳೂ ಇದರಿಂದಲೇ ಸ್ವಾತಂತ್ರ್ಯ ರಕ್ಷಕರಾಗಿ ಪ್ರಪಂಚಕ್ಕೆ ಮಾರ್ಗದರ್ಶಕರಾಗಿದ್ದಾರೆ.

ನಮ್ಮ ಜನತೆಯ ಶಕ್ತಿ ದಿನ ದಿನ ಬೆಳೆಯುತ್ತಿದೆ. ಬೆಳೆಯುತ್ತಲೇ ಇದ್ದು ಜವಾಬ್ದಾರಿಕೆಯೂ ಬೆಳೆಯುತ್ತಿದೆ. ಇದಕ್ಕೆ ಶಾಂತಿಯಿಂದ ಕೆಲಸಗೊಳ್ಳುವುದೇ ಕಾರಣವಾಗುವುದು. ಸಿಟ್ಟಿನಿಂದ ಆಯುಧವೆತ್ತಿದ್ದರೆ ಅದರಿಂದ ನಮ್ಮ ಕೊರಳು ತುಂಡಾಗುವುದು. ಬೆಳಕು ಕತ್ತಲೆಯನ್ನು ಹೋಗೊಳಿಸುವಂತೆ ಸತ್ಯದಿಂದ ಅಸತ್ಯದ ಕೆಟ್ಟ ಶಕ್ತಿಗಳನ್ನು ಆತ್ಮಬಲದ ಮೂಲಕ ನಾಶಗೊಳಿಸಲು ಶಕ್ತರಾಗುವೆವು. ಜನತೆಯಲ್ಲಿ ಪರಸ್ಪರ ವಿಶ್ವಾಸವಿಲ್ಲ. ಒಳ್ಳೆಯ ಭಾವನೆ ಕಡಮೆಯಾಗಿದೆ. ಇದು ಜನತೆಗೆ ಸೇರಿದ ಕರ್ತವ್ಯಪಾಲನೆ. ಈ ಕರ್ತವ್ಯಪಾಲನೆ ಇಲ್ಲದೆ ಮೊದಲು ಬೇರೆಯವರು ಬರಲಿ. ಆಗ ನಾವು ಮುಂದರಿಯೋಣ, ಎಂಬುದೂ ದುರ್ಬಲತೆಯನ್ನು ತೋರುವುದಾಗಿದೆ. ಇಂದು ಮಾನವಪ್ರಪಂಚದಲ್ಲಿ ಪರಸ್ಪರ ವಿಶ್ವಾಸ ಸದ್ಭಾವನೆಯ ಕರ್ತವ್ಯಪಾಲನೆ ಇರದೆ ಶಾಂತಿ ದೇಶದ ಬೆಳವಣಿಗೆಯ ದಾರಿಯಿಂದ ತಪ್ಪಿ ದೇಶದ ಸಂಪತ್ತಿಗೆ ದ್ವೇಷಾಗ್ನಿಯಿಂದ ದಹಿಸುವುದರೊಂದಿಗೆ ಕೊಲೆ ವಿನಾಶದ ಕರ್ಮಗಳನ್ನು ಮಾಡುತ್ತಾ ನಡೆಯುವುದು ಧರ್ಮ ಪ್ರಮುಖರೆಂದು ಹೇಳುತ್ತಿರುವವರ ಕರ್ತವ್ಯವಾದರೆ ಅವರೆತ್ತಿದ ಖಡ್ಗ ಅವರ ಕೊರಳಿಗೆ ಬೀಳುವಂತಾದೀತು. ಚರಿತ್ರೆಯ ವಾಚಕರು ಇದನ್ನು ಅರಿಯುವರು. ಚರಿತ್ರೆಯ ಶಿಕ್ಷಣ ಸಾಮಾಜಿಕ ಅಧ್ಯಯನ, ಮಾನವ ಪ್ರಪಂಚದ ಸದುಪಯೋಗಕ್ಕಾಗಿ, ಅದನ್ನು ಕಂಡು ನಡೆಯಲಾಗಿಯೇ ಇದೆ. ನಡೆಯಲ್ಲಿ ತಿದ್ದಿ ತರಲು ಅನುಸರಿಸುವಂತೆ ಮಾಡಲು ಚರಿತ್ರೆ ಸಹಾಯಕ. ಉಚ್ಚ ಆದರ್ಶದ ಸಾಧನಾ ಮಾರ್ಗದ ಮುನ್ನೋಟಗೊಂಡು ಕಲ್ಯಾಣ ಸಾಧನೆಗೊಳಿಸಲುಳ್ಳುದು. ಮಾನವ ಜೀವನ ಕ್ರಯ ವಿಕ್ರಯದ ವಸ್ತುವಲ್ಲ. ಸತತ ದೃಢಪ್ರಯತ್ನದಿಂದ ಗುಣವನ್ನೂ ಬೆಲೆಯನ್ನೂ ಉಂಟುಮಾಡಿ ಲೋಕದ ಅಭಿವೃದ್ಧಿಗೆ ಉಪಯೋಗಿಸಲುಳ್ಳುದಾಗಿದೆ ಎಂಬುದನ್ನು ತರಲು ಚರಿತ್ರೆ ಬೇಕಿದೆ.

ಕ್ರಿಮಿಗಳ ಹುಟ್ಟು ಕೊಳಚೆಯ ಕೆಸರು ಭೂಮಿಯಲ್ಲಿ. ಅಂತೆಯೇ ದುಷ್ಟರೂ ದುರ್ಗುಣಗಳೂ ಅಶುಚಿಯ ಮಾನವರ ಹೃದಯದಿಂದ ಬೆಳೆದು ಬರುವವು. ಮನಸ್ಸಿನ ಮಾಲಿನ್ಯ ಆಶಾ ಲೋಭಗಳು ಕಷ್ಟಕಾಲದ ಬೆಳಸಿಗೆ ಕಾರಣಗಳಾಗುತ್ತವೆ. ಹುಲ್ಲು ಬೆಳೆಸಿದರೆ ಭತ್ತದ ಕೊಯ್ಲು ಮಾಡಲು ಸಾಧ್ಯವಿಲ್ಲ. ತಪ್ಪು ಕುಂದು ಕೊರತೆಗಳನ್ನು ಹೇಳಲು ಕಷ್ಟ ಸ್ಥಿತಿ (ಪ್ರಯಾಸ) ಇಲ್ಲ. ಹಾಗೆ ಆಗದಿರಲೂ ಆದರೆ ಹೋಗೊಳಿಸುವ ಮಾರ್ಗವನ್ನು ಕಂಡುಕೊಳ್ಳುವುದೂ ಪ್ರಯಾಸವಾಗಿರುವುದು. ವಂಚನೆ ಕಳವುಗಳಲ್ಲಿರುವವರು ವಂಚನೆಕಳವುಗಳಿಗೇ ಸೇರುವರು. ಅವರ ವಾಸಸ್ಥಾನ ಕತ್ತಲೆ ಕೋಣೆ, ಕಗ್ಗಾಡಾಗುವುದು. ವಾದ ಪ್ರತಿವಾದಗಳನ್ನು ಮಾಡಲಾಗಿ ನಮ್ಮನ್ನು ದೇವರು ಸೃಷ್ಟಿಸಿದುದಲ್ಲ, ಪ್ರಪಂಚದ ಅಗತ್ಯವಾದ ಗುಣಸಮೂಹಗಳನ್ನು ಸಂಪಾದಿಸಿ ವಿತರಣೆಗೊಳ್ಳುವುದಕ್ಕಾಗಿದೆ.

ಯಾವಾಗಲೂ ಬಂದ ಕಷ್ಟಗಳ ನಿವಾರಣೆಗೆ ದಾರಿಯನ್ನು ಕಂಡು ಅದಕ್ಕೆ ಹೊರಡುವುದು ಮಾನವನ ಕರ್ಮ. ರೋಗ ಬಂದಾಗ ಮದ್ದಿನ ಸೇವನೆ ಬೇಕು. ಅಂತೆಯೇ ಸಮಾಜದಲ್ಲಿ ಕುತ್ತ ಬಂದಾಗ ಚಿಕಿತ್ಸಕನ ಅಗತ್ಯ ಬರುತ್ತದೆ. ಆ ಚಿಕಿತ್ಸಕ ಸಮಾಜದ ಹೊಣೆ ಹೊತ್ತವನಾಗುವನು. ಈ ಕರ್ಮ ಮುಂದಾಳುವಿನಿಂದ ನಡೆಯುತ್ತದೆ. ರೋಗಿಗೆ ಕಹಿ ಮದ್ದು-ವ್ರಣದ ಶಸ್ತ್ರಚಿಕಿತ್ಸೆಗಳು ಬಗ್ಗದಂತೆ ಸಮಾಜ ಧರ್ಮದ ನೀತಿಗಳು ಈ ರೋಗಿಗಳಿಗೆ ಒಗ್ಗದಾಗುವವು. ಚಿಕಿತ್ಸೆಗೆ ಒಳಗಾಗುವಿಕೆಯಾಗುತ್ತದೆ. ರೋಗದ ಬೇರನ್ನೇ ಕಿತ್ತೊಗೆದು ನಿರ್ಮೂಲಗೊಳಿಸಬೇಕಾಗುತ್ತದೆ.

ಕಲುಷಿತವಾದ ಮನಸ್ಸು, ಸಂಪತ್ತಿನ ದಾಹ, ಅಧಿಕಾರಲಾಲಸೆ. ಅಹಂಕಾರ, ಮದ, ಮತ್ಸರಗಳ ಬೀಡಾಗಿ ಮಾನವನು ಭೂದೇವಿಯ ಸೇವಾಕರ್ಮದ ದಾರಿಯು

(೧೮ನೇ ಪುಟಕ್ಕೆ ಮುಂದುವರಿದಿದೆ)



ಕನ್ನಡ ಬರಹಗಾರರ ಬಳಗ

—ಸಂಪುಟ ಮತ್ತು ವ್ಯಕ್ತಿ

—ಬಾ. ಕೃ.

ನೀವು ಯಾವುದಾದರೊಂದು ಸಾಹಿತ್ಯ ಸಮ್ಮೇಳನಕ್ಕೆ ಹೋಗುತ್ತೀರಿ. ಅಲ್ಲಿ ನಿಮಗೆ ಒಮ್ಮೆಂದೊಮ್ಮೆಗೆ ಕಾಣಿಸುವುದು ಗೋಡೆ ತುಂಬಾ ಭಾವಚಿತ್ರಗಳು ಮತ್ತು ಕೈ ಬರಹದ ಮಾಹಿತಿಗಳು. ಏನಪ್ಪಾ ಇದೆಲ್ಲಾ ಪ್ರದರ್ಶನ! ಅಂತ ನೀವು ಕುತೂಹಲದಿಂದ ಅವನ್ನೆಲ್ಲಾ ನೋಡುತ್ತಾ ನಿಲ್ಲುವಿರಿ. ಇದರಿಂದ ನಮ್ಮ ನಾಡಿನ ಸಾಹಿತಿಗಳು ಯಾರು? ಅವರು ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟರ ಮಟ್ಟಿಗೆ ದುಡಿದಿದ್ದಾರೆ? ಅವರ ಕೃತಿಗಳು ಮತ್ತು ಸಂಪೂರ್ಣ ಪರಿಚಯವನ್ನು ಈ ಪ್ರದರ್ಶನದ ಮಾಹಿತಿಗಳು ಕೊಡುತ್ತವೆ ಎಂಬುದು ಆಗ ನಿಮಗೆ ತಿಳಿಯುತ್ತದೆ. ಹೀಗೆ ಒಂದಾದ ಮೇಲೊಂದರಂತೆ ನೀವು ಎಲ್ಲವನ್ನೂ ನೋಡಿ ಸಂತೋಷಿಸುವ ವ್ಯಕ್ತಿಗಳಾಗುತ್ತೀರಿ. ಅಷ್ಟಲ್ಲದೆ ನಿಮ್ಮ ಮಿತ್ರ ಸಾಹಿತಿಗಳ ಪರಿಚಯವಿದೆಯೋ, ಫೋಟೋ ಇದೆಯೋ? ಎಂದು ನೀವು ಆ ಪ್ರದರ್ಶನದಲ್ಲಿ ಹುಡುಕುತ್ತೀರಿ. ಅವರ ಫೋಟೋ ಕಂಡಾಗ ಇನ್ನೂ ಹೆಚ್ಚು ಸಂತೋಷಗೊಳ್ಳುತ್ತೀರಿ. ಆದರೆ ನೋಡು ನೋಡುತ್ತಿದ್ದಂತೆ ನಿಮಗೆ ವೇಳೆ ಸಂದುದು ಗೊತ್ತೇ ಆಗುವುದಿಲ್ಲ. ಮುಂದೆ ಥಕ್ಕನೆ ನಿಮ್ಮ ಲಕ್ಷ್ಯ ಅಲ್ಲೇ ಮೇಜಿನ ಮೇಲಿರಿಸಿದ್ದ ನಾಲ್ಕು ಬೃಹತ್ ಸಂಪುಟಗಳತ್ತ ಓಡುತ್ತದೆ. ಇದೇನು? ಎಂದು ನೀವು ಇನ್ನು ವಿಸ್ಮಿತರಾಗಿ ಅದರ ಪುಟಗಳನ್ನು ತಿರುವುತ್ತೀರಿ. ಆಗ ನಿಮಗೆ ಅದೆಷ್ಟೋ ಲೇಖಕರ ವಿಚಾರಗಳು ಅಕಸ್ಮಾತ್ತಾಗಿ ಸಿಕ್ಕುತ್ತಾಗುತ್ತದೆ. ವೇಳೆಯಾಯಿತೆಂದು ಯಾರಾದರೊಬ್ಬರು ಅಂದರೆ ಮತ್ತು ಕೆಲಕಾಲ ನೋಡಿಯೇ ಹೋಗೋಣ ಎಂದನಿಸುತ್ತದಲ್ಲವೆ ನಿಮಗೆ? 'ಇಷ್ಟು ಸಮಗ್ರ ಸಾಹಿತ್ಯದ ಇತಿಹಾಸ ಮೌಲ್ಯ ಇನ್ನೆಲ್ಲಿ ಸಿಕ್ಕಾವು'—ಎಂದುಕೊಂಡು ನೀವು ಬಹಳಷ್ಟು ಕಾಲವನ್ನು ಈ ನಾಲ್ಕು ಸಂಪುಟಗಳನ್ನು ನೋಡುವುದರಲ್ಲಿ ಕಳೆಯುತ್ತೀರಿ. ಅವಸರವಸರವಾಗಿ ಮೇಲಿಂದ ಮೇಲೆ ಕಣ್ಣು ಹಾಯಿಸಿದ್ದಲ್ಲಿ ವೇಳೆಯಿದ್ದಲ್ಲಿ ಇನ್ನೊಮ್ಮೆ ಸುದೀರ್ಘವಾಗಿ ಕಣ್ಣು ಹಾಯಿಸ ಬಯಸುತ್ತೀರಿ.

ಇದನ್ನೆಲ್ಲಾ ನೋಡುತ್ತಿರುವಾಗಲೇ ಹಠಾತ್ತಾಗಿ ನಿಮ್ಮ ಮನಸ್ಸಿನಲ್ಲೇಳುವುದೇನು—ಇದನ್ನೆಲ್ಲಾ ಯಾರು ಕಲೆಹಾಕಿದರು? ಎಂದು. ಬೃಹತ್ ಸಂಪುಟಗಳ ಪಕ್ಕದಲ್ಲೇ ಬಿಳಿಯ ಪಂಚೆ ಜುಬ್ಬ ತೊಟ್ಟು ಕನ್ನಡಕವನ್ನಿಟ್ಟುಕೊಂಡ ತೆಳ್ಳಗಿನ ಪ್ರಾಯಸ್ಥರೊಬ್ಬರು ನಿಮಗೆ ಆಗಾಗ್ಗೆ ವಿಷಯಗಳನ್ನು ವಿವರಿಸುತ್ತಾ ಇರುವರು. ಅವರೂ ಏನೋ ಹುಡುಕಿಕೊಂಡು ಮಾತಾಡಿಕೊಂಡು ಬರೆಯುತ್ತಾ ಇರುವರು. ಈ ನಾಲ್ಕು ಬೃಹತ್ ಸಂಪುಟಗಳ (೪೦೦೦ಕ್ಕೂ ಮಿಕ್ಕಿ ಬರಹಗಾರರ ಚಿತ್ರ-ಚರಿತ್ರೆಯಿದೆ) ಮತ್ತು ಪ್ರದರ್ಶನದ ಎಲ್ಲಾ ಶ್ರಮ ಈ ಪ್ರಾಯಸ್ತ ವ್ಯಕ್ತಿಗೆ ಸೇರಿದ್ದು ಎಂದರೆ ನಿಮಗೆ ಅಚ್ಚರಿಯಾಗಬಹುದು.

ಹೌದು; ಇಷ್ಟು ಮಾಹಿತಿ ಮತ್ತು ಭಾವಚಿತ್ರಗಳನ್ನು ಸಂಕಲಿಸಿದ ಶ್ರಮ ಈ ಸಾದಾ ವ್ಯಕ್ತಿ ಶ್ರೀ। ಟಿ. ಚಂದ್ರರಾಜ ಶೆಟ್ಟಿಯವರದು. ಇವರೊಬ್ಬ ನಿವೃತ್ತ ಅಧ್ಯಾಪಕರು. ತೋಡಾರಿನ ಶ್ರೀ। ಶೆಟ್ಟಿಯವರು ಈ ಸಂಗ್ರಹಣ ಪ್ರವೃತ್ತಿಯನ್ನು ಕಳೆದ ನಾಲ್ಕು ದಶಕಗಳಿಂದ ಬೆಳೆಸುತ್ತಾ ಬಂದಿದ್ದಾರೆ. ಶ್ರೀಯುತರಿಗೆ ಈಗ ೬೬ ವರ್ಷ ವಯಸ್ಸಾದರೂ ಅವರ ಮಾತಿಗೆ, ಹುಮ್ಮಸ್ಸಿಗೆ ಇನ್ನೂ ಎಳೆಯ ವಯಸ್ಸು ಎನ್ನುವುದು ಅವರೊಡನೆ ಸಂಭಾಷಿಸಿದಾಗಲೇ ಗೊತ್ತಾಗುವುದು.

ಕೇವಲ ಹವ್ಯಾಸಕ್ಕಾಗಿ ೧೯೩೮ರಲ್ಲಿ 'ಕಥಾಕುಂಜ' ಎಂಬ ಪತ್ರಿಕೆಯಲ್ಲಿ ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾವಚಿತ್ರ, ಪರಿಚಯವನ್ನು ಕಂಡು ಆರಂಭಿಸಿದ್ದ ಈ ಕಾರ್ಯ ಇಂದು ಸಮಾಜಕ್ಕೆ ಬಹಳಷ್ಟು ಪ್ರಯೋಜನಕಾರಿಯಾಗಿದೆ. ಸಾಹಿತ್ಯದ ಕುರಿತಾದ ಇಷ್ಟೊಂದು ನಿಖರ ಮಾಹಿತಿಗಳು ಬೇರೆಡೆಯೆಲ್ಲೂ ಸಿಗುವುದಿಲ್ಲ. ಶ್ರೀ। ಶೆಟ್ಟಿಯವರು ಅನೇಕ ಸಾಹಿತಿಗಳನ್ನು ನೇರವಾಗಿ ಸಂದರ್ಶಿಸಿ ತಮ್ಮ ಸಂಗ್ರಹವನ್ನು ಹೆಚ್ಚಿಸಿಕೊಂಡದ್ದಲ್ಲದೆ ಪತ್ರ ಮುಖೇನವೂ ಸಾಹಿತಿಗಳೊಡನೆ ಸಂಪರ್ಕವನ್ನಿರಿಸಿಕೊಂಡು ಮಾಹಿತಿಗಳನ್ನು ಕೂಡಿಸಿಕೊಂಡಿದ್ದಾರೆ. "ಒಮ್ಮೊಮ್ಮೆ ಹತ್ತು—ಹದಿನೈದು ರೂಪಾಯಿ ಖರ್ಚು ಮಾಡಿ ನೂರು ಮಂದಿಗೆ ಬರೆದರೆ ಇಬ್ಬರೋ ಮೂವರೋ ಉತ್ತರಿಸುತ್ತಾರೆ" ಎನ್ನುವ ಶ್ರೀ। ಶೆಟ್ಟರು ಒಂದಿಷ್ಟು ನಿರಾಶರಾಗದೆ, ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಬಳಿಕ ತಮ್ಮ ಸಂಪೂರ್ಣ ವೇಳೆಯನ್ನು

(೧೮ನೇ ಪುಟಕ್ಕೆ ಮುಂದುವರಿದಿದೆ)

ಗಾಂಧಿ ಮತ್ತು ನೆಹರು—ವಿನ್ಸೆಂಟ್ ಷಿಯಾನ್ ಕಂಡಂತೆ

(ಲೇ: ಪ್ರಿಯಾ ಕರುಣಾಕರ್)



ಮಹಾತ್ಮಾಜಿಯವರು ಹಂತಕನ ಗುಂಡುಗಳಿಗೆ ಬಲಿಯಾದಾಗ ಷಿಯಾನ್ ಆ ಸ್ಥಳದಿಂದ ಕೇವಲ ಹತ್ತು ಅಡಿಗಳ ದೂರದಲ್ಲಿದ್ದರು.

ಗಾಂಧೀಜಿ ಕೊಲೆಯಾದರೆಂದು ತಿಳಿದಾಗ ಈ ಪ್ರಖ್ಯಾತ ಅಮೆರಿಕನ್ ಲೇಖಕ ವಿನ್ಸೆಂಟ್ ಷಿಯಾನ್ ಕುಸಿದುಬಿದ್ದರು. ಅವರಿಗೆ ಜ್ಞಾನ ಮರುಕಳಿಸಿದಾಗ ಅವರಿನ್ನೂ ದಿಗ್ಭ್ರಾಂತ ಸ್ಥಿತಿಯಲ್ಲಿದ್ದರು, ಕಣ್ಣುಗಳಿಂದ ನೀರಿಳಿಯುತ್ತಿತ್ತು. ತನ್ನ ಜತೆಗಾರನತ್ತ ತಿರುಗಿ ಮೆಲ್ಲನೆ ಉಸುರಿದರು: "ನನ್ನ ಏಕೈಕ ಗುರುವನ್ನು ಕಳೆದುಕೊಂಡೆ, ಇನ್ನು ನಾನು ಏನನ್ನೂ ಕಲಿಯಲಾರೆ."

ವರ್ಷಗಳುರುಳಿದ ನಂತರ ಗಾಂಧಿಯವರ ವೀರ ಮರಣದ ಬಗ್ಗೆ ಬರೆಯುತ್ತಾ ಷಿಯಾನ್ ಹೀಗೆ ಹೇಳಿದರು:

"ಅವರ ಮರಣ, ಇತಿಹಾಸದ ಪ್ರಾರಂಭದಿಂದಲೂ ನಡೆದುಬಂದಿರುವ ಎಲ್ಲ ಧಾರ್ಮಿಕ ದುರಂತಗಳಂತೆಯೇ ಅವರ ಜೀವನವನ್ನು ಪರಿಸಮಾಪ್ತಿಗೊಳಿಸಿತು. ನಜರೆತ್‌ನ ಜೀಸಸ್‌ನಂತೆಯೇ ಅವರು ಅಖಿಲ ಮಾನವಕುಲಕ್ಕಾಗಿ ಮಡಿದರು. ನಿಷ್ಠೆ, ತ್ಯಾಗ, ಪ್ರೇಮಗಳಿಂದ ಕೂಡಿದ ಉದಾತ್ತ ಜೀವಕ್ಕೆ ಅದಕ್ಕಿಂತ ಉತ್ತಮ ರೀತಿಯ ಮರಣ ಸಾಧ್ಯವಿರಲಿಲ್ಲ. ಎಲ್ಲರನ್ನು ಸರಿಸಮಾನರಂತೆ ಕಾಣುತ್ತಿದ್ದ ಅವರಿಗೆ ಸರಿಸಾಟಿಯಾದವರು ನಮ್ಮ ಕಾಲದಲ್ಲಿ ಬೇರಾರೂ ಇರಲಿಲ್ಲ. ನಮಗೆ ತಿಳಿದಿದ್ದ ಎಲ್ಲರ ಪೈಕಿ ಅವರು ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದರು."

ಪತ್ರಿಕೋದ್ಯೋಗಿಯ ಜೀವನವನ್ನಾರಂಭಿಸಿ, ಮುಂದೆ ೩೦ ಪುಸ್ತಕಗಳನ್ನು ಬರೆದ ಅಮೆರಿಕನ್ ವಿನ್ಸೆಂಟ್ ಷಿಯಾನ್,ವಿಷಯಗಳ ಆಳದಲ್ಲಿ ಪ್ರವೇಶಿಸುವ ಅಲೌಕಿಕ ಪ್ರತಿಭೆಯನ್ನು ಹೊಂದಿದ್ದರು. ವಿದೇಶೀ ಸುದ್ದಿಗಾರನಾಗಿ ಅವರು ಮೊದಲು ಕಾರ್ಯ ನಿರ್ವಹಿಸಿದುದು ಮೊರಾಕ್ಕೋದಲ್ಲಿ, ೧೯೨೪ರಲ್ಲಿ. ರಿಫ್ ದಂಗೆಯ ಅಬ್ದೆಲ್ ಕ್ರಿಮ್ ಅವರ ಪ್ರತ್ಯೇಕ ಸಂದರ್ಶನ ಪಡೆಯುವಲ್ಲಿ ಅವರು ಯಶಸ್ವಿಯಾದರು. ಅನಂತರ ಅವರು ಸ್ಪೇನ್, ಲಂಡನ್ ಮತ್ತು ಜೆಕೊಸ್ಲೊವಾಕಿಯಗಳಲ್ಲಿ ಕೆಲಸ ಮಾಡಿದರು. ೧೯೨೯ರಲ್ಲಿ ಜೆರೂಸಲೇಂನಲ್ಲಿ ಪ್ರಥಮ ಅರಬ—ಇಸ್ರೇಲಿ ಘರ್ಷಣೆಯನ್ನು ಕಂಡರು. ಸೋವಿಯತ್ ರಷ್ಯ ಮತ್ತು ಚೀಣಾದ ಕ್ರಾಂತಿಗಳ ಪ್ರಾರಂಭದ ದಿನಗಳಲ್ಲಿ ಅವರು ಆ ದೇಶಗಳಲ್ಲಿದ್ದರು.

ಗಾಂಧಿಯವರ ಜೀವನ ಮತ್ತು ತತ್ವಗಳ ಮೇಲಿನ ಮೆಚ್ಚುಗೆಯಿಂದಾಗಿ ೧೯೪೭ರಲ್ಲಿ ಭಾರತದತ್ತ ಆಕರ್ಷಿತರಾದ ಷಿಯಾನ್ ಗಾಂಧಿಯವರ ನಿಕಟ ಒಡನಾಡಿಯಾಗಿರಲು ಭಾರತದಲ್ಲಿಯೇ ಉಳಿದರು. ಈ ವರ್ಷದ ಆದಿಯಲ್ಲಿ ತಮ್ಮ ೭೫ನೆಯ ವಯಸ್ಸಿನಲ್ಲಿ ನಿಧನರಾಗುವ ವರೆಗೆ ಅವರು ಪಶ್ಚಿಮದಲ್ಲಿ ಭಾರತದ ಬಗ್ಗೆ ಅತ್ಯಂತ ಸಹಾನುಭೂತಿಯಿರುವ ಮಿತ್ರರಾಗಿದ್ದರು. ಸ್ವತಂತ್ರ ಭಾರತದೊಡನೆ ತಮ್ಮ ಸಂಪರ್ಕವನ್ನು ಮುಂದುವರಿಸಲು ಮತ್ತೆ ಮತ್ತೆ, ಮುಖ್ಯವಾಗಿ ನೆಹರೂ ಅವರ ಆಡಳಿತದ ಅವಧಿಯಲ್ಲಿ ಅವರು ಭಾರತಕ್ಕೆ ಭೇಟಿನೀಡಿದರು. ಈ ರಾಷ್ಟ್ರದೊಡನೆ ಅವರ ಸಂಪರ್ಕದಿಂದಾಗಿ ಮೂರು ಪುಸ್ತಕಗಳು ಹೊರಬಂದವು: "ಲೀಡ್ ಕೈಂಡ್ಲೀ ಲೈಟ್"(೧೯೪೯); "ಮಹಾತ್ಮ ಗಾಂಧಿ" (೧೯೫೫) ಮತ್ತು "ನೆಹರೂ: ದಿ ಇಯರ್ಸ್ ಆಫ್ ಪವರ್" (೧೯೫೯).


ಸಾಯುವುದಕ್ಕೆ ಕೆಲವೇ ದಿನಗಳ ಮುಂಚೆ ಗಾಂಧೀಜಿ ತಾವು ಚಿಕ್ಕಂದಿನಲ್ಲಿ ನೋಡಿದ ಮತ್ತು ತಮ್ಮ ಜೀವನ ಹಾಗೂ ಆದರ್ಶಗಳ ಮೇಲೆ ಅಪಾರ ಪ್ರಭಾವ ಬೀರಿದ ನಾಟಕದ ಕಥಾನಾಯಕ ಹರಿಶ್ಚಂದ್ರನ ಕಥೆಯನ್ನು ಷಿಯಾನ್ ಅವರಿಗೆ ಹೇಳಿದ್ದರು. ಸತ್ಯಕ್ಕಾಗಿ ಸಕಲವನ್ನೂ ತ್ಯಾಗಮಾಡಿದ ಹರಿಶ್ಚಂದ್ರನ ಕಥೆಯು ವಾಸ್ತವವಾಗಿ ಗಾಂಧಿಯವರ ಜೀವನ ಕಥೆಯೂ ಹೌದು ಎಂದು ಷಿಯಾನ್ ಅಭಿಪ್ರಾಯಪಟ್ಟರು. ಅವರು ಅಪ್ಪಟ ಹಿಂದೂ ಆಗಿದ್ದರು. ಅವರ ವೈಯಕ್ತಿಕ ಶೋಧನೆಗಳಾದ ಸತ್ಯ, ಅಹಿಂಸೆ ಮತ್ತು ಬ್ರಹ್ಮಚರ್ಯೆಗಳಿಗೆ ಅವರು ವಿಶ್ವಮಾನ್ಯತೆಯನ್ನು ಕಂಡುಕೊಂಡರು. ರಾಜಕೀಯ ಪ್ರತಿಭಟನೆಯ ಅತ್ಯಂತ ಪ್ರಬಲ ಅಸ್ತ್ರವನ್ನು ಅವರು ಜಗತ್ತಿಗೆ ನೀಡಿದರು.

ಗಾಂಧಿಯವರ ಸರಳತೆ ಮತ್ತು ಸಜ್ಜನಿಕೆಯಲ್ಲಿನ ಅವರ ಅಪ್ರತಿಮ ನಂಬಿಕೆಯೇ ಇತರರ ಮೇಲೆ ಅವರ ಪ್ರಭಾವದ ರಹಸ್ಯ ಎಂದು ಷಿಯಾನ್ ಅಭಿಪ್ರಾಯಪಟ್ಟರು.

ಗಾಂಧಿಯವರ ತತ್ವಗಳ ಬಗೆಗೆ ತಮ್ಮ ಪುಸ್ತಕವೊಂದರಲ್ಲಿ ಬರೆಯುತ್ತಾ ಷಿಯಾನ್ ಹೀಗೆಂದರು:

"ಗಾಂಧಿಯವರು ಜೀವಿಸಿದ್ದಾಗ ಅವರು ತಮ್ಮ ಬಗ್ಗೆ ಮಾತಾಡಬಹುದಿತ್ತು; ಇಂದು ಅವರ ಬಗ್ಗೆ ಮಾತಾಡಲು ೩೬ ಕೋಟಿ ಜನರಿದ್ದಾರೆ; ಅವರಲ್ಲಿ ಯಾರೇ ಇಬ್ಬರು ಒಂದೇ ವಿಷಯವನ್ನು ಹೇಳುವುದಿಲ್ಲ. ಅದು ಅವರ ಹಿರಿಮೆಯಾಗಿದ್ದಿತು. ಏಕೈಕ ಕ್ರಿಶ್ಚಿಯನ್ ಶಿಲುಬೆಯ ಮೇಲೆ ಸತ್ತನು ಎಂದು ನೀಟ್ಜೆ ಭಾವಿಸಿದ್ದರು; ಆದರೆ ಏಕೈಕ ಗಾಂಧಿಯನ್ ಹಂತಕನ ಗುಂಡುಗಳಿಗೆ ಬಲಿಯಾದರು ಎಂದು ನಾವಿಂದು ಹೇಳಬಹುದು."

ಷಿಯಾನ್ ನೆಹರೂ ಅವರಿಗೂ ಮಿತ್ರರಾಗಿದ್ದರು. ನೆಹರೂ ಅವರು "ನೊನ್ ಗಾಂಧಿಯನ್ ಗಾಂಧಿಯನ್" ಎಂಬುದಕ್ಕೆ ಅತ್ಯಂತ ಸೂಕ್ತ ಉದಾಹರಣೆ ಎಂದು ಅವರು ಭಾವಿಸಿದ್ದರು. ಅವರ ಪ್ರಕಾರ



ನೆಹರೂ ಎಂದೂ ಮಹಾತ್ಮಾ ಗಾಂಧಿಯವರ ಜೀವನದ ಉಗ್ರ ನಿಯಮಗಳನ್ನಾಗಲೀ ಧಾರ್ಮಿಕ ತಳಹದಿಯನ್ನಾಗಲೀ ಸ್ವೀಕರಿಸಲಿಲ್ಲ. "ಅವರು ಗಾಂಧಿಯವರಿಂದ ತೀವ್ರವಾಗಿ ಪ್ರಭಾವಿತರಾಗಿದ್ದರು. ಆದರೆ ಗಾಂಧಿಯವರ ಅಭಿಪ್ರಾಯ ಅವರಿಗೆ ಒಪ್ಪಿಗೆಯಾಗದಿದ್ದಾಗ ಅದರ ಪರಿಣಾಮಗಳನ್ನು ಲೆಕ್ಕಿಸದೆ ಇದ್ದುದನ್ನು ಇದ್ದಂತೆ ಹೇಳುತಿದ್ದರು." ಅವರಿಬ್ಬರ ನಡುವಣ ವಿಶ್ವಾಸ ಮತ್ತು ಪ್ರೀತಿಗೆ ಒಂದಿಷ್ಟೂ ಬಾಧಕವಾಗದಂತೆ ನೆಹರೂ ಅವರು ತಮ್ಮ ಸಹಜ ಮನೋಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು. ಷಿಯಾನ್ ಹೇಳಿದರು:

"ಭಾರತದಲ್ಲಿ ಅನೇಕರು ಗಾಂಧಿಯವರ ಪರ ಮಾತನಾಡುತ್ತಾರೆ, ಆದರೆ ನೆಹರೂ ತಮ್ಮ ಬಗ್ಗೆ ತಾವೇ ಮಾತನಾಡುತ್ತಾರೆ. ಹೀಗೆ ಮಾಡುವಲ್ಲಿ ಅವರು ಗಾಂಧಿಯವರ ಮೂಲ ಆದರ್ಶಗಳಿಗೆ ಬಹಳ ಹತ್ತಿರ ಬರುತ್ತಾರೆ. ಇದು ವಿರೋಧಾಭಾಸವಿರಬಹುದು. ಆದರೆ ಇಂದು ಗಾಂಧೀ ಉಡುಪಿನಲ್ಲಿ ಮೆರೆಯುತ್ತಿರುವ ಅನೇಕರಿಗಿಂತ ನೆಹರೂ ಗಾಂಧೀಜಿಗೆ ಬಹಳ ಹತ್ತಿರದವರಾಗಿದ್ದಾರೆ. ಗಾಂಧೀಜಿ ತಮ್ಮ ಇಡೀ ಜೀವನವನ್ನು ಯಾರಿಗಾಗಿ ವ್ಯಯಿಸಿದರೋ ಅಂಥ ಅಸ್ಪೃಶ್ಯರು ಅಥವಾ ಕುಷ್ಠ ರೋಗಿ

(೧೬ನೇ ಪುಟಕ್ಕೆ ಮುಂದುವರಿದಿದೆ)

ಒಂದು ಅನುಭವ

ವಯಸ್ಕರ ಶಾಲೆ

"ಕನ್ನಡ ಬರಹಗಾರರ ಬಳಗ"ದ ಸಂಕಲನದಿಂದ ಕತೆ, ಹರಟೆಗಳ ಪ್ರಕಟಣೆಗಳಿಂದ ಸುಪರಿಚಿತರಾಗಿರುವ, ಈ ತಿಂಗಳಲ್ಲಿ ಮಂಗಳೂರಿನ ಕನ್ನಡ ಸಂಘದವರಿಂದ ಸನ್ಮಾನಿಸಲ್ಪಡುವ ಶ್ರೀ ಟಿ. ಚಂದ್ರರಾಜ ಸೆಟ್ಟಿಯವರ ಕುರಿತಾದ ಒಂದು ಲೇಖನವನ್ನು ಈ ವಿಶೇಷಾಂಕದ ಇನ್ನೊಂದೆಡೆ ಪ್ರಕಟಿಸಿರುವೆವು. ಇಲ್ಲಿ, ಶ್ರೀ ಸೆಟ್ಟಿಯವರ "ಅನುಭವ"ಗಳ ಸಂಗ್ರಹದಿಂದ ಒಂದನ್ನು ಕೊಟ್ಟಿರುತ್ತೇವೆ. ನೇರವಾಗಿ ನುಡಿವ, ಸತ್ಯವನ್ನೆ ನುಡಿವ ಸರಳ ವ್ಯಕ್ತಿಯು, ನಿರಾಡಂಬರ ನಡೆಯ ಶ್ರೀ ಚಂದ್ರರಾಜ ಸೆಟ್ಟಿಯವರು ಮುಂದೆ, ತಮ್ಮ ಹಲವು ಅನುಭವಗಳನ್ನು ಚಿಕ್ಕ ಲೇಖನಗಳ ರೂಪದಲ್ಲಿ ಬರೆದು ಪ್ರಕಟಿಸುವವರಿದ್ದಾರೆ.

ಸಿದ್ಧಕಟ್ಟೆಯೆಂಬುದು ಒಂದು ಚಿಕ್ಕ ಹಳ್ಳಿ. ಅಲ್ಲಿ ಒಂದು ವಯಸ್ಕರ ಶಾಲೆಯನ್ನು ತೆರೆಯುವ ಆಸಕ್ತಿಯಿಂದ ನಾನು ಬಂಟ್ವಾಳದ ಸಮಾಜ ವಿಸ್ತರಣಾ ಅಭಿವೃದ್ಧಿ ಕೇಂದ್ರದವರ ನೆರವಿನಿಂದ, ಬಹಳ ಪ್ರಯತ್ನಪಟ್ಟು ನಮ್ಮ ಹಳ್ಳಿಯಲ್ಲಿ ಒಂದು ರಾತ್ರಿ ಶಾಲೆಯನ್ನು ತೆರೆದದ್ದಾಯಿತು. ಹಲವು ಮಂದಿ ವಯಸ್ಕರು ಕಲಿಯುವ ಆಸಕ್ತಿಯಿಂದ ಆ ಶಾಲೆಯನ್ನು ಸೇರಿ ಅಭ್ಯಾಸ ಮಾಡ ತೊಡಗಿದರು.

ಶಾಲಾ ಅಧ್ಯಾಪಕನ ಸಂಬಳ, ದೀಪದ ಎಣ್ಣೆಯ ಖರ್ಚು ಮತ್ತು ಶಾಲೆಗೆ ಬರುವ ವಯಸ್ಕರಿಗೆ ಆಗಾಗ ಸ್ವಲ್ಪ ತಿಂಡಿಯನ್ನು ಕೊಡಲು ಸ್ವಲ್ಪ ಪುಡಿಕಾಸು ಇಷ್ಟು ಸರಕಾರದಿಂದ ದೊರೆಯುವ ಭರವಸೆಯಿತ್ತು.

ಶಾಲೆ ಪ್ರಾರಂಭವಾಗಿ ಸುಮಾರು ಎಂಟು ತಿಂಗಳ ತನಕ ಸರಕಾರದಿಂದ ಯಾವ ತರದ ಸಹಕಾರವೂ ದೊರೆಯದೆ, ಕೊನೆಗೊಮ್ಮೆ ಆ ವರೆಗಿನ ಹಣವು ಒಟ್ಟಿಗೆ ಒಂದೇ ಸಲ ಸಿಕ್ಕಿತು. ನಂತರದ ತಿಂಗಳುಗಳಲ್ಲಿ ಯಾವ ತೊಂದರೆಯೂ ಇಲ್ಲದೆ, ಕ್ರಮವಾಗಿ ಹಣವು ಮನಿಯಾರ್ಡರು ಮೂಲಕ ದೊರೆಯುತ್ತಿತ್ತು.

ಆ ಕಾಲದಲ್ಲಿ ಮೂಡಬಿದ್ರೆಯಲ್ಲಿ ಕೆಲವೇ ಸಮಯ ಆಯುಷ್ಯವುಳ್ಳ ಅಧ್ಯಾಪಕರ ತರಬೇತಿ ಕೇಂದ್ರವೊಂದು ಅಸ್ತಿತ್ವದಲ್ಲಿತ್ತು. ಅಲ್ಲಿ ಸುಮಾರು ಇಪ್ಪತ್ತು ದಿನಗಳ ವಯಸ್ಕರ ಶಾಲಾಧ್ಯಾಪಕರ ತರಬೇತಿ ಕೇಂದ್ರವೊಂದು ತೆರೆಯಲ್ಪಟ್ಟಿತು. ಸಿದ್ಧಕಟ್ಟೆ ಶಾಲೆಯಲ್ಲಿ ಅಧ್ಯಾಪಕರಾಗಿ ದುಡಿಯುತ್ತಿದ್ದವರೊಬ್ಬರು ವಯಸ್ಕರ ಶಾಲಾಧ್ಯಾಪಕರ ತರಬೇತಿಗೆ ಸೇರಿ, ಅಲ್ಲಿ ತರಬೇತಾಗಿ ಬಂದರು.

ಒಂದು ದಿನ ತರಬೇತಾಗಿ ಬಂದ ಅಧ್ಯಾಪಕರು ನನ್ನನ್ನು ಕಂಡು, ತಾನು ರಾತ್ರಿ ಶಾಲಾಧ್ಯಾಪಕರ ತರಬೇತಾಗಿ ಬಂದಿರುವುದರಿಂದ, ಇಲ್ಲಿಯ ರಾತ್ರಿ ಶಾಲೆಯ ಅಧ್ಯಾಪಕ ವೃತ್ತಿಯನ್ನು ತನಗಿತ್ತರೆ, ಬಡವನಾದ ತನಗೆ ಉಪಕಾರವಾದೀತು ಎಂದು ಹೇಳಿದರು. ಆ ಮಾತು ನನಗೂ ಸರಿಯೆನಿಸಿ, ಆ ರಾತ್ರಿ ಶಾಲೆಗೆ ಅವರನ್ನು ಅಧ್ಯಾಪಕರಾಗಿ ನೇಮಿಸಿ, ಸಂಬಂಧಪಟ್ಟವರಿಗೆ ಈ ಕುರಿತು ಬರೆದುಕೊಂಡೆನು. ನಾನು ಅಧ್ಯಾಪಕರಿಗೆ ಅವರ ಸಂಬಳವನ್ನು ಮಾತ್ರ ಕೊಡುವುದಲ್ಲದೆ ಬೇರೇನನ್ನೂ ಕೊಡಲಾರೆನೆಂದೂ, ದೀಪ ಮೊದಲಾದವುಗಳ ಖರ್ಚನ್ನು ನಾನೇ ನೋಡಿಕೊಳ್ಳುತ್ತೇನೆಂದೂ ಹೇಳಿದೆನು.

ಶಾಲೆಯು ಪ್ರಗತಿ ಪಥದಲ್ಲಿ ನಾಲ್ಕಾರು ತಿಂಗಳು ನಡೆಯುತ್ತಿರುವಾಗ ಒಂದು ರಾತ್ರಿ ಶಾಲೆಗೆ ಇನಸ್ಪೆಕ್ಟರರು ಬಂದು ನನ್ನನ್ನು ಬರಹೇಳಿದರೆಂದು ಜನ ಬಂತು. ಕೂಡಲೇ ನಾನು ಹೊರಟು ಶಾಲೆಗೆ ಹೋದೆನು. ಅಲ್ಲಿ ಇನಸ್ಪೆಕ್ಟರರು ಬಂದಿದ್ದು, ನಾನು ರಾತ್ರಿ ಶಾಲೆಯಲ್ಲಿ ನೇಮಿಸಿದ ಅಧ್ಯಾಪಕರು ಬರೆದುಕೊಂಡ ಅರ್ಜಿಯೊಂದು ಅವರ ಕೈಯ್ಯಲ್ಲಿತ್ತು. ಅವರು ನನ್ನನ್ನು ಕಂಡು 'ಸ್ವಾಮಿ! ನೀವು ಇಲ್ಲಿಯ ರಾತ್ರಿ ಶಾಲೆಯಲ್ಲಿ ಕಲಿಯುತ್ತಿರುವ ವಯಸ್ಕರಿಗೆ ತಿಂಡಿಯನ್ನು ಒದಗಿಸುವುದಿಲ್ಲವೆಂದು ಅಧ್ಯಾಪಕರು ನಿಮ್ಮ ಮೇಲೆ ಅರ್ಜಿಯನ್ನು ಬರೆದುಕೊಂಡಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?' ಎಂದು ಕೇಳಿದರು.

ಆ ಅರ್ಜಿಯನ್ನು ನಾನು ಓದಿ ನೋಡಿ ಇನಸ್ಪೆಕ್ಟರರೊಂದಿಗೆ 'ಸ್ವಾಮಿ! ಈ ಅರ್ಜಿಯ ಕುರಿತು ನಾನು ಇಲ್ಲಿ ಏನನ್ನೂ ಹೇಳಲಾರೆ. ನಾಳೆಯ ಟಪ್ಪಾಲಿಗೆ ಇದರ ಮಾರುತ್ತರವನ್ನು ರಿಜಿಸ್ತ್ರಿಮಾಡಿ ಬರೆದು ಕೊಳ್ಳುತ್ತೇನೆ' ಎಂದು ಹೇಳಿ ಅಲ್ಲಿಂದ ಹೊರಬಿದ್ದೆನು.

ಮರುದಿನ ನಾನು ಟಪ್ಪಾಲು ಕಟ್ಟೆಗೆ ಹೋಗಿ ಎರಡು ಇನ್‌ಲೇಂಡ್ ಕಾಗದಗಳನ್ನು ಪಡೆದುಕೊಂಡು, ಒಂದರಲ್ಲಿ ರಾತ್ರಿ ಶಾಲಾ ಅಧ್ಯಾಪಕರಿಗೆ ಒಂದು ಪತ್ರ ಬರೆದು, ಅದರಲ್ಲಿ ನನ್ನ ತಾಪತ್ರಯಗಳಿಂದಾಗಿ ನನಗೆ ರಾತ್ರಿ ಶಾಲೆಯನ್ನು ಮುನ್ನಡೆಯಿಸಲು ಅಸಾಧ್ಯವಾದುದರಿಂದ, ಮರುದಿನದಿಂದಲೇ ಅದನ್ನು ಮುಚ್ಚಿರುವೆನೆಂದೂ, ಹಾಗಾಗಿ ಇನ್ನು ಮುಂದೆ ಶಾಲೆಯನ್ನು ತೆರೆಯುವ ಅಗತ್ಯವಿಲ್ಲವೆಂದೂ, ಶಾಲಾ ರಿಕಾರ್ಡುಗಳನ್ನು ಸರಕಾರದ ವಶ ಒಪ್ಪಿಸಬೇಕೆಂದೂ ರಿಜಿಸ್ತ್ರಿ ನೋಟೀಸು ಕೊಟ್ಟೆನು.

ಮತ್ತೊಂದು ಪತ್ರವನ್ನು ವಿದ್ಯಾ ಇಲಾಖೆಗೆ ಬರೆಯುತ್ತ, ತನ್ನ ತಾಪತ್ರಯದಿಂದಾಗಿ, ತಾನು ಮರುದಿನದಿಂದಲೇ ಶಾಲೆಯನ್ನು ಮುಚ್ಚಿರುವುದಾಗಿಯೂ, ಶಾಲಾ ಸೊತ್ತುಗಳನ್ನು ರಾತ್ರಿ ಶಾಲಾ ಅಧ್ಯಾಪಕರಿಂದ ಪಡೆಯಬೇಕೆಂದೂ ರಿಜಿಸ್ತ್ರಿ ಮಾಡಿ ಕಳುಹಿಸಿದೆನು.

ಅಧ್ಯಾಪಕರಿಗೆ ನನ್ನ ನೋಟೀಸು ತಲ್ಪಿದೊಡನೆ, ಅವರು ಸಂತೋಷದಿಂದ ಕುಣಿದಿರಬೇಕು. ಈ ತನಕ ನನ್ನ ಕೈಯಲ್ಲಿದ್ದ ಆ ಶಾಲೆಯ ಅಧಿಕಾರವು, ನನ್ನ ನೋಟೀಸಿನಿಂದಾಗಿ ನಿರಾಯಾಸವಾಗಿ ತನ್ನ ಕೈಗೆ ಬಂತೆಂದು ಅವರು ತಿಳಿದಿರಬೇಕು. ಮುಂದೆ ಸುಮಾರು ಮೂರು ತಿಂಗಳು ಅವರು ರಾತ್ರಿ ಶಾಲೆಯನ್ನು ನಡಿಸಿದರು. ಆದರೆ, ಸಕಾಲದಲ್ಲಿ ಬರಬೇಕಾಗಿದ್ದ ಸರಕಾರದ ಸಹಾಯ ಧನವು ಬರಲಿಲ್ಲ.

ನಾನು ಶಾಲೆ ಮುಚ್ಚಿದ ಮೂರನೇ ತಿಂಗಳಲ್ಲಿ ರಾತ್ರಿ ಶಾಲೆಗೆ ಅನಿರೀಕ್ಷಿತವಾಗಿ

(೧೫ನೇ ಪುಟಕ್ಕೆ ಮುಂದುವರಿದಿದೆ)

ತುರ್ತುಪರಿಸ್ಥಿತಿಯ ನಂತರ ಭಾರತದ ರೈಲ್ವೆ

★

- ಮೊಗಲ್‌ಸರಾಯಿ ಮೊದಲಾದ ಬೃಹತ್ ಜಂಕ್ಷನ್‌ಗಳಲ್ಲಿ, ರೈಲ್ವೆಯ ಕಲ್ಲಿದ್ದಲು ಇತ್ಯಾದಿ ಸರಕುಗಳು ದಾಸ್ತಾನು ಇರುವಲ್ಲಿಂದ ಕಳವಾಗಿ ಹೋಗುವ ಸೊತ್ತುಗಳ ಮೌಲ್ಯ ಅನೇಕ ಕೋಟಿ.
- ದಿನನಿತ್ಯ ಟಿಕೆಟ್ ಇಲ್ಲದೆ ಪ್ರಯಾಣಿಸುವ ಸಮಾಜ ದ್ರೋಹಿಗಳ ಸಂಖ್ಯೆ ಲಕ್ಷಾಂತರ.
- ರೈಲ್ವೆ ವೆಗನ್‌ಗಳಿಂದ ಅಪಹರಣವಾಗುವ ವಸ್ತುಗಳೂ ಹಲವು.
- ಕೆಲಸಗಾರರ ನಿಷ್ಠೆಯ ಶಿಥಿಲತೆಯಿಂದ ಆಗುವ ನಷ್ಟ, ಅನಾಹುತಗಳಿಗೂ ಕಡಿಮೆಯಿಲ್ಲ. ಇದೆಲ್ಲವನ್ನೂ, ಈಗ, ತುರ್ತುಪರಿಸ್ಥಿತಿಯ ನಂತರ ಉಚ್ಚಾಟನೆಮಾಡಲು ಸರ್ವ ಯತ್ನಗಳು ನಡೆದಿವೆ.

ತುರ್ತುಪರಿಸ್ಥಿತಿಯ ಘೋಷಣೆಯ ನಂತರ ರೈಲ್ವೆಯು ಎರಡು ರೀತಿಯ ಚಳುವಳಿಯನ್ನು ಕೈಗೊಂಡಿದೆ. ಮೊದಲನೆಯದಾಗಿ ರೈಲ್ವೆಯ ಸಿಬ್ಬಂದಿಯಲ್ಲಿ ಶಿಸ್ತು ಮತ್ತು ಸಾಮರ್ಥ್ಯಗಳನ್ನು ಬಲಪಡಿಸುವುದು, ಎರಡನೆಯದಾಗಿ, ಅದರ ಆದಾಯವು ಸೋರಿಹೋಗುತ್ತಿರುವ ಕಿಂಡಿಗಳಿಗೆಲ್ಲಾ "ಬಿರಡೆ" ಯನ್ನು ಹಾಕುವುದು—(ಎಂದರೆ, ಆದಾಯವು ಸೋರಿಹೋಗುತ್ತಿರುವುದನ್ನು ತಡೆ ಹಿಡಿಯುವುದು.)

ಪ್ರಧಾನಿಯವರು ೨೧ ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಪ್ರಕಟಿಸಿದ ತಕ್ಷಣವೇ ರೈಲ್ವೆ ಸಚಿವ ಶ್ರೀ। ಕಮಲಾಪತಿ ತ್ರಿಪಾಠಿಯವರು ವಿವಿಧ ರೈಲ್ವೆ ವಿಭಾಗಗಳಿಗೆ ಕರೆನೀಡಿ, ಈ ಗುರಿಗಳ ಸಾಧನೆಗೆ ಪರಿಣಾಮಕರ ಮತ್ತು ವ್ಯಾವಹಾರಿಕ ಕ್ರಮಗಳನ್ನೂ ಕೈಗೊಳ್ಳಲು ತಿಳಿಸಿದರು. ರೈಲ್ವೆಯ ಪ್ರಯಾಣಿಕರಿಗೆ ಉತ್ತಮ ಸೇವೆಯನ್ನು ನೀಡುವ ಮೂಲಕ ಸಂತೃಪ್ತಿಯನ್ನು ತಂದು ಕೊಡಲು ಸೂಚಿಸಿದರು.

ರೈಲ್ವೆಯು ನೀಡಿದ ಮಾರ್ಗಸೂಚಿಗಳಲ್ಲಿ ರೈಲುಗಳ ಕಾಲನಿಷ್ಠೆ, ಸಿಬಂದಿಯ ಕಾಲನಿಷ್ಠೆ. ಸ್ಥಳಕಾಯ್ದಿರಿಸುವಿಕೆಯಲ್ಲಿ ಸುಧಾರಣೆ, ಕಳ್ಳತನಗಳ ಮತ್ತು ರೈಲ್ವೆಗಳು ಆದಾಯದ ಅಪಹರಣಗಳ ತಡೆ, ಟಿಕೆಟ್‌ರಹಿತ ಪ್ರಯಾಣದ ತಡೆ ಮತ್ತು ಬೋಗಿಗಳಲ್ಲಿ ಮತ್ತು ಪ್ಲಾಟ್‌ಫಾರ್ಮ್‌ಗಳಲ್ಲಿ ಮಹತ್ವದ ನಿರ್ವಹಣೆಗಳನ್ನು ಜಾರಿಗೆ ತರಲು ತಿಳಿಸಲಾಗಿದೆ. ಇದಕ್ಕೆ ರೈಲ್ವೆ ಸಿಬ್ಬಂದಿಯಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ.

ಶಿಸ್ತು ಮತ್ತು ಹಾಜರಾತಿಯಲ್ಲಿ ಕಾಲನಿಷ್ಠೆ

ರೈಲ್ವೆ ಮಂಡಳಿ ಮತ್ತು ವಿಭಾಗೀಯ ಮುಖ್ಯ ಕಚೇರಿಗಳಲ್ಲಿ ಸಿಬ್ಬಂದಿಯವರು ಹಾಜರಾತಿಯಲ್ಲಿ ಕಾಲನಿಷ್ಠೆಯನ್ನು ಬೆಳೆಯಿಸಿಕೊಳ್ಳಲು ಅನುವಾಗುವಂತೆ ಆಗಾಗ್ಗೆ ತನಿಖೆಗಳನ್ನು ಮಾಡಲಾಗುತ್ತಿದೆ. ಮುನ್ಸೂಚನೆ ನೀಡದೆ ತನಿಖೆಗಳನ್ನು ರೈಲ್ವೆ ಕಾರ್ಯಾಗಾರಗಳಲ್ಲಿಯೂ ಕೂಡಾ ಕೈಗೊಳ್ಳಲಾಗಿದೆ,

ರೈಲ್ವೆಗಳ ಕಾಲನಿಷ್ಠೆ

ಭಾರತೀಯ ರೈಲ್ವೆಗಳು ಪ್ರತಿದಿನ ಸುಮಾರು ೧,೭೭೦ ಜೋಡಿ ದೂರಪ್ರಯಾಣದ ಮೈಲು. ಎಕ್ಸ್‌ಪ್ರೆಸ್ ಮತ್ತು ಪ್ರಯಾಣಿಕರ ರೈಲುಗಳನ್ನು ಮತ್ತು ೧೨೧೦ ಜೋಡಿ ನಗರಪ್ರಯಾಣದ ರೈಲುಗಳನ್ನು ಓಡಿಸುತ್ತಿವೆ. ಪ್ರತಿಯೊಂದು ಹಂತದಲ್ಲಿಯೂ ಈ ರೈಲು ತಮ್ಮ ವೇಳಾಪಟ್ಟಿಯನ್ನನುಸರಿಸುವಂತೆ ನೋಡಿಕೊಳ್ಳಲಾಗುತ್ತಿದೆ. ತುರ್ತುಪರಿಸ್ಥಿತಿಯ ನಂತರ, ೧೮೦ ರೈಲುಗಳ ಕಾಲನಿಷ್ಠೆಯನ್ನು ಗಮನಿಸಲಾಗುತ್ತಿದೆ. ಜೂನ್ ೩೦ಕ್ಕೆ ಮೊದಲು ವಿಭಾಗೀಯ ರೈಲುಗಳು ಶೇಕಡಾ ೬೯.೬ ಕಾಲನಿಷ್ಠೆಯನ್ನು ಹೊಂದಿದ್ದು, ತುರ್ತುಪರಿಸ್ಥಿತಿಯ ನಂತರ ಎಂದರೆ ಜೂನ್ ದ್ವಿತೀಯಾರ್ಧದಲ್ಲಿ ಇದು ಶೇಕಡಾ ೯೮ಕ್ಕೇರಿದೆ.

ಟಿಕೆಟ್‌ರಹಿತ ಪ್ರಯಾಣಿಕರ ಮೇಲೆ ಹಠಾತ್ ದಾಳಿ

ಟಿಕೆಟ್‌ರಹಿತ ಪ್ರಯಾಣವೊಂದು ರಾಷ್ಟ್ರೀಯ ದ್ರೋಹ. ಇದರಿಂದಾಗಿ ರೈಲ್ವೆಗೆ ವಾರ್ಷಿಕ ೧೫ರಿಂದ ೨೦ ಕೋಟಿ ರೂ.ಗಳ ನಷ್ಟವಾಗುತ್ತಿದೆ. ಇದನ್ನು ತಡೆಗಟ್ಟಲು ರೈಲ್ವೆಗಳು ವಿಶೇಷ ದಳಗಳನ್ನು ನೇಮಿಸಿವೆ, ಆದರೂ. ಪಶ್ಚಿಮ ಬಂಗಾಳ, ಒರಿಸ್ಸಾ, ಬಿಹಾರ ಮತ್ತು ಉತ್ತರಪ್ರದೇಶಗಳಲ್ಲಿ ಟಿಕೆಟ್‌ರಹಿತ ಪ್ರಯಾಣಿಕರು ಒಂದುಗೂಡಿ ತನಿಖಾಧಿಕಾರಿಗಳ ಮೇಲೆ ಹಲ್ಲೆಮಾಡಿದ ಪ್ರಕರಣಗಳೂ ಇವೆ. ಇದನ್ನು ತಡೆಗಟ್ಟಲು ಪ್ರಯಾಣಿಕರ ಮೇಲೆ ನಡೆಸಿದ ಹಠಾತ್ ದಾಳಿಗಳಿಂದ ಒಂದು ವಾರದ ಅವಧಿಯಲ್ಲಿಯೇ ೪೦ ಸಾವಿರ ಜನರನ್ನು ಹಿಡಿಯಲಾಗಿದ್ದು, ಅವರಿಂದ ೫.೫ ಲಕ್ಷ ರೂ.ಗಳನ್ನು ವಸೂಲುಮಾಡಲಾಗಿದೆ. ಅವರಲ್ಲಿ ೬ ಸಾವಿರ ಪ್ರಯಾಣಿಕರ ಮೇಲೆ ಖಟ್ಲೆ ಹಾಕಲಾಗಿದೆಯಲ್ಲದೆ, ೩.೩೦೦ ಜನರನ್ನು ಜೈಲಿಗೆ ಕಳಿಸಲಾಗಿದೆ.

ರೈಲ್ವೆ ಆಸ್ತಿಯ ಕಳ್ಳತನ

ಪ್ರಯಾಣಿಕರು ರೈಲ್ವೆಗೆ ಒಪ್ಪಿಸಿದ ಸಾಮಾನು ಮತ್ತು ರೈಲ್ವೆಯ ಆಸ್ತಿಗಳ ಕಳ್ಳತನ ರೈಲ್ವೆಗೆ ಪರಿಹರಿಸಲಾಗದ ತಲೆನೋವಾಗಿ ಪರಿಣಮಿಸಿದೆ. ಪಶ್ಚಿಮ ಬಂಗಾಳ, ಉತ್ತರಪ್ರದೇಶ, ಬಿಹಾರ ಮತ್ತು ಆಂಧ್ರಪ್ರದೇಶದ ಕೆಲವು ಪ್ರದೇಶಗಳು ಇಂತಹ ಕಳ್ಳತನಗಳಿಗೆ ಕುಪ್ರಸಿದ್ಧ. ಇದನ್ನು ತಡೆಗಟ್ಟಲು ರೈಲ್ವೆ ರಕ್ಷಣಾದಳ ಮತ್ತು ರಾಜ್ಯಸರ್ಕಾರಗಳ ರೈಲ್ವೆ ಪೋಲೀಸ್ ದಳಗಳಲ್ಲಿ ಸಮನ್ವಯವನ್ನು ಸಾಧಿಸಲಾಗುತ್ತಿದೆ.

ತುರ್ತುಪರಿಸ್ಥಿತಿಯ ನಂತರ ರೈಲ್ವೆಗಳು ಕೈಗೊಂಡಿರುವ ಅನೇಕ ಕ್ರಮಗಳು ಪ್ರಯಾಣಿಕರಿಗೆ ಅನೇಕ ರೀತಿಯಲ್ಲಿ ಪರಿಹಾರವನ್ನೂ ನೀಡಿದ್ದು, ಅವರ ಪ್ರಯಾಣವು ಸುಗಮವಾಗುವಂತೆ ಮಾಡಿವೆ. ತುರ್ತುಪರಿಸ್ಥಿತಿಯಿಂದಾಗಿ ಉಂಟಾಗಿರುವ ತೃಪ್ತಿಕರ ಫಲಿತಾಂಶಗಳು ಶಾಶ್ವತವಾಗಿ ನೆಲಸಿ, ರೈಲ್ವೆಗಳು ಇನ್ನೂ ಉತ್ತಮ ಸೇವೆಯನ್ನು ಪ್ರಯಾಣಿಕರಿಗೆ ಒದಗಿಸುವುದರಲ್ಲಿ ಸಂದೇಹವಿಲ್ಲ.

ಮನುಷ್ಯನ ವ್ಯಕ್ತಿತ್ವ

ಮನುಷ್ಯರ ಪ್ರಮುಖ ಮುಂದಾಳುಗಳನ್ನು ತೆಗೆದುಕೊಂಡರೆ ಯಾವಾಗಲೂ ಅವರ ವ್ಯಕ್ತಿತ್ವ ಬಹಳ ಮುಖ್ಯವೆಂಬುದನ್ನು ನೋಡುತ್ತೇವೆ. ಹಿಂದಿನ ಮಹಾಕವಿಗಳು, ಆಲೋಚನಾಪರರು, ಎಲ್ಲರನ್ನೂ ತೆಗೆದುಕೊಳ್ಳಿರಿ. ನಿಜವಾಗಿ ನೋಡಿದರೆ ಅವರು ಎಷ್ಟು ಹೊಸ ಆಲೋಚನೆಯನ್ನು ಮಾಡಿರುವರು? ಹಿಂದಿನ ಮಾನವ ಕೋಟಿಯ ಪ್ರಮುಖರು ಬಿಟ್ಟಿರುವ ಬರವಣಿಗೆಯನ್ನೆಲ್ಲ ತೆಗೆದುಕೊಳ್ಳಿರಿ. ಅವರ ಪ್ರತಿಯೊಂದು ಗ್ರಂಥವನ್ನೂ ತೆಗೆದುಕೊಂಡು ಪರೀಕ್ಷೆಮಾಡಿ ನೋಡಿ. ಪ್ರಪಂಚದಲ್ಲಿ ಇದುವರೆಗೆ ಮಾಡಿದ ಹೊಸದಾದ ನಿಜವಾದ ಆಲೋಚನೆಗಳು ಬಹಳ ಅಲ್ಪ. ಅವರು ನಮಗೆ ಬಿಟ್ಟಿರುವ ಆಲೋಚನೆಯನ್ನು ಅವರ ಗ್ರಂಥದಲ್ಲಿ ಓದಿ ನೋಡಿ. ಅದರ ಗ್ರಂಥಕರ್ತರು ಮಹಾ ವಿಭೂತಿಗಳಂತೆ ತೋರುವುದಿಲ್ಲ. ಆದರೂ ಅವರ ಕಾಲದಲ್ಲಿ ಅವರು ದೊಡ್ಡವರಾಗಿದ್ದರು. ಹೀಗೆ ಅವರನ್ನು ಮಾಡಿದುದು ಯಾವುದು? ಅವರು ಮಾಡಿದ ಆಲೋಚನೆ ಮಾತ್ರವಲ್ಲ? ಬರೆದ ಗ್ರಂಥಮಾತ್ರವಲ್ಲ, ಕೊಟ್ಟ ಭಾಷಣವಲ್ಲ, ಅದು ಈಗ ನಮಗೆ ದೊರಕದ ಮತ್ತಾವುದೋ ಒಂದು; ಅದೇ ವ್ಯಕ್ತಿತ್ವ. ಮನುಷ್ಯನ ವ್ಯಕ್ತಿತ್ವ ಮೂರನೆ ಎರಡು ಭಾಗ, ಆವನ ಬುದ್ಧಿ ಮಾತುಕತೆಯೆಲ್ಲ ಮೂರನೆಯ ಒಂದು ಭಾಗ. ಮನುಷ್ಯನ ನಿಜವಾದ ಸ್ವರೂಪವೇ, ಮನುಷ್ಯನ ವ್ಯಕ್ತಿತ್ವವೇ ನಮ್ಮಲ್ಲಿ ಸಂಚರಿಸುತ್ತಿದೆ.

ಸ್ವಾಮಿ ವಿವೇಕಾನಂದ.

——

ಗಣೇಶೋತ್ಸವ ಸಿದ್ಧತೆ

ಬಾರಕೂರಿನ ಶ್ರೀ ಪಟ್ಟಾಭಿ ರಾಮಚಂದ್ರ ದೇವಸ್ಥಾನದಲ್ಲಿ ಕಳೆದ ಏಳು ವರ್ಷಗಳಂತೆ ಈ ವರ್ಷವೂ ಸಪ್ಟೆಂಬರ್ 9ರಿಂದ 11ರ ವರೆಗೆ ಮೂರು ದಿನಗಳ ಕಾರ್ಯಕ್ರಮದಿಂದ ಮಂಗಳೂರು ಗಣೇಶ ಬೀಡಿ ವರ್ಕ್ಸ್, ಮೈಸೂರು ಇವರ ಉದಾರಾಶ್ರಯದಲ್ಲಿ ಗಣೇಶೋತ್ಸವವು ನಡೆಯಲಿದ್ದು ಆ ಬಗ್ಗೆ ಗಣೇಶೋತ್ಸವ ಸಮಿತಿಯೊಂದು ರಚನೆಯಾಗಿ ಭರದಿಂದ ಸಿದ್ಧತೆ ನಡೆಸುತ್ತಿರುವುದು.

ಮಂಗಳೂರು ನೋರ್ತ್ ರೋಟರಿ ಕ್ಲಬ್ ಸಭೆ

ಮಂಗಳೂರು ನೊರ್ತ್ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ಇತ್ತೀಚೆಗೆ ಹಿಂದಿಪ್ರಚಾರ ಸಮಿತಿ ಸದನದಲ್ಲಿ ಜರಗಿದಾಗ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಉಪಾಧ್ಯಕ್ಷ ಶ್ರೀ ಕೆ. ಕೆ. ಮಂಡಲ್ ಅವರು ಮುಖ್ಯ ಅತಿಥಿಯಾಗಿ ಬ್ಯಾಂಕುಗಳ ಸೇವೆಯ ಕುರಿತು ಭಾಷಣಮಾಡಿದರು. 'ರಾಷ್ಟ್ರೀಕೃತ ಬ್ಯಾಂಕುಗಳು ಸಾಲದ ಮೇಲೆ ಶೇಕಡಾ 16 ಅಥವಾ 18ರ ದರದಲ್ಲಿ ಬಡ್ಡಿ ಸ್ವೀಕರಿಸುತ್ತಿವೆಯಾದರೂ ಆ ಬಡ್ಡಿದರವು ಅತಿಯಾಗಿಲ್ಲ. ಗ್ರಾಹಕರಿಗೆ ಬ್ಯಾಂಕ್ ಪೂರೈಸುತ್ತಿರುವ ಉಚಿತ ಸೇವೆಯನ್ನೆಲ್ಲಾ ಪರಿಗಣಿಸಿದಾಗ ಬ್ಯಾಂಕು ನಿಜವಾಗಿ ಸ್ವೀಕರಿಸುತ್ತಿರುವ ಬಡ್ಡಿಯು ಶೇಕಡಾ ನಾಲ್ಕರಷ್ಟು ಮಾತ್ರ. ವಿದೇಶಗಳಲ್ಲಿ ಉದ್ದಿಮೆ ಬಡ್ಡಿದರವು ತೋರಿಕೆಗೆ ಕಡಿಮೆ ಎನಿಸಿದರೂ ಅಲ್ಲಿನ ಬ್ಯಾಂಕುಗಳಲ್ಲಿ ಪ್ರತಿಯೊಂದು ಚಟುವಟಿಕೆಗೂ ತೆರಬೇಕಾಗಿದೆ. ಬ್ಯಾಂಕ್ ನೌಕರರ ಸೇವೆ ತೃಪ್ತಿಕರವಾಗಿಲ್ಲವೆನ್ನುವುದೂ ಸರಿಯಲ್ಲ. ಕಲ್ಕತ್ತ, ಮುಂಬೈಗಳಂಥ ಶಹರುಗಳಲ್ಲಿ ದಿನವೊಂದಕ್ಕೆ ವ್ಯವಹಾರಕ್ಕೆ ಬರುವ ಲಕ್ಷಾಂತರ ಚೆಕ್‌ಗಳ ಸಂಖ್ಯೆ ಗಮನಿಸಿದರೆ ಬ್ಯಾಂಕ್‌ಗಳ ಸೇವೆಯ ಪರಿಮಾಣ ಅರ್ಥವಾದೀತು" ಮುಂತಾಗಿ ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ಹೇಳಿದರು.

ಶ್ರೀ ಚಂದ್ರರಾಜ ಶೆಟ್ಟರಿಗೆ ಸನ್ಮಾನ

ಕನ್ನಡ ಸಾಹಿತಿಯಾಗಿ, ಅಧ್ಯಾಪಕರಾಗಿ, ಚಿತ್ರಗಾರನಾಗಿ, ಅದಕ್ಕಿಂತಲೂ ವಿಶೇಷವಾಗಿ 'ಕನ್ನಡ ಬರಹಗಾರರ ಬಳಗ' ಎಂಬ 4 ಸಂಪುಟಗಳನ್ನು ಸಂಗ್ರಹಿಸಿದ ಶ್ರೀ ಟಿ. ಚಂದ್ರರಾಜ ಶೆಟ್ಟಿ, ಸಿದ್ಧಕಟ್ಟೆ ಅವರನ್ನು ಮಂಗಳೂರು ಕನ್ನಡ ಸಂಘದ ನೇತೃತ್ವದಲ್ಲಿ ಅಗೋಸ್ತು 24ರಂದು ಮಂಗಳೂರಲ್ಲಿ ಸನ್ಮಾನಿಸಿ ಅವರಿಗೆ ನಿಧಿ ಸಮರ್ಪಿಸಲು ನಿರ್ಣಯಿಸಲಾಗಿದೆ. ನಿಧಿಗೆ ಧನ ಸಹಾಯ ನೀಡಲಿಚ್ಛಿಸುವ ಶ್ರೀ ಶೆಟ್ಟರ ಅಭಿಮಾನಿಗಳು ಮತ್ತು ಹಿತಚಿಂತಕರು ನಿಧಿಸಂಗ್ರಹಾಧಿಕಾರಿಗಳಾದ ಶ್ರೀ ಎಂ. ಎಸ್. ಆಚಾರ್, ಅಧ್ಯಾಪಕ, ವಿಜಯಮಹಲ್ ಸುರತ್ಕಲ್, ಇವರಿಗೆ ತಲಪಿಸಬೇಕಾಗಿ ವಿನಂತಿಸಲಾಗಿದೆ.

10 ಭಕ್ತಿಗೀತೆಗಳ ಎಲ್. ಪಿ. ರೆಕಾರ್ಡ್ ಬಿಡುಗಡೆ

ಭಾರತೀಯ ವಿದ್ಯಾಭವನದ ಗೌರವ ಸದಸ್ಯೆ ಪದ್ಮವಿಭೂಷಣ ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರು ಹಾಡಿದ ಭಾರತೀಯ ಉಚ್ಚ ಸಂಸ್ಕೃತಿಯ ಪ್ರತೀಕದಂತಿರುವ ಹತ್ತು ಭಕ್ತಿಗೀತಗಳ ಎಲ್. ಪಿ. ರೆಕಾರ್ಡ್‌ದಿಂದ ಬರಬಹುದಾದ ವರಮಾನವನ್ನೆಲ್ಲಾ ಭಾರತೀಯ ವಿದ್ಯಾಭವನಕ್ಕೆ ಶ್ರೀಮತಿಯವರು ಉದಾರ ದಾನವಾಗಿತ್ತಿದ್ದು ಆ ರೆಕಾರ್ಡನ್ನು ಬಿಡುಗಡೆಗೊಳಿಸುವ ಸಮಾರಂಭವು ಭಾರತೀಯ ವಿದ್ಯಾಭವನದ ದೇಶದಾದ್ಯಂತ ಹಾಗು ವಿದೇಶದ ಕೇಂದ್ರಗಳಲ್ಲಿ ತಾ. 9ರಂದು ನಡೆಯಿತು. ಮಂಗಳೂರು ಕೇಂದ್ರದಲ್ಲಿ ಕೇಂದ್ರದ ಅಧ್ಯಕ್ಷ ಶ್ರೀ ಮಧುಸೂದನ ಡಿ. ಕುಶೆಯವರ ಅಧ್ಯಕ್ಷತೆಯಲ್ಲಿ ನಡೆದ ಸರಳಸಮಾರಂಭದಲ್ಲಿ ಪ್ರೊ! ಕೆ. ಎ. ಕೃಷ್ಣಮೂರ್ತಿಯವರು ಅದನ್ನು ಬಿಡುಗಡೆಗೊಳಿಸಿದರು. ಶ್ರೀಮತಿ ವಿಜಯಾ ವರದರಾಜನ್ ಅವರು 10 ಬೇರೆ ಬೇರೆ ಭಾರತೀಯ ಭಾಷೆಗಳ ಹಾಡುಗಳ ಸಂಕ್ಷಿಪ್ತ ಪರಿಚಯಮಾಡಿಕೊಟ್ಟಿದ್ದರು. ಮಂಗಳೂರಲ್ಲಿ ಎಚ್. ಎಮ್. ವಿ. ರೆಕಾರ್ಡ್‌ಗಳ ಅಧಿಕೃತ ಮಾರಾಟಗಾರರಾದ ಮೆಲಡಿ ಹೌಸ್ ಮ್ಹಾಲಕ ಶ್ರೀ ಕೆ. ಪುಂಡಲೀಕ ನಾಯ್ಡು ಮುಖ್ಯ ಅತಿಥಿಗಳಿಗೆ ಎರಡು ರೆಕಾರ್ಡ್‌ಗಳನ್ನು ಅರ್ಪಿಸಿ, ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದ್ದರು.

ಕೊಲೆ ಆರೋಪಿಗಳ ಬಿಡುಗಡೆ

ಕುಂದಾಪುರ ತಾಲೂಕಿನ ಶ್ರೀ ಬಾಲಕೃಷ್ಣ ಎಂಬವರಿಗೆ ಮಾರಕ ಆಯುಧಗಳಿಂದ ಹೊಡೆದು ತೀವ್ರ ಜಖಂಗೊಳಿಸಿ ಕೊಲೆಮಾಡಿರುವ ಆರೋಪದ ಮೇಲೆ ಅದೇ ತಾಲೂಕಿನ 13 ಮಂದಿಯ ವಿರುದ್ಧ ಮಂಗಳೂರು ಸೆಶನ್ಸ್ ನ್ಯಾಯಾಲಯದಲ್ಲಿ ಹೂಡಲಾಗಿದ್ದ ಮೊಕದ್ದಮೆಯ ನ್ಯಾಯ ವಿಚಾರಣೆ ನಡೆಸಿದ ಸೆಶನ್ಸ್ ನ್ಯಾಯಾಧೀಶರಾದ ಶ್ರೀ ಪಿ. ವಿ. ಕುಲಕರ್ಣಿಯವರು ಸೂಕ್ತ ಆಧಾರಗಳೊಂದಿಗೆ ಸದ್ರಿ 13 ಮಂದಿಯನ್ನು ಆರೋಪದಿಂದ ಮುಕ್ತಗೊಳಿಸಿ ಬಿಡುಗಡೆಗೊಳಿಸಿದ್ದಾರೆ.

ಸಿಡುಬು ರೋಗದ ಪೂರ್ಣ ಉಚ್ಚಾಟನೆ!

ಜಾಗತಿಕ ಆರೋಗ್ಯ ಸಂಸ್ಥೆ ಹಾಗೂ ವಿವಿಧ ರಾಷ್ಟ್ರಗಳ ಸಹಕಾರದಿಂದ ಸತತ ಯತ್ನ ನಡೆಸಿದ ಫಲವಾಗಿ, ಸಾವಿರಾರು ವರ್ಷಗಳಿಂದ ಲಕ್ಷಾಂತರ ಮಂದಿಯ ಬಲಿ ತೆಗೆದುಕೊಳ್ಳುತ್ತಿದ್ದ ಹಾಗೂ ಕೋಟ್ಯಾವಧಿ ಜನರನ್ನು ವಿರೂಪಗೊಳಿಸುತ್ತಿದ್ದ ಸಿಡುಬು ರೋಗವು, ಜಗತ್ತಿನ ಒಂದೆರಡು ದೇಶಗಳ ಹೊರತು ಭಾರತ ಸಹಿತ ಎಲ್ಲ ದೇಶಗಳಿಂದಲೂ ಪೂರ್ಣ ಉಚ್ಚಾಟನೆಗೊಂಡಿತು-ಎಂಬುದಿದು 1975ರ ಅತ್ಯಂತ ಮಹತ್ವದ ವರದಿ.

ಇ. ಎಸ್. ಐ. ಆಸ್ಪತ್ರೆಯ ನಿರ್ಮಾಣ ಆರಂಭ

ಕರ್ನಾಟಕ ರಾಜ್ಯ ಕಾರ್ಮಿಕರ ವಿಮಾ ಯೋಜನೆಯ ಅಂಗವಾಗಿ ಮಂಗಳೂರಲ್ಲಿ ಸ್ಥಾಪಿತವಾಗಲಿರುವ 38 ಲಕ್ಷ ರೂಪಾಯಿ ವೆಚ್ಚದ ಇ. ಎಸ್. ಐ. ಆಸ್ಪತ್ರೆಗಾಗಿ ಮಂಗಳೂರು ಬೆಂದೂರಲ್ಲಿರುವ ಸೈಂಟ್ ಆಗ್ನೆಸ್ ಕೊಲೇಜಿನ ಹಿಂದುಗಡೆಯ ಪ್ರಶಾಂತ ಸ್ಥಳದಲ್ಲಿ ಐದು ಎಕ್ರೆ ವಿಸ್ತೀರ್ಣದ ನಿವೇಶನವನ್ನು ಸರಕಾರವು ಸ್ವಾಧೀನಪಡಿಸಿದ್ದು ಅಲ್ಲಿ ಆಸ್ಪತ್ರೆಯ ನಿರ್ಮಾಣ ಕಾರ್ಯ ಈಗಾಗಲೇ ಆರಂಭಗೊಂಡಿದ್ದು ಒಂದೂವರೆ ವರ್ಷದ ದಾಖಲೆ ಅವಧಿಯೊಳಗೆ ಅದು ಪೂರ್ತಿಗೊಳ್ಳುವ ಭರವಸೆಯನ್ನು ಇ. ಎಸ್. ಐ. ಮೆಡಿಕಲ್ ಅಧಿಕಾರಿ ಡಾ! ನಾಯ್ಡುರವರು ವ್ಯಕ್ತಪಡಿಸಿರುವರು.

ಮೂಲ್ಕಿ ನಗರಸಭೆ

ಮೂಲ್ಕಿ ಪುರಸಭಾಧ್ಯಕ್ಷರಾಗಿ ಶ್ರೀ ಶೇಖರ ವಿ. ಕೋಟ್ಯಾನ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಭೋಜ ಎಸ್. ಅಮೀನ್ ಆಯ್ಕೆಯಾಗಿರುವರು.

—೦—

ಔಷಧೀಯ
ಅಧ್ಯಯನದ

(ಪಾವೆಲ್ ಚೆಕೋವ್, ಸೋ
ಸಸ್ಯಗಳ ಸಂಶೋಧನಾ ಇ



ಭಾರತೀಯ ಸಸ್ಯವೊಂದನ್ನು ಅಧ್ಯಯನಮಾಡುತ್ತಿರುವುದು.

ಅತ್ಯಂತ ಪರಿಣಾಮಕರವಾದ ಔಷಧ ವಸ್ತುಗಳ ತಯಾರಿಕೆಗಾಗಿ ಔಷಧೀಯ ಸಸ್ಯಗಳ ಉಪಯೋಗದ ಅನುಭವ ವಿನಿಮಯವು ಸೋವಿಯತ್ ಒಕ್ಕೂಟ ಮತ್ತು ಭಾರತಗಳ ನಡುವಣ ವ್ಯಾಪಕ ವೈಜ್ಞಾನಿಕ ಸಹಕಾರದ ಒಂದು ರೂಪವಾಗಿದೆ. ನಮ್ಮ ಇನ್‌ಸ್ಟಿಟ್ಯೂಟಿನ ಅನೇಕ ಸಂಶೋಧನಕಾರರು ಭಾರತಕ್ಕೆ ವಿಜ್ಞಾನಗಳ ಅಧ್ಯಯನಕ್ಕೆ ಸಂಬಂಧಿಸಿ ಭೇಟಿ ನೀಡಿದ್ದಾರೆ.

ಭಾರತದಿಂದಲೂ ವಿಶೇಷಜ್ಞರುಗಳು ಮತ್ತು ವಿಜ್ಞಾನಿಗಳ ನಿಯೋಗಗಳು ನಮ್ಮ ಇನ್‌ಸ್ಟಿಟ್ಯೂಟಿಗೆ ಮತ್ತು ಅದರ ವಲಯ ಪ್ರಾಯೋಗಿಕ ಕೇಂದ್ರಗಳಿಗೆ ಹೆಚ್ಚು ಕಡಿಮೆ ಪ್ರತಿ ವರ್ಷ ಭೇಟಿ ನೀಡುತ್ತವೆ.



ಕಾರ್ಖಾನೆಯ ವಿಭಾಗಗಳಲ್ಲೊಂದರಲ್ಲಿ.

ಔಷಧ ಉದ್ದೇಶಗಳಿಗಾಗಿ ಭಾರತೀಯ ಸಸ್ಯಗಳನ್ನು ಉಪಯೋಗಿಸುವುದರಲ್ಲಿ ಸಿರಿವಂತ ಅನುಭವ ಗಳಿಸಿರುವ ಭಾರತದ ದೇಶೀ ಔಷಧಿಯು ಅನೇಕ ವರ್ಷಗಳಿಂದ ಸೋವಿಯತ್ ವಿಜ್ಞಾನಿಗಳ ಲಕ್ಷ್ಯವನ್ನು ಸೆಳೆಯುತ್ತಿದ್ದಿತು.

ನಮ್ಮ ವಿಶೇಷಜ್ಞರುಗಳು ಮಾಡಿದ ಪ್ರವಾಸಗಳ ಮುಖ್ಯ ಗುರಿಯು, ಗಿಡ ಮೂಲಿಕೆ ತಯಾರಿಕೆಗಳ ಕ್ಷೇತ್ರದಲ್ಲಿ ಭಾರತೀಯ ವೈಜ್ಞಾನಿಕ ಸಂಸ್ಥೆಗಳು ಗಳಿಸಿರುವ ಇತ್ತೀಚಿಗಿನ ಸಾಧನೆಗಳನ್ನು, ದೇಶೀ ಔಷಧಿಯ ಅನುಭವಗಳು.ೀ ಅನೇಕ ಔಷಧೀಯ ಸಸ್ಯಗಳನ್ನು ಬೆಳೆಯುವ ವಿಧಾನಗಳನ್ನು ಅಧ್ಯಯನ ಮಾಡುವುದು ಹಾಗೂ ಬೀಜಗಳು, ಒಣ ಸಸ್ಯಗಳು ಮತ್ತು ಸಸ್ಯಗಳನ್ನು ನೆಡುವ ಸಾಮಗ್ರಿಗಳನ್ನು ಸಂಗ್ರಹಿಸುವುದು ಆಗಿದ್ದಿತು.

ಸೋವಿಯತ್ ವಿಜ್ಞಾನಿಗಳು ವಿಭಿನ್ನ ಭಾರತೀಯ ರಾಜ್ಯಗಳಿಗೆ ಭೇಟಿ ನೀಡಿ, ಅಲ್ಲಿಯ ಪ್ರಮುಖ ವೈಜ್ಞಾನಿಕ ಇನ್‌ಸ್ಟಿಟ್ಯೂಟುಗಳು, ವಿಶ್ವವಿದ್ಯಾಲಯಗಳು. ಪ್ರಯೋಗಶಾಲೆಗಳು, ಔಷಧೀಯ ಸಸ್ಯಗಳನ್ನು ಬೆಳೆಯುವ ಕ್ಷೇತ್ರಗಳ, ವಿಶೇಷವಾಗಿ, 'ಸಿ. ಐ. ಎಮ್. ಪಿ, ಓ.' ಮತ್ತು ಲಕ್ನೋದಲ್ಲಿರುವ ಕೇಂದ್ರ ಔಷಧೀಯ ಸಂಶೋಧನಾ ಇನ್‌ಸ್ಟಿಟ್ಯೂಟಿನ ಕೆಲಸದ ಪರಿಚಯ ಪಡೆದರು. ಅವರು ಜಮ್ಮುವಿನಲ್ಲಿರುವ ಪ್ರಾದೇಶಿಕ ಸಂಶೋಧನಾ ಪ್ರಯೋಗಶಾಲೆಯ ಕೆಲಸ ಮತ್ತು ಸಂಶೋಧನೆ ಕಾರ್ಯಕ್ರಮಗಳ ಪ್ರಮಾಣವನ್ನು ಕಂಡು ತುಂಬಾ ಪ್ರಭಾವಿತರಾದರು.

ಕಲ್ಕತ್ತ, ಡಾರ್ಜಿಲಿಂಗ್, ಬೆಂಗಳೂರು, ಊಟಿ, ಕೂನೂರು ಮತ್ತಿತರ ಸ್ಥಳಗಳಲ್ಲಿರುವ ಭಾರತದ ಪ್ರಸಿದ್ಧ ಸಸ್ಯ ವಿಜ್ಞಾನ ಉದ್ಯಾನಗಳಲ್ಲಿ ನಡೆಸಲಾಗುತ್ತಿರುವ ಕೆಲಸದೊಂದಿಗೆ ಪರಿಚಯ ಪಡೆಯುವ ಅವಕಾಶವು ನಮ್ಮ ವಿಶೇಷಜ್ಞರುಗಳಿಗೆ ಲಭಿಸಿತು. ಔಷಧೀಯ ಸಸ್ಯಗಳ ಸಂಶೋಧನಾ ಇನ್‌ಸ್ಟಿಟ್ಯೂಟಿನ ವೈಜ್ಞಾನಿಕ ಕಾರ್ಯಕರ್ತರುಗಳು ಕೇರಳದಲ್ಲಿರುವ ಪೆರಿಯಾರ್ ನಿಸರ್ಗ ರಕ್ಷಿತ ಪ್ರದೇಶಕ್ಕೆ ಕೂಡ ಭೇಟಿ ನೀಡಿದರು ಮತ್ತು ಅನ್ನಾಮಲೈ ಬೆಟ್ಟಗಳಿಂದ ಬೀಜಗಳನ್ನು ಮತ್ತು ಗಿಡ ಮೂಲಿಕೆಗಳನ್ನು ಸಂಗ್ರಹಿಸಿದರು. ಈ ಗಿಡ ಮೂಲಿಕೆಗಳನ್ನು ಅನಂತರ ಮಾಸ್ಕೋ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲಾಯಿತು.

ಸೋವಿಯತ್ ವಿಶೇಷಜ್ಞರುಗಳು ಭಾರತದಿಂದ ಸುಮಾರು ೨೦೦ ಜಾತಿಯ ಅಮೂಲ್ಯ ಔಷಧೀಯ ಸಸ್ಯಗಳನ್ನೂ ಮತ್ತು ನೂರಾರು ಗಿಡ ಮೂಲಿಕೆ ತೊಗಟೆಗಳನ್ನೂ ತಂದಿದ್ದಾರೆ.

ಕೆಲವು ಭಾರತೀಯ ಸಸ್ಯಗಳು ಅತ್ಯುತ್ತಮವಾಗಿ ಪಶ್ಚಿಮ ಜಾರ್ಜಿಯಾದ ತೇವವುಳ್ಳ ಉಷ್ಣವಲಯಕ್ಕೆ ಹೊಂದಿಕೊಂಡಿದೆ. ಇದರಿಂದ ನಮ್ಮ ದೇಶದ ಆರೋಗ್ಯ ಸೇವೆಗಳಿಗೆ ಬೇಗನೇ ಅನೇಕ ಅಮೂಲ್ಯವಾದ ಔಷಧಿಗಳನ್ನು ಒದಗಿಸಲು ಸಾಧ್ಯವಾಗುತ್ತದೆ.

ಭಾರತೀಯ ವಿಶೇಷಜ್ಞರುಗಳು ತಮ್ಮ ಪತಿಯಿಂದ, ಅವರ ಸೋವಿಯತ್ ಸಹೋದ್ಯೋಗಿಗಳ ಕೆಲಸದ ಪರಿಚಯ ಪಡೆಯಲು, ನಮ್ಮ ಇನ್‌ಸ್ಟಿಟ್ಯೂಟಿನ ಪ್ರಯೋಗಶಾಲೆಗಳಿಗೆ ಮತ್ತು ಅದರ ವಲಯ ಪ್ರಾಯೋಗಿಕ ಕೇಂದ್ರಗಳಿಗೆ ಭೇಟಿ ನೀಡಲು ಮತ್ತು ಅವರಿಗೆ ಆಸಕ್ತಿಯಿರುವ ಸಸ್ಯಗಳ ಬೀಜಗಳನ್ನು ಪಡೆಯಲು ಅವಕಾಶವನ್ನು ಪಡೆದರು.

೧. ಪ್ರಜಾಸತ್ತೆಯ ರಕ್ಷಣೆಯ
೨. ಪ್ರಧಾನ ಮಂತ್ರಿಗಳ ಕ್ರಾ
ನಾವದನ್ನು ಯಶಸ್ವಿಗೊ
೩. ದುಡಿಮೆ ಹೆಚ್ಚು ಮಾಡಿ
೪. ಕಪ್ಪುಹಣದ ಕದೀಮರಿಗೆ
೫. ಸರ್ಕಾರಿ ನೌಕರರ ಕೆಲಸ
೬. ಹಾರಿಕೆ ಸುದ್ದಿ ಹರಡುವ
೭. ನಾವು ನಾಡನ್ನು ಕಟ್ಟೋ
೮. ಇಂದಿನ ಅವಶ್ಯಕತೆ—ಶಿ
೯. ಭ್ರಷ್ಟ ಜನರನ್ನು ಹಿಡಿಯ
೧೦. ಅಧಿಕ ಉತ್ಪತ್ತಿ, ದೇಶಕ್ಕೆ
೧೧. ಪ್ರಾಮಾಣಿಕ ಕೆಲಸಗಾರರ
೧೨. ಬೇಗ ಕೆಲಸಮಾಡಿರಿ, ದೇ
೧೩. ರಾಷ್ಟ್ರದ ನಷ್ಟ. ನಮ್ಮ ನ
೧೪. ಸೌಜನ್ಯದಿಂದ ಸರ್ವರೂ

ು ಸಸ್ಯಗಳ

ಲ್ಲಿ ಸಹಕಾರ

ಯತ್ ಒಕ್ಕೂಟದ ಔಷಧೀಯ

ಸ್ಟಿಟ್ಯೂಟಿನ ಡೈರೆಕ್ಟರರು.)

ಈ ಇನ್‌ಸ್ಟಿಟ್ಯೂಟು ಸೋವಿಯತ್ ಒಕ್ಕೂಟದಲ್ಲಿ, ವೈದ್ಯಕೀಯ ಸಸ್ಯಗಳ ಅಧ್ಯಯನ ಕ್ಷೇತ್ರದಲ್ಲಿರುವ ಮತ್ತು ಆರೋಗ್ಯ ಸೇವೆಗಳಿಗಾಗಿ ಹೊಸ ಮೂಲ ಔಷಧಿಗಳ ವಿಕಾಸಕ್ಕಾಗಿ ಆ ಸಸ್ಯಗಳನ್ನು ಉಪಯೋಗಿಸುವ ಆ ತರದ ಏಕೈಕ ಸಂಸ್ಥೆಯಾಗಿದೆ. ಅದು ಮಾಸ್ಕೋ ಬಳಿಯ ನಿಸರ್ಗ ರಮ್ಯ ಪ್ರದೇಶದಲ್ಲಿ ಸ್ಥಾಪಿತವಾಗಿದೆ.

ಈ ಇನ್‌ಸ್ಟಿಟ್ಯೂಟು ಒಂಬತ್ತು ಪ್ರಾಯೋಗಿಕ ಕೇಂದ್ರಗಳನ್ನೂ ಮತ್ತು ಸೋವಿಯತ್ ಒಕ್ಕೂಟದ ವಿಭಿನ್ನ ಮಣ್ಣು ಮತ್ತು ಹವಾ ವಲಯಗಳಲ್ಲಿ ಅನೇಕ ಪ್ರಾಯೋಗಿಕ ಕೇಂದ್ರಗಳನ್ನೂ ಹೊಂದಿದೆ. ಇದು ಔಷಧೀಯ ಸಸ್ಯಗಳ ಸರ್ವತೋಮುಖ ಅಧ್ಯಯನಗಳನ್ನು ನಡೆಸಲು ಮತ್ತು ಔಷಧೀಯ ಸಸ್ಯಗಳನ್ನು ಬೆಳೆಸುವ ಪ್ರವಿಧಿಯನ್ನು ಕರಗತಮಾಡಿಕೊಳ್ಳಲು ಮತ್ತು ದೋಷರಹಿತಗೊಳಿಸಲು ಸೋವಿಯತ್ ಒಕ್ಕೂಟದ ಔಷಧೀಯ ಸಸ್ಯ ಸಂಸ್ಥೆಗಳ ಅನೇಕ ವಿಶೇಷೀಕೃತ ರಾಜ್ಯ ಕೃಷಿಕ್ಷೇತ್ರಗಳಿಗೆ ಸಹಾಯಮಾಡಲು ಸಾಧ್ಯಮಾಡಿಕೊಡುತ್ತದೆ.

ಈ ಕಾರ್ಯವನ್ನು ನೂರಕ್ಕೂ ಅಧಿಕ ಕ್ಯಾಂಡಿಡೇಟ್ಸ್ ಮತ್ತು ಡಾಕ್ಟರ್ಸ್ ಆಫ್ ಸಯನ್ಸಸ್‌ಗಳನ್ನೊಳಗೊಂಡಿರುವ ೧೫೦೦ ವಿಶೇಷಜ್ಞರುಗಳ ಸಮೂಹವು ನಡೆಸುತ್ತಿದೆ.

ಇನ್‌ಸ್ಟಿಟ್ಯೂಟು ೩೦೦ಕ್ಕೂ ಅಧಿಕ ವಿದೇಶೀ ಇನ್‌ಸ್ಟಿಟ್ಯೂಟುಗಳೊಂದಿಗೆ ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರವನ್ನು ನಡೆಸಿಕೊಂಡು ಹೋಗುತ್ತಿದೆ.

ಭವಿಷ್ಯತ್ತಿನಲ್ಲಿ ನಮ್ಮ ಇನ್‌ಸ್ಟಿಟ್ಯೂಟಿನ ಮತ್ತು ಮಿತ್ರ ಭಾರತದ ವಿಜ್ಞಾನಿಗಳ ನಡುವೆ ಸಂಪರ್ಕಗಳು ಇನ್ನೂ ಹೆಚ್ಚು ನಿಕಟಗೊಳಿಸುವುದು ಮತ್ತು ಹೆಚ್ಚು ಫಲಪ್ರದವಾಗಿರುವುದು ಎಂದು ನಾವು ಭಾವಿಸುತ್ತೇವೆ.



ಭಾರತವನ್ನೊಳಗೊಂಡು ಅನೇಕ ದೇಶಗಳ ಸಸ್ಯಗಳನ್ನು ಇನ್‌ಸ್ಟಿಟ್ಯೂಟಿನ ಈ ಶಾಖಗೃಹದಲ್ಲಿ ಬೆಳೆಯಲಾಗುತ್ತದೆ.

ಮುರ್ಜನ್ಸ್ಕಿಯ ಉದ್ದೇಶ.
ಕಾರಿ ಕಾರ್ಯಕ್ರಮ—
ಲೇಬೇಕು.
ಕಡಿಮೆ ಮಾತು ಆಡಿರಿ.
ಠೋರ ಶಿಕ್ಷೆ ಕಾದಿದೆ.
ನಸೇವೆಗಾಗಿ.
ು ದೇಶದ್ರೋಹಿಗಳು.
ಬನ್ನಿ.
ಮತ್ತು ದಕ್ಷತೆ.
ು ನೆರವಾಗಿರಿ.
ವಿಶಾಂತಿ.
, ಎಲ್ಲರೂ ಗೌರವಿಸುತ್ತಾರೆ.
ಮುಂದೆ ತಸ್ಸಿರಿ.
.
ಪುತ್ರರು.

—೦—

ಢಿಕ್ಕಿಹೊಡೆಯುವುದನ್ನು ತಪ್ಪಿಸಬಲ್ಲ ರಾಡಾರ್

ಮೋಟಾರ್ ವಾಹನಗಳ ಚಾಲಕರು ಇನ್ನುಮುಂದೆ ಒಂದು ನವೀನ ಸಾಧನದ ನೆರವು ಪಡೆಯಬಹುದು. ತತ್ವಶಃ ಈ ಸಾಧನ "ಸ್ವತಚ್ಚಲಿ ಪೈಲಟ್" ವ್ಯವಸ್ಥೆಗೆ ಸದೃಶವಾಗಿರುವುದು. ಜನರಲ್ ಮೋಟಾರ್ಸ್ ಸಂಸ್ಥೆಯ ಎಂಜಿನಿಯರುಗಳು ಒಂದು ಮೋಟಾರ್ ವಾಹನ ಸುರಕ್ಷತೆ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುತ್ತಿರುವರು. ಇದು ವಾಹನ ಢಿಕ್ಕಿಹೊಡೆಯುವ ಪರಿಸ್ಥಿತಿಯಲ್ಲಿರುವಾಗ ಅದರ ಚಾಲಕನನ್ನು ಜಾಗೃತಗೊಳಿಸಲು ರಾಡಾರನ್ನು ಬಳಸುವುದು.

ಈ ಪ್ರಾಯೋಗಿಕ ವ್ಯವಸ್ಥೆಯಲ್ಲಿ ಒಂದು ಕೇಂದ್ರ ಟ್ರಾನ್ಸ್‌ಮಿಟರ್ ಮತ್ತು ವಾಹನದ ಮುಂಭಾಗದಲ್ಲಿ ನೆಲೆಗೊಳಿಸಲಾದ ಎರಡು ಔಟ್‌ಬೋರ್ಡ್ ರಿಸೀವರ್‌ಗಳಿರುವುವು. ಅಡ್ಡಿಯೇನಾದರೂ ಎದುರಾಗುವ ಸಂಭವ ವುಂಟಾದಾಗ ರಭಸದಿಂದ ಹೊರಬರುವ ಎರಡು ಸಂಕೇತಗಳ ತರಂಗಮಾನಗಳನ್ನು ತುಲನೆಮಾಡುವ ಮೂಲಕ ಈ ಸಾಧನ ಢಿಕ್ಕಿಯಾಗುವ ಸಾಧ್ಯತೆಯನ್ನು ನಿರ್ಣಯಿಸುತ್ತದೆ. ಆಗ ಕಾರ್ ಯಾವುದಾದರೊಂದು ಬಗೆಯ ಪ್ರತಿಕ್ರಿಯೆ ತೋರಬಹುದು. ಅದು ಸ್ವತಚ್ಚಲಿಯಾಗಿ ನಿಲ್ಲಬಹುದು ಅಥವಾ ಢಿಕ್ಕಿಯಾಗುವುದನ್ನು ತಪ್ಪಿಸಬಹುದು. ಢಿಕ್ಕಿಯಾಗುವುದನ್ನು ತಪ್ಪಿಸಲು ಸಾಧ್ಯವಾಗದಿದ್ದಲ್ಲಿ ಈ ವ್ಯವಸ್ಥೆಯು ಗಾಳಿ ಮೆತ್ತೆಗಳನ್ನು ಉಬ್ಬಿಸಿ ವಾಹನದಲ್ಲಿರುವವರನ್ನು ಅಪಘಾತದಿಂದ ರಕ್ಷಿಸುವುದು.

——

ಕಾಲಿನ ಹರಡನ್ನು ಬದಲಾಯಿಸಬಹುದು

ಟೊಂಕ ಮತ್ತು ಮೊಣಕಾಲಿನಂತೆ, ಕಾಲಿನ ಹರಡನ್ನೂ ಈಗ ಕೃತಕವಾಗಿ ತಯಾರಿಸಿ ಕಸಿ ಮಾಡಬಹುದಾಗಿದೆ. ಟೆಕ್ಸಾಸ್‌ನ ಲುಬಾಕ್‌ನಲ್ಲಿರುವ ಲುಬಾಕ್ ಅರ್ಥೋಪೀಡಿಕ್ ಸರ್ಜರಿ ಕ್ಲಿನಿಕ್‌ನ ಡಾ। ಕೆನೆತ್ ಶೋಲ್ಸ್ ಅವರು ಇತ್ತೀಚೆಗೆ, ೩೨ ಕೃತಕ ಕಾಲಿನ ಹರಡುಗಳನ್ನು ೩೨ ಮಂದಿ ರೋಗಿಗಳಿಗೆ ಯಶಸ್ವಿಯಾಗಿ ಅಳವಡಿಸಲಾಯಿತು ಎಂದು ಪ್ರಕಟಿಸಿರುವರು.

ಸಂಧಿವಾತ ಅಥವಾ ಗಾಯದಿಂದಾಗಿ ನೋವು ಅಥವಾ ಓಡಾಡಲು ಸಾಧ್ಯವಿಲ್ಲದಿದ್ದುದರ ಕಾರಣವಾಗಿ ಲೋಹ ಮತ್ತು ಪ್ಲಾಸ್ಟಿಕ್‌ನಿಂದ ತಯಾರಿಸಲಾದ ಕೃತಕ ಕೀಲುಗಳನ್ನು ಅಳವಡಿಸಲಾಯಿತು. ಈ ರೋಗಿಗಳಲ್ಲಿ ಹೆಚ್ಚಿನವರು ಊರುಗೋಲು ಅಥವಾ ಬೆತ್ತದ ಸಹಾಯವಿಲ್ಲದೆ ಸಹಜವಾಗಿ ನಡೆಯಲು ಸಮರ್ಥರಾಗಿದ್ದಾರೆ. ಅವರು ತಮ್ಮ ಮುಂಚಿನ ಕೆಲಸಗಳಿಗೂ ಹಿಂದಿರುಗಿದ್ದಾರೆ.


ಈ ರೋಗಿಗಳಲ್ಲಿ ಹೆಚ್ಚಿನವರು ಸಮತಟ್ಟಾಗಿಲ್ಲದ ನೆಲದ ಮೇಲೆ ನಡೆಯಬಲ್ಲರು, ಮೆಟ್ಟಲುಗಳನ್ನು ಹತ್ತಿಳಿಯಬಲ್ಲರು, ತೂಕವಾದ ವಸ್ತುಗಳನ್ನು ಒಯ್ಯಬಲ್ಲರು ಮತ್ತು ಅನೇಕ ಬಗೆಯ ಕ್ರೀಡೆಗಳಲ್ಲಿ ಪಾಲ್ಗೊಳ್ಳಬಲ್ಲರು. ಕೃತಕ ಹರಡುಗಳನ್ನು ಒದಗಿಸಲಾದ ರೋಗಿಗಳು ೧೭ರಿಂದ ೭೦ ವರ್ಷಗಳ ವರೆಗೆ ವಿವಿಧ ವಯಸ್ಸಿನವರು.

——

ಸ್ವಾತಂತ್ರ್ಯ

ಸಜ್ಜನರ ಹೊರತು ಮಿಕ್ಕವರು ಸ್ವಾತಂತ್ರ್ಯವನ್ನು ಪ್ರೀತಿಸಲಾರರು; ಉಳಿದವರು ಪ್ರೀತಿಸುವುದು ಸ್ವಾತಂತ್ರ್ಯವನ್ನಲ್ಲ — ವಿಶೃಂಖಲತೆಯನ್ನು.

—ಜೊನ್ ಮಿಲ್ಟನ್.



ಭಾರತೀಯ ಗಿಡಮೂಲಿಕೆಗಳಿಂದ ಈ ಔಷಧಿಗಳನ್ನು ಸೋವಿಯತ್ ಒಕ್ಕೂಟದ ಔಷಧೀಯ ಸಸ್ಯಗಳ ಇನ್‌ಸ್ಟಿಟ್ಯೂಟಿನ ಪ್ರಾಯೋಗಿಕ ಕಾರ್ಖಾನೆಯಲ್ಲಿ ತಯಾರಿಸಿದೆ.

ಆರ್ಥಿಕ ಅಪರಾಧಗಳ ತಡೆ

(ಪ್ರೊ| ಪ್ರಣಬ್ ಮುಖರ್ಜಿ, ಕೇಂದ ಹಣಕಾಸು ಖಾತೆಯ ರಾಜ್ಯಸಚಿವರು)

ಸಾಮಾಜಿಕ ನ್ಯಾಯದಿಂದೊಡಗೂಡಿದ ಅಭಿವೃದ್ಧಿಯೇ ರಾಷ್ಟ್ರದ ತತ್ವ. ಆದಾಯ ಮತ್ತು ಸಂಪತ್ತಿನ ಅಸಮಾನತೆಯನ್ನು ಹೋಗಲಾಡಿಸುವುದೇ ಸಂವಿಧಾನದ ನಿರ್ದೇಶಕ ಸೂತ್ರಗಳ ಗುರಿ. ಸರಕಾರ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿರುವುದೂ ಸಹ ಈ ಗುರಿಯನ್ನು ಸಾಧಿಸುವುದಕ್ಕಾಗಿಯೇ. ಈ ಗುರಿ ಸಾಧನೆಗೆ ಹಲವಾರು ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳಿವೆ. ಈ ಅಡೆತಡೆಗಳನ್ನು ನಿವಾರಿಸುವ ಸಲುವಾಗಿ ಪ್ರಧಾನಮಂತ್ರಿಯವರು ೨೧ ಅಂಶಗಳ ಕಾರ್ಯಕ್ರಮವನ್ನು ಪ್ರಕಟಿಸಿದ್ದಾರೆ. ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಅಡ್ಡ ಬರುವ ಆರ್ಥಿಕ ಅಪರಾಧಗಳನ್ನು ನಿರ್ಮೂಲಗೊಳಿಸುವುದೇ ಈ ಕಾರ್ಯಕ್ರಮದ ಮುಖ್ಯ ಅಂಶ.

ಕೊಲೆ, ಸುಲಿಗೆ, ಕಳ್ಳತನ ಮುಂತಾದ ಅಪರಾಧಗಳು ಕೆಲವು ವ್ಯಕ್ತಿಗಳಿಗೆ ತೊಂದರೆಯುಂಟುಮಾಡಿದರೆ, ಆರ್ಥಿಕ ಅಪರಾಧಗಳಿಂದ ಇಡೀ ದೇಶಕ್ಕೆ ಹಾನಿಯಾಗುತ್ತದೆ. ಕಳ್ಳಸಾಗಾಣಿಕೆ, ತೆರಿಗೆ ತಪ್ಪಿಸುವುದು, ಅಕ್ರಮದಾಸ್ತಾನು ಇವೇ ಆ ಕೆಲವು ಆರ್ಥಿಕ ಅಪರಾಧಗಳು.

ದುಷ್ಪರಿಣಾಮ

ಆರ್ಥಿಕ ಅಪರಾಧಗಳು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುವುದರ ಜೊತೆಗೆ ಅಭಿವೃದ್ಧಿ ಕಾರ್ಯಗಳು ಮತ್ತು ಸಮಾಜಕಲ್ಯಾಣ ಕಾರ್ಯಕ್ರಮಗಳಿಗೆ ಅಗತ್ಯವಾದ ಸರಕಾರದ ಆದಾಯಕ್ಕೂ ಸಹ ಧಕ್ಕೆಯುಂಟುಮಾಡುತ್ತವೆ.

ಕಳ್ಳಸಾಗಣೆದಾರರು ಕಸ್ಟಮ್ಸ್ ಸುಂಕವನ್ನು ತಪ್ಪಿಸುವುದರ ಜೊತೆಗೆ ಆದಾಯ ತೆರಿಗೆ, ಆಸ್ತಿತೆರಿಗೆ ಮತ್ತು ವ್ಯಾಪಾರ ತೆರಿಗೆಗಳನ್ನೂ ಸಹ ತಪ್ಪಿಸುತ್ತಾರೆ. ಇದರಿಂದಾಗಿ ಈ ವಂಚಕರ ಬಳಿ ಹೇರಳ ಕಪ್ಪುಹಣ ಶೇಖರಗೊಳ್ಳುತ್ತದೆ. ದೇಶದ ಆರ್ಥಿಕ ವ್ಯವಸ್ಥೆಯ ಅವ್ಯವಸ್ಥೆಗಳಿಗೆ ಕಾರಣರಾದ ಈ ವಂಚಕರು ಬಲಿತು ಸಮಾಜಕ್ಕೆ ಕಂಟಕಪ್ರಾಯರಾಗುತ್ತಾರೆ.

ಉಗ್ರ ಕ್ರಮ

ಆರ್ಥಿಕ ಅಪರಾಧಿಗಳ ವಿರುದ್ಧ ಸರ್ಕಾರ ಈಗಾಗಲೇ ತೀವ್ರ ಕ್ರಮ ಕೈಗೊಂಡಿದ್ದು ಅವುಗಳ ಪರಿಣಾಮ ಉತ್ತೇಜನಕಾರಿಯಾಗಿದೆ.

ಆದಾಯ ತೆರಿಗೆ ತಪ್ಪಿಸುವವರನ್ನು ಹೊರಗೆಳೆಯುವದಕ್ಕಾಗಿ ಆದಾಯ ತೆರಿಗೆ ಅಧಿಕಾರಿಗಳು ಚಳುವಳಿ ಹೂಡಿ ಅನೇಕರನ್ನು ಬಯಲಿಗೆಳೆದಿದ್ದಾರೆ. ೧೯೭೩-೭೪ರಲ್ಲಿ ೧೨,೪೦೦ ಪ್ರಕರಣಗಳಲ್ಲಿ ೧೬ ಕೋಟಿ ರೂಪಾಯಿಗಳು ಜುಲ್ಮಾನೆರೂಪದಲ್ಲಿ ಸರಕಾರಕ್ಕೆ ಸಂದಿತು. ೧೯೭೪-೭೫ರಲ್ಲಿ ಇಲಾಖೆ ನಡೆಸಿದ ೨೦೦೦ ಧಾಳಿಗಳಲ್ಲಿ ಸುಮಾರು ೨೭ ಕೋಟಿ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಲಾಯಿತು.

ವಿದೇಶಿವಿನಿಮಯ ವಂಚಕರಿಂದ ಪ್ರತಿವರ್ಷ ದೇಶಕ್ಕೆ ೨೪೦ ಕೋಟಿ ರೂ.ಗಳ ನಷ್ಟವಾಗುತ್ತಿದೆಯೆಂದು ಅಂದಾಜುಮಾಡಲಾಗಿದೆ. ಈ ಅಮೂಲ್ಯ ವಿದೇಶೀವಿನಿಮಯ ಸೋರಿಹೋಗುವುದನ್ನು ತಪ್ಪಿಸುವುದಕ್ಕಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ೧೯೭೪ರ ಜನವರಿ ಒಂದರಂದು ಜಾರಿಗೆ ಬಂದ ವಿದೇಶೀವಿನಿಮಯ ನಿಯಂತ್ರಣ ಕಾಯ್ದೆ ವಂಚಕರ ವಿರುದ್ಧ ಉಗ್ರಕ್ರಮಗಳನ್ನು ಕೈಗೊಳ್ಳಲು ಅವಕಾಶ ಮಾಡಿಕೊಟ್ಟಿದೆ. ೧೯೭೪ರಲ್ಲಿ ೨೦೦೦ಕ್ಕೂ ಹೆಚ್ಚು ಪ್ರಕರಣಗಳಿಂದ ೯೯ಲಕ್ಷ ರೂ.ದೇಶಿ ಹಾಗು ವಿದೇಶಿ ಹಣವನ್ನು ವಶಪಡಿಸಿಕೊಳ್ಳಲಾಯಿತು.

ಕಳ್ಳಸಾಗಾಣಿಕೆ ವಿರುದ್ಧ ಕಾರ್ಯಾಚರಣೆ

ಕಳ್ಳಸಾಗಾಣಿಕೆ ಪ್ರಪಂಚ ಒಂದು ವಿಚಿತ್ರ ಪ್ರಪಂಚ. ಸಾಗಾಣಿಕೆ ವಸ್ತುಗಳು ಆಗಿಂದಾಗ್ಗೆ ಬದಲಾಗುತ್ತಲೇ ಇರುತ್ತವೆ. ಮೊದಲು ಚಿನ್ನವನ್ನು ಕದ್ದು ತಂದು ಬೆಳ್ಳಿಯನ್ನು ಕದ್ದೊಯ್ಯುತ್ತಿದ್ದರು. ಈಗ ಕೃತಕ ನೂಲು, ಬಟ್ಟೆ, ಗಡಿಯಾರ, ಇಲೆಕ್ಟ್ರಿಕ್ ಉಪಕರಣಗಳು, ಮದ್ಯ, ಪರಿಮಳದ್ರವ್ಯಗಳನ್ನು ದೇಶಕ್ಕೆ ಅನುಕ್ರಮವಾಗಿ ತರಲಾಗುತ್ತಿದೆ. ಅಮೂಲ್ಯ ಹರಳುಗಳು, ಪ್ರಾಚೀನ ವಸ್ತುಗಳು, ವಾಸ್ತುಶಿಲ್ಪ, ವರ್ಣಚಿತ್ರ ಮತ್ತು ಅಫೀಮು ಮುಂತಾದುವುಗಳನ್ನು ದೇಶದಿಂದ ಹೊರಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದೆ. ಕಳ್ಳಸಾಗಾಣಿಕೆಯಿಂದ ಪ್ರತಿವರ್ಷ ೧೭೦ ಕೋಟಿ ರೂ. ವಿದೇಶೀವಿನಿಮಯ ನಷ್ಟವಾಗುತ್ತಿದೆಯೆಂದು ಅಂದಾಜುಮಾಡಲಾಗಿದೆ.

೧೯೭೪ರ ಸೆಪ್ಟೆಂಬರ್‌ನಿಂದ ಕಳ್ಳಸಾಗಾಣಿಕೆ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಯಿತು. ಇದಕ್ಕಾಗಿ ಕಸ್ಟಮ್ಸ್ ಇಲಾಖೆಯನ್ನು ಬಲಪಡಿಸಲಾಗಿದ್ದು ಅಧಿಕಾರಿಗಳು ಹಗಲೂ ರಾತ್ರಿ ಅಪರಾಧಗಳ ಶೋಧನೆಯಲ್ಲಿ ತೊಡಗಿದರು. ಈ ಕಾರ್ಯಾಚರಣೆಗಾಗಿ ಆಧುನಿಕ ಉಪಕರಣ ಮತ್ತು ಸಂಪರ್ಕ ಸಾಧನಗಳನ್ನು ಅವರಿಗೆ ಒದಗಿಸಲಾಗಿದೆ.

೧೯೭೪ರ ಸೆಪ್ಟೆಂಬರ್‌ನಲ್ಲಿ ಮೀಸಾವನ್ನು ತಿದ್ದುಪಡಿಮಾಡಿ ಕಳ್ಳಸಾಗಣೆದಾರರು ಮತ್ತು ವಿದೇಶೀವಿನಿಮಯ ವಂಚಕರಿಗೂ ಸಹ ಅನ್ವಯಿಸಲಾಯಿತು. ೧೯೭೪-೭೫ರಲ್ಲಿ ಮೂರುಸಾವಿರಕ್ಕೂ ಹೆಚ್ಚು ಜನರ ಮೇಲೆ ಮೊಕದ್ದಮೆ ಹೂಡಿ ೬೦ ಕೋಟಿ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ಹಲವಾರು ಪ್ರಸಿದ್ಧ ಕಳ್ಳಸಾಗಾಣೆದಾರರನ್ನು ಬಂಧಿಸಲಾಯಿತು. ಈ ವ್ಯಕ್ತಿಗಳ ಬಂಧನ ಕಳ್ಳಸಾಗಾಣಿಕೆಯ ಮೇಲೆ ವಿಶೇಷ ಪರಿಣಾಮವುಂಟುಮಾಡಿತು. ಆದರೆ ಕೆಲವು ನ್ಯಾಯಾಲಯಗಳ ತೀರ್ಪಿನಿಂದಾಗಿ ಅವರು ಬಿಡುಗಡೆ ಹೊಂದಿದಾಗ ಈ ದುರ್ವ್ಯವಹಾರ ಮತ್ತೆ ಚುರುಕುಗೊಂಡಿತು. ತುರ್ತುಪರಿಸ್ಥಿತಿಯ ಘೋಷಣೆಯ ನಂತರ ಸುಗ್ರೀವಾಜ್ಞೆಯೊಂದನ್ನು ಹೊರಡಿಸಲಾಯಿತು. ಈ ಸುಗ್ರೀವಾಜ್ಞೆ ಅವರ ಮೇಲೆ ವಿಶೇಷ ಪರಿಣಾಮ ಬೀರಿದೆ. ೧೯೭೫ರ ಜುಲೈ ೧೯ರ ವರೆಗೆ ೧೨೦೦ಕ್ಕೂ ಹೆಚ್ಚು ಜನರನ್ನು ಬಂಧಿಸಲು ಆಜ್ಞೆ ಹೊರಡಿಸಲಾಗಿತ್ತು. ಆದರೆ ೩೦೦ ಕ್ಕೂ ಹೆಚ್ಚು ಜನರು ಇನ್ನೂ ತಲೆತಪ್ಪಿಸಿಕೊಂಡಿದ್ದಾರೆ. ಅವರುಗಳನ್ನು ಬಂಧಿಸಲು ಸೂಕ್ತಕ್ರಮ ಕೈಗೊಳ್ಳಲಾಗಿದೆಯಲ್ಲದೆ ಅಂಥವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ.

ದಕ್ಷ ಆಡಳಿತ

ಕಳ್ಳಸಾಗಣೆದಾರರ ವಿರುದ್ಧದ ಕ್ರಮಗಳನ್ನು ತೀವ್ರಗೊಳಿಸುತ್ತಿದ್ದಂತೆಯೇ ಕಸ್ಟಮ್ಸ್ ಇಲಾಖೆಯನ್ನೂ ಸಹ ಬಲಪಡಿಸಲು ಯತ್ನಿಸಲಾಗುತ್ತಿದೆ. ಅಪ್ರಾಮಾಣಿಕ ಮತ್ತು ಲಂಚಖೋರ ಅಧಿಕಾರಿಗಳನ್ನು ತೆಗೆದು ದಕ್ಷ ಹಾಗು ಪ್ರಾಮಾಣಿಕ ಅಧಿಕಾರಿಗಳನ್ನು ನಿಯಮಿಸಲಾಗುತ್ತಿದೆ. ೧೯೭೪ರ ಸೆಪ್ಟೆಂಬರ್‌ನಿಂದೀಚೆಗೆ ಸುಮಾರು ೫೦೦ ಅದಕ್ಷ ಹಾಗು ಅಪ್ರಾಮಾಣಿಕ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಕೇವಲ ಆಡಳಿತ ಮತ್ತು ಶಾಸಕಾಂಗ ಕ್ರಮಗಳನ್ನು ಕೈಗೊಂಡರೆ ಸಾಲದು, ಸಮಾಜವೂ ಕೂಡ ಆರ್ಥಿಕವಾಗಿ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬುದನ್ನು ನಾವು ಮರೆಯಬಾರದು. ಜನತೆಯ ಸಹಕಾರದಿಂದ ಮಾತ್ರ ಅಪರಾಧ ನಿರ್ಮೂಲನ ಸಾಧ್ಯ.

——

ಪ್ರತಿಯೊಬ್ಬನಿಗೂ ತಾನು ಸಣ್ಣವನು ಎಂದು ಭಾಸವಾಗುವಂತೆ ಮಾಡುವ ದೊಡ್ಡ ಮನುಷ್ಯನೊಬ್ಬನಿದ್ದಾನೆ. ಆದರೆ, ಪ್ರತಿಯೊಬ್ಬನಿಗೂ ತಾನು ದೊಡ್ಡವನು— ಎಂದು ಭಾಸವಾಗುವಂತೆ ಮಾಡುವಾತನೇ ನಿಜವಾದ ದೊಡ್ಡ ಮನುಷ್ಯ.

—ಚಾರ್ಲ್ಸ್ ಡಿಕನ್ಸ್.

ಎಲ್ಲರೂ ಸತ್ಯವನ್ನೇ ನುಡಿವಂತೆ ಕಲಿಸಬೇಕಾದರೆ, ಎಲ್ಲರೂ ಸತ್ಯವನ್ನು ಆಲಿಸಲು ಕಲಿಯುವುದೂ ಅವಶ್ಯವಿದೆ.

—ಸೆಮ್ಯುಯಲ್ ಜೊನ್ಸನ್.

ಸ್ವರ್ಗಪಡೆವ ಗುರಿಯನ್ನಿಟ್ಟುಕೋ—
ಮರ್ತ್ಯಲೋಕವಾದರೂ ಸಿಕ್ಕೀತು. ಮರ್ತ್ಯ
ಲೋಕವೇ ನಿನ್ನ ಗುರಿಯಾಗಿಟ್ಟುಕೋ—
ಆಗ ನಿನಗೆ ಎರಡೂ ದೊರೆಯಲಾರವು.

—ಸಿ. ಎಸ್. ಲೂಯಿಸ್.

——

ರೈಲ್ವೆ: ಮಹತ್ವದ ಘಟನೆಗಳ ದಿನಚರಿ

ಜೂನ್ ೧೫, ೧೯೬೫ ಹೊಸ ಜಲ್‌ಪೈಗುರಿ-ಜೋಗಿಗೋಪ್ಪ ನಡುವೆ ಸರಕು ಸಾರಿಗೆಗಾಗಿ ೨೬೫ ಕಿಲೋ ಮೀಟರು ಉದ್ದದ ಬ್ರಾಡ್‌ಗೇಜ್ ರೈಲುಮಾರ್ಗದ ಉದ್ಘಾಟನೆ.

ಆಗಸ್ಟ್ ೧೪, ೧೯೬೫ ದಕ್ಷಿಣ ರೈಲ್ವೆ ತಾಂಬರಂ-ವಿಲ್ಲಿಪುರಂ ನಡುವೆ ೧೩೪ ಕಿಲೋ ಮೀಟರ್ ಉದ್ದದ ಮೀಟರ್‌ಗೇಜ್ ಮಾರ್ಗದಲ್ಲಿ ವಿದ್ಯುಚ್ಚಾಲಿತ ರೈಲುಗಾಡಿಗಳ ಓಡಾಟ ಆರಂಭ.

ಜನವರಿ ೨೧, ೧೯೬೬ ಮೊತ್ತಮೊದಲ ಬಾರಿಗೆ ಭಾರತದ ರೈಲು ನಕ್ಷೆಯಲ್ಲಿ ಜಮ್ಮು-ಕಾಶ್ಮೀರ ರಾಜ್ಯದ ಪ್ರವೇಶ. ಪ್ರಯಾಣಿಕರ ಸಾರಿಗೆಗಾಗಿ ೮.೨೭ ಕಿ. ಮೀ. ಮಾಧವಪುರ-ಕಥುವಾ ಬ್ರಾಡ್‌ಗೇಜ್ ರೈಲು ಮಾರ್ಗದ ಉದ್ಘಾಟನೆ.

ಫೆಬ್ರುವರಿ ೧೮, ೧೯೬೬ ಮುಂಬಯಿ-ಅಹ್ಮದಾಬಾದ್ ನಡುವೆ ಭಾರತೀಯ ರೈಲ್ವೆಗಳ ಮೊತ್ತಮೊದಲನೆ ಕಂಟೇನರ್ ಸೇವೆ ಆರಂಭ.

ಅಕ್ಟೋಬರ್ ೨, ೧೯೬೬ ಫ್ರಂಟೀಯರ್ ಮೇಲ್-ಹೌರಾ-ಅಮೃತಸರ್ ಮೇಲ್‌ಗಳ ಡಿಸೇಲೀಕರಣ.

ಡಿಸೆಂಬರ್ ೨೬, ೧೯೬೬ ಲುಧಿಯಾನಾದಿಂದ ಸಣ್ಣ ಪ್ರಮಾಣದ ಸರಕುಸಾರಿಗೆಗಾಗಿ ವಾರಕ್ಕೊಮ್ಮೆ ತ್ವರಿತ ಸಾರಿಗೆ ರೈಲುಗಾಡಿಗಳ ಸಂಚಾರ ಆರಂಭ.

ಫೆಬ್ರುವರಿ ೧೧, ೧೯೬೭ ನವದೆಹಲಿ-ಹೌರಾ ಹಾಗೂ ನವದೆಹಲಿ-ಮುಂಬಯಿ ನಡುವೆ ಏರ್‌ಕಂಡಿಷನ್ಡ್ ಗಾಡಿಗಳ ಓಡಾಟದ ಸಂಖ್ಯೆ ಏರಿ, ವಾರಕ್ಕೆ ಮೂರುಬಾರಿ ಓಡಾಟ ಆರಂಭ.

ಆಗಸ್ಟ್ ೧೩, ೧೯೬೭ ಹೌರಾ ರೈಲು ನಿಲ್ದಾಣದಲ್ಲಿ ರೂಟ್‌ರಿಲೆ ಇಂಟರ್‌ಲಾಕಿಂಗ್ ಕಚೇರಿಯ ಸ್ಥಾಪನೆ.

ಅಕ್ಟೋಬರ್ ೨೨, ೧೯೬೭ ಭಾರತೀಯ ರೈಲ್ವೆಗಳಲ್ಲಿ ಮೊತ್ತಮೊದಲಬಾರಿಗೆ-ಪೂರ್ವ ರೈಲ್ವೆಯ ಕಲ್ಲಿದ್ದಲು ಗಣಿ ಎಕ್ಸ್‌ಪ್ರೆಸ್ ರೈಲುಗಾಡಿಯಲ್ಲಿ ಸ್ವಯಂ ಚಾಲಿತ ರೈಲುಗಾಡಿ ನಿಯಂತ್ರಕ ಉಪಕರಣದ ಸ್ಥಾಪನೆ.

ಜನವರಿ ೫, ೧೯೬೮ ಚಿತ್ತರಂಜನ ಕಾರ್ಖಾನೆ ತಯಾರಿಸಿದ ಮೊತ್ತಮೊದಲನೆ ಡಿಸೆಲ್ ಹೈಡ್ರೋಲಿಕ್ ಎಂಜಿನ್ ಸಂಚಾರ ಆರಂಭ.

ಸೆಪ್ಟೆಂಬರ್ ೨೨, ೧೯೬೮ ತಿರುಪತಿಯ ಹೊಸ ಬ್ರಾಡ್‌ಗೇಜ್ ಲೈನ್ ಉದ್ಘಾಟನೆ.

ನವೆಂಬರ್ ೨೨, ೧೯೬೮ ಡಿಸೇಲ್ ಚಾಲಿತ ರೈಲ್ವೆ ಎಂಜಿನ್ ತಯಾರಿಕಾ ಕಾರ್ಖಾನೆಯವರು ಮೀಟರ್‌ಗೇಜಿಗಾಗಿ ತಯಾರಿಸಿದ ಮೊತ್ತಮೊದಲನೆ ಡಿಸೆಲ್-ವಿದ್ಯುತ್ ರೈಲ್ವೆ ಎಂಜಿನ್ ಸಂಚಾರ ಪ್ರಾರಂಭ.

ಫೆಬ್ರುವರಿ ೧೨, ೧೯೬೯ ಕಟಕ್-ಪರದೀಪ್ ನಡುವಣ ೮೫ ಕಿ.ಮೀ. ರೈಲು ಮಾರ್ಗದ ನಿರ್ಮಾಣ ಕಾರ್ಯದ ಉದ್ಘಾಟನೆ.

ಮಾರ್ಚ್ ೧, ೧೯೬೯ ಭಾರತದಲ್ಲೇ ಮೊತ್ತಮೊದಲ ಬಾರಿ ದೆಹಲಿ-ಹೌರಾ ಮಾರ್ಗದಲ್ಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲುಗಾಡಿಯ ಓಡಾಟ ಆರಂಭ.

ಜೂನ್ ೧೨, ೧೯೬೯ ದಕ್ಷಿಣ ಮತ್ತು ದಕ್ಷಿಣ ಮಧ್ಯ ರೈಲ್ವೆಗಳಲ್ಲಿ ಮೈಕ್ರೋ-ವೇವ್ ಜಾಲ ಕಾರ್ಯಾರಂಭ ಮಾಡಿತು.

ಸೆಪ್ಟೆಂಬರ್ ೧೬, ೧೯೬೯ ಮಳಿಯ-ಮಿಯಾನಾ-ಕಾಂಡ್ಲಾ ನಡುವೆ ೧೦೧ ಕಿ. ಮೀ. ಉದ್ದದ ಬ್ರಾಡ್‌ಗೇಜ್ ರೈಲು ಮಾರ್ಗ ಸಾರಿಗೆಗೆ ಮುಕ್ತವಾಯಿತು.

ಮಾರ್ಚ್ ೨೨, ೧೯೭೦ ಪೆರಂಬೂರು ಸಮಗ್ರ ರೈಲುಬಂಡಿಗಳ ಕಾರ್ಖಾನೆ ತಯಾರಿಸಿದ ೪೫ ಬಂಡಿಗಳನ್ನು ಹಡಗಿನಲ್ಲಿ ತುಂಬಿ ಥೈಲಾಂಡಿಗೆ ರವಾನಿಸಲಾಯಿತು.

ನವೆಂಬರ್ ೧೧, ೧೯೭೧ ಫರಕ್ಕಾ ಅಣೆಕಟ್ಟಿನ ರೈಲ್ವೆ ಸೇತುವೆಯನ್ನು ಸಾರಿಗೆಗೆ ತೆರೆಯಲಾಯಿತು.

ಡಿಸೆಂಬರ್ ೨೧, ೧೯೭೧ ಭಾರತದ ಮೊತ್ತಮೊದಲು ರೈಲು ಬಂಗ್ಲಾದೇಶ ಪ್ರವೇಶಿಸಿತು.

ಮೇ ೧೭, ೧೯೭೨ ಮುಂಬಯಿ-ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ಸಂಚಾರ ಆರಂಭ.

(ಮುಂದುವರಿಯುವುದು)

—೦—

> ತುರ್ತು ಪರಿಸ್ಥಿತಿ ಶಿಸ್ತಿನ ಶಕವಾಗಿದೆ.
>
> —ವಿನೋಬಾ ಭಾವೆ.

ಅಪಾರ ಭೂ-ಸಂಪತ್ತು ಮತ್ತು ಮಿತವಾದ ಬಳಕೆ

—ಶ್ರೀ| ಟಿ. ಎಂ. ಸಿ. ರಘುನಾಥನ್—

ಭೂಮಿಯು ಖನಿಜ ಸಂಪತ್ತುಗಳಿಂದ ಸಮೃದ್ಧಭರಿತವಾಗಿದೆ. ಮಾನವಕುಲವು ಈಗಾಗಲೇ ಅನೇಕ ಖನಿಜಗಳನ್ನು ಪತ್ತೆ ಹಚ್ಚಿ ಸಾಕಷ್ಟು ಪ್ರಮಾಣದಲ್ಲಿ ಅವುಗಳನ್ನು ಹೊರಗೆ ತೆಗೆದಿದೆಯಾದರೂ ಭೂ-ಗರ್ಭದಲ್ಲಿ ಕಲ್ಲಿದ್ದಲು, ತೈಲ, ನೈಸರ್ಗಿಕ ಅನಿಲ, ಕಬ್ಬಿಣ ಮುಂತಾದ ಅನೇಕ ಖನಿಜಗಳೂ ಮತ್ತು ಖನಿಜ ಅದುರುಗಳೂ ಇನ್ನೂ ಬೇಕಾದಷ್ಟಿವೆ. ಏನೇ ಆಗಲಿ, ಭೂಮಿಯಲ್ಲಿ ಖನಿಜ ಸಂಪನ್ಮೂಲಗಳು ಹೇರಳವಾಗಿವೆಯಾದರೂ ಅವು ಲೆಕ್ಕಕ್ಕೆ ಸಿಗದಷ್ಟೇನೂ ಆಗಿಲ್ಲ ಎಂಬುದನ್ನು ಇಲ್ಲಿ ಗಮನಿಸಲೇಬೇಕು. ಆದುದರಿಂದ ಇರುವ ಖನಿಜ ಸಂಪನ್ಮೂಲಗಳನ್ನೆಲ್ಲ ಹಾಗೆಯೇ ಶೋಧಿಸಿ ತೆಗೆಯುತ್ತ ಹೋದರೆ ಭೂಮಿಯು ಒಂದಲ್ಲ ಒಂದು ದಿನ ಯಾವ ಖನಿಜಗಳನ್ನೂ ಒದಗಿಸಲು ಶಕ್ತವಾಗದೆ ಬರಡಾಗುತ್ತದೆ. ಖನಿಜಗಳನ್ನು ಹೊರತೆಗೆದು ಉಪಯೋಗಿಸುವುದು ಯಾವ ತಡೆಯೂ ಇಲ್ಲದೆ ಹೆಚ್ಚುತ್ತಲೇ ಹೋದರೆ ಖಂಡಿತವಾಗಿಯೂ ಆ ದುರ್ದಿನ ಸನ್ನಿಹಿತವಾಗದಿರಲಾರದು. ಮೇಲಾಗಿ, ಖನಿಜದ ಕಚ್ಚಾ ವಸ್ತುಗಳನ್ನು ಶೋಧಿಸಿ, ಹೊರತೆಗೆದು ಉಪಯೋಗಿಸಬಹುದಾದರೂ ಅವುಗಳನ್ನು ಪುನಃ ತುಂಬಿಸುವುದು ಅಸಾಧ್ಯ. ಅಂತೆಯೇ, ಭವಿಷ್ಯತ್ತಿನ ಪೀಳಿಗೆಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಮನುಕುಲವು ಅವುಗಳನ್ನು ಮಿತವಾಗಿ ಉಪಯೋಗಿಸಿಕೊಳ್ಳಬೇಕು.

ಆದಾಗ್ಯೂ ಬಂಡವಾಳಶಾಹಿ ಜಗತ್ತಿನಲ್ಲಿ ಔದ್ಯಮಿಕವಾಗಿ ಮುಂದುವರಿದ ರಾಷ್ಟ್ರಗಳು ಮತ್ತು ಅವುಗಳ ಏಕಸ್ವಾಮ್ಯ ಸಂಸ್ಥೆಗಳು ಹೆಚ್ಚು ಹೆಚ್ಚು ಲಾಭಗಳನ್ನು ಸಂಪಾದಿಸುವ ಆತುರದಲ್ಲಿ ತಮ್ಮ ದೇಶಗಳ, ಅಷ್ಟೇ ಏಕೆ, ಬೇರೆ ದೇಶಗಳ ಖನಿಜ ಸಂಪನ್ಮೂಲಗಳನ್ನೂ ಕೂಡ ಮನಬಂದಂತೆ ಹೊರತೆಗೆಯುತ್ತವೆ. ಸಂಕ್ಷೇಪವಾಗಿ ಹೇಳಬೇಕೆಂದರೆ, ಜನರನ್ನು ನಿರ್ದಯವಾಗಿ ಶೋಷಣೆ ಮಾಡುತ್ತಿರುವಂತೆಯೇ ಅವು, ಮುಂಬರುವ ಪೀಳಿಗೆಗಳ ಹಿತಾಸಕ್ತಿಗಳನ್ನು ಒಂದಿಷ್ಟೂ ಲೆಕ್ಕಿಸದೆಯೇ ಭೂಮಿಯ ಖನಿಜ ಸಂಪನ್ಮೂಲಗಳನ್ನು ಹೊರತೆಗೆದು ಅದನ್ನು ಬರಡುಗೊಳಿಸುತ್ತಿವೆ.

ಈ ಸಂಬಂಧದಲ್ಲಿ, ಸೋವಿಯೆತ್ ಒಕ್ಕೂಟದ ಸರ್ವೋಚ್ಚ ಸೋವಿಯೆತ್ತಿನ ಇತ್ತೀಚಿನ ಅಧಿವೇಶನದಲ್ಲಿ ಖನಿಜ ನಿಕ್ಷೇಪಗಳ ಬಗ್ಗೆ ಕೈಕೊಳ್ಳಲಾದ ನಿರ್ಣಯಗಳು ಹಾಗೂ ಅಂಗೀಕೃತವಾದ ಶಾಸನಗಳು ಈ ಸಮಸ್ಯೆಯ ಕಡೆಗೆ ಅತ್ಯಂತ ವಿವೇಚನಾಪೂರ್ಣವಾದ ಮತ್ತು ಅಷ್ಟೇ ರಚನಾತ್ಮಕವಾದ ಧೋರಣೆಯನ್ನು ನಮ್ಮೆದುರಿಗೆ ಇಡುತ್ತವೆ.

ವಾಸ್ತವದಲ್ಲಿ ಸೋವಿಯೆತ್ ಒಕ್ಕೂಟವು ಖನಿಜ ಸಂಪನ್ಮೂಲಗಳ ಉತ್ಪಾದನೆ ಮತ್ತು ಗಾತ್ರಕ್ಕೆ ಸಂಬಂಧಿಸಿದಂತೆ ಜಗತ್ತಿನಲ್ಲೇ ಮುಂದಿದೆ. ಸೋವಿಯೆತ್ ಒಕ್ಕೂಟವು ಭೂವಿಜ್ಞಾನದಲ್ಲಿ ಅಪಾರ ಪ್ರಗತಿಯನ್ನು ಸಾಧಿಸಿದೆ. ಉದಾಹರಣೆಗೆ, ಪ್ರಚಲಿತ ಪಂಚವಾರ್ಷಿಕ ಯೋಜನೆಯ ಮೊದಲಿನ ನಾಲ್ಕು ವರ್ಷಗಳ ಅವಧಿಯಲ್ಲಿ ಅನ್ವೇಷಿತ ನೈಸರ್ಗಿಕ ಅನಿಲ ಸಂಪನ್ಮೂಲಗಳು ಶೇ. ೭೦ರಷ್ಟು, ಫಾಸ್ಫರೈಟ್‌ಗಳು ಶೇ. ೫೦ರಷ್ಟು, ತೈಲ, ಕಬ್ಬಿಣೇತರ ಲೋಹ ಮುಂತಾದವುಗಳು ಶೇ. ೩೦ರಿಂದ ಶೇ. ೪೦ರಷ್ಟು ಹೆಚ್ಚಿದುವು. ಈ ಅಂಕಿ ಸಂಖ್ಯೆಗಳು ಸ್ಪಷ್ಟವಾಗಿಯೇ ಹೆಮ್ಮೆಯ ಮೂಲಗಳಾಗಿವೆಯಾದರೂ ಆದರಿಂದ ಒಂದಿಷ್ಟು ಕಳವಳವೂ ಉಂಟಾಗುತ್ತದೆ. ಅಂತೆಯೇ ಈ ಸಮಸ್ಯೆಯ ಕಡೆಗೆ ತುಂಬ ಗಮನ ನೀಡಲಾಯಿತು ಹಾಗೂ ಇಂದಿನ ಪೀಳಿಗೆಯ, ಅಷ್ಟೇ ಏಕೆ, ಮುಂಬರುವ ಪೀಳಿಗೆಗಳ ಹಿತಾಸಕ್ತಿಗಳನ್ನು ಕಾಪಾಡುವ ಶಾಸನಗಳನ್ನು ಅಂಗೀಕರಿಸಲಾಯಿತು. ಖನಿಜ ಸಂಪನ್ಮೂಲಗಳ ಸಮಾಜವಾದಿ ಒಡೆತನ ಹಾಗೂ ಯೋಜಿತ ಆರ್ಥಿಕ ನಿರ್ವಹಣೆಯ ವ್ಯವಸ್ಥೆ ಇವು ಈಗಾಗಲೇ ಸೋವಿಯೆತ್ ಒಕ್ಕೂಟದಲ್ಲಿ ಖನಿಜ ಸಂಪನ್ಮೂಲಗಳ ವ್ಯಾಪಕವಾದ, ಪರಿಣಾಮಕಾರಿಯಾದ ಮತ್ತು ಅಷ್ಟೇ ಮಿತವಾದ ಬಳಕೆಗೆ ಹಾಗೂ ಅವುಗಳ ಸಂರಕ್ಷಣೆಗೆ ಅತ್ಯಂತ ಅನುಕೂಲಕರವಾದ ಸ್ಥಿತಿಗತಿಗಳನ್ನು ನಿರ್ಮಿಸಿದೆ.

ಸೋವಿಯೆತ್ ಆಡಳಿತದ ವರ್ಷಗಳಲ್ಲಿ ಸಹಸ್ರಾರು ಖನಿಜ ನಿಕ್ಷೇಪಗಳನ್ನು ಶೋಧಿಸಿ ಉಪಯೋಗಿಸಿಕೊಳ್ಳಲಾಗಿದೆ. ಈಗೀಗ ಅನೇಕ ಖನಿಜಗಳ ಗಣಿಗಾರಿಕೆಯು ಪ್ರತಿ ೮-೧೦ ವರ್ಷಗಳಿಂದ ಹೆಚ್ಚು ಕಡಿಮೆ ದ್ವಿಗುಣಗೊಳ್ಳುತ್ತಿದೆ. ಇದರಿಂದಾಗ ಖನಿಜ ಸಂಪತ್ತಿನ ಬಳಕೆಯನ್ನು ಹಾಗೂ ಹೊಸ ಖನಿಜ ನಿಕ್ಷೇಪಗಳಿಗಾಗಿ ನಡೆಯುತ್ತಿರುವ ನಿರಂತರ ಶೋಧನೆಗಳನ್ನೂ ಮಿತಗೊಳಿಸುವುದರ ಅವಶ್ಯಕತೆ ಉಂಟಾಗಿದೆ, ಅಂತೆಯೇ ಇತ್ತೀಚೆಗೆ ಅಂಗೀಕರಿಸಲಾಗಿರುವ ಶಾಸನದಲ್ಲಿ ಖನಿಜ ಸಂಪನ್ಮೂಲಗಳ ಬಳಕೆಯನ್ನು ಹೆಚ್ಚು ಹೆಚ್ಚು ನಿಯಂತ್ರಣಕ್ಕೊಳಪಡಿಸಲಾಗಿದೆ ಮತ್ತು ಅವುಗಳ ಸಂರಕ್ಷಣೆಯ ಪ್ರಶ್ನೆಗೆ ತುಂಬ ಗಮನ ನೀಡಲಾಗಿದೆ. ಖನಿಜ ಸಂಪನ್ಮೂಲಗಳ ಸಂರಕ್ಷಣೆ ಬಗೆಗಿನ ಶಾಸನಬದ್ಧ ಸ್ಟೆಂಡಾರ್ಡ್‌ಗಳು, ಆ ಸಂಪನ್ಮೂಲಗಳ ನಿರರ್ಥಕ ಬಳಕೆಯನ್ನು ತಡೆಗಟ್ಟುವ ಹಾಗೂ ಕಡಿತಗೊಳಿಸುವ ಕಡೆಗೆ ನಿರ್ದೇಶಿತವಾಗಿವೆ.

ಇದೂ ಅಲ್ಲದೆ ಖನಿಜ ಸಂಪತ್ತಿನ ಬಳಕೆಯು, ನಿಸರ್ಗದ ಬೇರೆ ಅಂಶಗಳ ಮೇಲೆ ಖಚಿತವಾದ, ಆದರೆ, ವಿಹಿತವಲ್ಲದ ಪರಿಣಾಮವನ್ನುಂಟುಮಾಡುತ್ತದೆ. ಕೆಲವು ಬಾರಿ, ವಿನಾಕಾರಣವಾಗಿಯೇ ಸುಂದರವಾದ ಭೂದೃಶ್ಯದ ಸ್ಥಳಗಳನ್ನು ಹಾಳು ಮಾಡಲಾಗುತ್ತದೆ. ಆದುದರಿಂದ ಹೊಸ ಶಾಸನವು, ವನ್ಯ ಮೃಗಧಾಮ, ಸುಂದರ ಸ್ಥಳ ಮುಂತಾದ ಕಡೆಗಳಲ್ಲಿ ಗಣಿಗಾರಿಕೆಯನ್ನು ನಿಷೇಧಿಸುವ ಸೂಚನೆಗಳನ್ನು ಒಳಗೊಂಡಿದೆ. ಹಾಗೆಯೇ ಗಣಿಗಾರಿಕೆಯಲ್ಲಿ ತಪ್ಪು ಕೆಲಸಗಳನ್ನು ನಡೆಸಿದರೆ ಭೂಮ್ಯಂತರ್ಗತ ಜಲವು ಕುಗ್ಗಿ ಮೇಲಿನ ಮಣ್ಣು ಕುಸಿಯುವ ಸಾಧ್ಯತೆ ಉಂಟು. ಇದರಿಂದ ಅರಣ್ಯಗಳ ಮೇಲೆ ಕೆಟ್ಟ ಪರಿಣಾಮವಾಗುತ್ತದೆ ಮತ್ತು ಸಾಗುವಳಿ ಯೋಗ್ಯ ಭೂಮಿಯು ಹಾಳಾಗುತ್ತದೆ. ಹೀಗೆ ಅನೇಕ ಕೆಟ್ಟ ಪರಿಣಾಮಗಳುಂಟಾಗುತ್ತವೆ. ಆದುದರಿಂದ, ಖನಿಜ ಸಂಪತ್ತನ್ನು ಉಪಯೋಗಿಸುವ ಪ್ರತಿಯೊಬ್ಬರೂ ವಾತಾವರಣ, ಭೂಮಿಯ ಮೇಲ್ಭಾಗ, ಅರಣ್ಯಗಳು ಹಾಗೂ ಜಲ ಇವುಗಳ ಬಗ್ಗೆ ಜಾಗರೂಕತೆಯಿಂದ ಇರುವುದನ್ನು ಹೊಸ ಶಾಸನವು ಕಡ್ಡಾಯಗೊಳಿಸುತ್ತದೆ.

— —

ಸ್ವಾತಂತ್ರ್ಯ

"ಸ್ವಾತಂತ್ರ್ಯ"ವೆಂಬುದು ಎರಡು ತೆರ—ಮಿಥ್ಯ ಮತ್ತು ಸತ್ಯ. ಮಿಥ್ಯ ಸ್ವಾತಂತ್ರ್ಯದಲ್ಲಿ ಒಬ್ಬನು ತನಗೆ ಮನಬಂದಂತೆ ವರ್ತಿಸುತ್ತಾನೆ — ಸತ್ಯ ಸ್ವಾತಂತ್ರ್ಯದಲ್ಲಿ ಒಬ್ಬನು ಮಾಡಬೇಕಾದುದನ್ನು ಮಾಡಲು ಸ್ವತಂತ್ರನಿದ್ದಾನೆ.

—ಚಾರ್ಲ್ಸ್ ಕಿಂಗ್‌ಸ್ಲೇ,

ಶೃಂಖಲಾಬದ್ಧನಾಗಿಯಾದರೂ ಗುಲಾಮನಾಗಿಯಾದರೂ ಜೀವಿಸಬೇಕೆನ್ನುವಷ್ಟಕ್ಕೆ ಜೀವನವು ಪ್ರಿಯವೂ ಸಿಹಿಯೂ ಆಗಿರುವುದೇ? ಭಗವಂತ! ಅಂಥ ಕೀಳು ಹೃದಯವನ್ನು ನನಗೆ ಕೊಡಬೇಡ. ಇತರರು ಏನನ್ನು ಬಯಸುತ್ತಾರೋ ನಾನರಿಯೆ—ಆದರೆ ನನಗೆ ಸ್ವಾತಂತ್ರ್ಯ ಕೊಡು ಇಲ್ಲವೇ ಮರಣಕೊಡು!

—ಪೆಟ್ರಿಕ್ ಹೆನ್ರಿ.

— —

(೭ನೇ ಪುಟದಿಂದ ಮುಂದುವರಿದುದು)

ಶಾಲಾ ಇನಸ್ಪೆಕ್ಟರರು ಭೇಟಿಕೊಟ್ಟರು. ಅಧ್ಯಾಪಕರು ತನಗೆ ಶಾಲಾ ಸಂಬಳವು ಮೂರು ತಿಂಗಳಿಂದ ಬರಲಿಲ್ಲವೆಂದು ಅವರೊಡನೆ ಮೊರೆ ಇಟ್ಟರು. ಇನಸ್ಪೆಕ್ಟರರು ಅವರಿಗೆ 'ನೀವೇನು ಹೇಳುತ್ತೀರಿ? ಶಾಲೆಯನ್ನು ಮುಚ್ಚಿ ಮೂರು ತಿಂಗಳಾಯಿತು. ಶಾಲೆಯ ಸೊತ್ತುಗಳನ್ನು ಹಿಂದೆ ಪಡೆಯಲು ನಾನು ಬಂದಿದ್ದೇನೆ' ಎಂದರು.

ಆ ರೀತಿಯಾಗಿ ನಾನು ತೆರೆದ ರಾತ್ರಿ ಶಾಲೆಯು ಆ ಶಾಲೆಯ ಅಧ್ಯಾಪಕರ ಅವಿವೇಕದಿಂದಾಗಿ ಮುಚ್ಚುವಂತಾಯಿತು. ಆ ಕಾಲದಲ್ಲಿ ಹೊಸ ರಾತ್ರಿಶಾಲೆಯನ್ನು ತೆರೆಯಲು ಮಂಜೂರಾತಿಯು ದೊರೆಯುವುದಿಲ್ಲವೆಂಬ ವಿಷಯವು ಉಪಾಧ್ಯಾಯರಿಗೆ ಆನಂತರ ತಿಳಿಯಿತು.

-ಶ್ರೀ| ಟಿ. ಚಂದ್ರರಾಜ ಸೆಟ್ಟಿ.

— —

ಸ್ವಾಮಿನಿಷ್ಠ ಬಾತುಕೋಳಿಗಳು

(ನೀನಾ ಯಾನೋಚ್ಕಿನಾ)

ದೊಡ್ಡ ಪಕ್ಷಿಯ ಒಂದು ಗೂಡು. ಅದರಲ್ಲಿ, ನೀಲೀ ಬೂದುಬಣ್ಣದ ಮೊಟ್ಟೆಗಳು. ಲಿಯೋನ್ಯಾ ಮಂತ್ರಮುಗ್ಧನಾಗಿ ಏಮಯಿಕ್ಕದೆ ಅವುಗಳನ್ನೇ ನೋಡುತ್ತ ನಿಂತಿದ್ದ. ಅವು ಸುಮಾರು ೧೫ ಅಥವಾ ೨೦ ಮೊಟ್ಟೆಗಳಿದ್ದಿರಬೇಕು. ಲಿಯೋನ್ಯಾ ತನ್ನ ಟೊಪ್ಪಿಗೆಯನ್ನು ತೆಗೆದುಕೊಂಡು, ಏಳು ಮೊಟ್ಟೆಗಳನ್ನು ಅತ್ಯಂತ ಜಾಗ್ರತೆಯಿಂದಲೇ ಅದರಲ್ಲಿಟ್ಟ. ಏಳು ಅದೃಷ್ಟದ ಸಂಖ್ಯೆ ಎಂದು ಹೇಳಿದ ಅಜ್ಜನ ಮಾತು ಅವನ ನೆನಪಿಗೆ ಬಂತು. ಕೆಲವು ಎಲೆಗಳಿಂದ ಮೊಟ್ಟೆಗಳನ್ನು ಮುಚ್ಚಿಕೊಂಡು ಲಿಯೋನ್ಯಾ ನಿಧಾನವಾಗಿ ಮನೆಗೆ ತೆರಳಿದ.

"ಅಜ್ಜಾ, ನಾನು ಮೊಟ್ಟೆಗಳನ್ನು ತಂದಿರುವೆ; ಅವುಗಳನ್ನು ನಮ್ಮ ಬೆಲ್ಯಾಂಕಾ ಬಾತುಕೋಳಿಯ ಕೆಳಗೆ ಕಾವುಕೊಡಲು ಇಡೋಣ. ಮರಿಗಳಾದಾಗ ಅವು ಹೇಗಿರುತ್ತವೆ ನೋಡೋಣ!" ಎಂದು ಲಿಯೋನ್ಯಾ-ಬಾಗಿಲಲ್ಲಿ ಕಾಲಿಡುತ್ತ,

"ಹೌದೌದು. ಇದು ಕಾಡು ಬಾತುಕೋಳಿಯ ಮೊಟ್ಟೆಗಳೆಂತ ನನಗೆ ಗೊತ್ತು. ಹೊರ ಬರುವ ಮರಿಗಳೂ ಕಾಡು ಬಾತುಕೋಳಿಯವೇ ಆಗಿರುತ್ತವೆ. ಕಡೆಗೆ ಅವೆಲ್ಲಾ ಚೆಲ್ಲಾಪಿಲ್ಲಿಯಾಗಿ ಹಾರಿ ಹೋಗುವುದಂತೂ ಖಂಡಿತ" ಎಂದ ಅಜ್ಜ.

"ಇಲ್ಲ, ಇಲ್ಲ! ಅವೇನೂ ಹಾರಿಹೋಗುವುದಿಲ್ಲ. ಅವುಗಳ ಬಗ್ಗೆ ನಾನೇ ಜಾಗರೂಕತೆ ವಹಿಸುತ್ತೇನೆ" ಲಿಯೋನ್ಯಾ ಹೇಳಿದ.

"ಆಗಲಪ್ಪಾ ಮಗು. ನೀನೇ ಗೆದ್ದೆಯೆನ್ನೋಣ" ಎಂದ ಅಜ್ಜ, ಔದಾಸೀನ್ಯದಿಂದ.

ಅವರಿಬ್ಬರೂ ಈ ಮೊಟ್ಟೆಗಳನ್ನು ಬಿಳಿಯ ಮೊಟ್ಟೆಗಳೊಂದಿಗೆ ಸೇರಿಸಿ ಮರಿಗಳಾಗುವುದನ್ನು ನಿರೀಕ್ಷಿಸಲಾರಂಭಿಸಿದರು.

ಪ್ರತಿದಿನ ಮುಂಜಾನೆ ಲಿಯೋನ್ಯಾ ಅರೆನಿದ್ದೆಗಣ್ಣಲ್ಲೇ ಎದ್ದು ಶೆಡ್ಡಿಗೆ ಓಡುತ್ತಿದ್ದ. ತನ್ನ ಅಜ್ಜನಿಗೆ ಕೇಳುತ್ತಿದ್ದ: "ಅವು ಮರಿಗಳಾದುವೇ?"

"ತಾಳ್ಮೆಯಿಂದಿರು. ಇನ್ನೂ ಅವು ಮರಿಗಳಾಗುವ ಕಾಲ ಬಂದಿಲ್ಲ" ಅಜ್ಜ ಸಿಟ್ಟಾಗಿಯೇ ಹೇಳುತ್ತಿದ್ದ.

ಲಿಯೋನ್ಯಾ, ಬೆಲ್ಯಾಂಕಾ ಬಾತುಕೋಳಿಯ ಮೈದಡವಿ ತನ್ನ ಕೈಯಿಂದಲೇ ಅದಕ್ಕೆ ಆಹಾರ ತಿನ್ನಿಸತೊಡಗಿದ. ಮೊಟ್ಟೆಗಳಿಂದ ಮರಿಗಳು ಹೊರಬರುವುದನ್ನೇ ಕಾಯತೊಡಗಿದ.

ಕಾದು ಕಾದು ಸಾಕಾಗಿತ್ತು ಲಿಯೋನ್ಯಾಗೆ. ಇನ್ನೇನು ಮೊಟ್ಟೆಗಳಿಂದ ಯಾವ ಮರಿಯೂ ಹೊರಬರುವಂತಿಲ್ಲ ಎನ್ನುವಷ್ಟರಲ್ಲೇ ಸುಂದರವಾದ ನಯವಾದ ತುಪ್ಪಳಿನ ಪುಟ್ಟ ಪುಟ್ಟ ಮರಿಗಳು ಕಾಣಿಸಿಕೊಂಡವು!

ಎಂತಹ ಸಂತೋಷ! ಏಳೂ ಕಾಡು ಬಾತುಕೋಳಿ ಮರಿಗಳು ತಮ್ಮನ್ನು ಸಾಕಿ ಸಲಹಿದ ತಾಯಿ-ಬಾತುಕೋಳಿ ಬೆಲ್ಯಾಂಕಾವನ್ನು ಅನುಸರಿಸಿದುವು. ಉಳಿದವುಗಳಿಗಿಂತ ತಾವು ಭಿನ್ನ ಎಂಬ ಸಂಶಯ ಅವುಗಳಿಗೆ ಬರಲೇ ಇಲ್ಲ.

ಲಿಯೋನ್ಯಾ ಎಲ್ಲ ದಿನಗಳಲ್ಲೂ ಅವುಗಳ ಬಳಿಯಲ್ಲೇ ಇರತೊಡಗಿದ. ನದಿಯ ಚಿಪ್ಪುಗಳನ್ನು ಆತ ಸಂಗ್ರಹಿಸಿದ. ನೀರು ತುಂಬಿದ ಪಾತ್ರೆಯಲ್ಲಿ ಹಾಕಿ ಚೆನ್ನಾಗಿ ಕುದಿಸಿದ. ನೀರು ಕುದಿಯತೊಡಗಿದಂತೆ ಚಿಪ್ಪುಗಳು ತೆರೆದುಕೊಂಡವು. ಚಿಪ್ಪುಗಳು ತಣ್ಣಗಾಗುತ್ತಲೇ ಅವುಗಳಿಂದ ಚಿಪ್ಪು—ಹುಳುಗಳನ್ನು ಹೊರತೆಗೆದು ಜಜ್ಜಿ ಚೂರು ಚೂರು ಮಾಡಿದ. ಹೀಗೆ ಸಿದ್ಧವಾದ ಆಹಾರವನ್ನು ಮರಿಗಳಿಗೆ ಹಾಕಿದ.

ಸಾಕಷ್ಟು ಆಹಾರ ತಿನ್ನುತ್ತ ಬಾತುಕೋಳಿಗಳು ಹಂದುಗು ಮೇಲೆ ಬರುವಂತೆ ಬೆಳೆದು ದೊಡ್ಡವಾದವು.

"ಸಹಾಯ ಮಾಡ್ಬೇಕೇನೋ" ಅಜ್ಜ ಆಗಾಗ ಕೇಳುತ್ತಿದ್ದ.

"ನಾನೇ ನೋಡಿಕೊಳ್ಳುವೆ. ನೋಡು, ಪುಟ್ಟ ನಾಯಿ ಮರಿಗಳಂತೆ ಅವು ನನ್ನ ಹಿಂದೆಯೇ ಓಡಾಡುತ್ತಿವೆ" ಲಿಯೋನ್ಯಾ ಹೇಳುತ್ತಿದ್ದ-ದೊಡ್ಡವರ ಹಾಗೆ.

ಹಾಗೆಯೇ ಬೇಸಿಗೆ ಕಾಲ ಸರಿಯಿತು.

ಏಳೂ ಬಾತುಕೋಳಿ ಮರಿಗಳು ದೊಡ್ಡವಾದವು. ಹಾರಲು ಕಲಿತವು. ಆದರೆ ಎಂದಿಗೂ ಲಿಯೋನ್ಯಾನನ್ನು ಮಾತ್ರ ಬಿಟ್ಟು ಅಗಲಲಿಲ್ಲ.

ಶರತ್ಕಾಲದ ಒಂದು ದಿನ. ಕೊಳದ ಮೇಲೆ ಕೆಲವು ಕಾಡು ಬಾತುಕೋಳಿಗಳು ಹಾರಿ ಹೋದುವು. ಏಳೂ ಬಾತುಕೋಳಿಗಳು ಈಗ ಲಿಯೋನ್ಯಾನ ಆದೇಶಗಳನ್ನೂ ಸಹ ಪ್ರತಿಭಟಿಸಿ ಗರಿ ಬಿಚ್ಚಿ ಹಾರಿ ಹೋದುವು.

"ಅವು ಹಾಗೇ! ತೋಳವನ್ನು ಹಿಡಿದು ನೀನು ಎಷ್ಟು ಬೇಕಾದರೂ ಆಹಾರ ಹಾಕಿ ಬೆಳೆಸು, ಕಡೆಗೂ ಅದು ಕಾಡಿಗೇ ಓಡಿ ಹೋಗುತ್ತದೆ. ಅವು ಈಗ ದಕ್ಷಿಣದ ಕಡೆಗೆ ಹೋಗುತ್ತಿವೆ;" ಎಂದ ಅಜ್ಜ ನಿಡುಸುಯ್ದು.

ತೀವ್ರ ಶ್ವಾಸೋಚ್ಛ್ವಾಸ ಬಿಡುತ್ತ ಕೊಳದ ದಂಡೆಯಲ್ಲಿ ನಿಶ್ಚಲನಾಗಿ ನಿಂತ ಲಿಯೋನ್ಯಾ ಏಮಯಿಕ್ಕದೆ ಆಕಾಶದತ್ತ ನೋಡತೊಡಗಿದ.

ಸುತ್ತೆಲ್ಲ ಹಾರಾಡಿದ ನಂತರ ಕಾಡು ಬಾತುಕೋಳಿಗಳು ಮತ್ತೆ ಕೊಳದಲ್ಲಿ ಇಳಿದುಕೊಂಡವು.

ಸುಂದರವಾದ ಬಾತುಕೋಳಿ ಮುಂದೆ ಮುಂದೆ, ಉಳಿದವುಗಳು ಅದರ ಹಿಂದೆ ಹಿಂದೆ. ಅವು ಈಜಿಕೊಂಡು ಲಿಯೋನ್ಯಾನ ಕಡೆಗೇ ಬಂದವು. ನಿಧಾನವಾಗಿ ದಡ ಸೇರಿದ ಅವು ಆತನ ಸುತ್ತ ಅಲೆಯತೊಡಗಿದುವು. ನಂಬಲಾಗದ ಈ ಚಮತ್ಕಾರವನ್ನು ಕಂಡ ಆತ ಗರಬಡಿದವನಂತೆ ನಿಂತುಕೊಂಡ.

"ಅಜ್ಜಾ. ಇನ್ನೆಂದಿಗೂ ಅವು ಹಾರಿ ದೂರ ಹೋಗುವುದಿಲ್ಲ ತಾನೆ?" ಆತ ಗುಣುಗಿದ.

"ತಮ್ಮ ಸಂಬಂಧಿಗಳೊಡನೆಯೇ ಹಾರಿ ಹೋಗದ ಅವು ನಿನ್ನನ್ನು ಬಿಟ್ಟು ಹೋಗುವುದಿಲ್ಲವೆಂದೇ ಕಾಣುತ್ತದೆ."

"ಅಂದರೆ ಏಳು ಅತ್ಯಂತ ಅದೃಷ್ಟದ ಸಂಖ್ಯೆ ಎಂದಂತಾಯಿತಲ್ಲ?"

"ಅದು ನಿಜ ಅಂತ ಕಾಣುತ್ತದೆ" ಅಜ್ಜ ಮುಗುಳುನಕ್ಕ,

ಅಂದಿನಿಂದ ಬಾತುಕೋಳಿಗಳು ತಮ್ಮ ಇಷ್ಟದಂತೆಯೇ ಸ್ವಚ್ಛಂದವಾಗಿ ಹಾರಾಡಿಕೊಂಡು ಮತ್ತೆ ತಮ್ಮ ಗೂಡಿಗೆ ವಾಪಸು ಬರತೊಡಗಿದುವು. ತಪ್ಪು ಭಾವನೆಯಿಂದ ಬೇಟೆಗಾರರು ಅವುಗಳನ್ನು ಗುಂಡಿಕ್ಕಿ ಕೊಲ್ಲದಿರಲಿ ಎಂದು ಲಿಯೋನ್ಯಾ ಅವುಗಳ ಕಾಲುಗಳಿಗೆ ಕೆಂಪು ಪಟ್ಟಿಗಳನ್ನು ಕಟ್ಟಿದ.

——

(೫ನೇ ಪುಟದಿಂದ ಮುಂದುವರಿದುದು)

ಗಳು ಅಥವಾ ಮಕ್ಕಳಿಗಿಂತ ಹೆಚ್ಚು ಹತ್ತಿರವಾಗಿದ್ದಾರೆ ಎಂದು ನಾನು ಭಾವಿಸುತ್ತೇನೆ. ಹುಟ್ಟಿನಿಂದಲೇ ಆರೋಗ್ಯ, ಐಶ್ವರ್ಯ, ವಿದ್ಯೆ ಎಲ್ಲವನ್ನೂ ಬಳುವಳಿಯಾಗಿ ಪಡೆದುಕೊಂಡ ಈ ಉಜ್ವಲ ವ್ಯಕ್ತಿತ್ವದ ಪ್ರಪಂಚಮುತ್ಸದ್ದಿ ಎಲ್ಲ ವಿಷಯಗಳಲ್ಲೂ ಸೇವಾಗ್ರಾಮದ ಚರಕಧಾರಿ ಮಹಾತ್ಮರಿಗೆ ಸದೃಶವಾಗಿರುವರೆಂಬುದು ವಿಚಿತ್ರವಾದರೂ ನಿಜ."

ಪಿಯಾನ್ ಅವರು ಗಮನಿಸಿರುವಂತೆ ನೆಹರೂ ಅವರು ಇತರರ ಅಭಿಪ್ರಾಯ ಸ್ವಾತಂತ್ರ್ಯವನ್ನು ಗೌರವಿಸುತ್ತಿದ್ದರು. ಅದೇ ಸಮಯದಲ್ಲಿ ತಮ್ಮ ನಿರ್ಧಾರ ಕೈಗೊಳ್ಳುವ ಹಕ್ಕನ್ನು ಉಳಿಸಿಕೊಂಡಿದ್ದರು; ಸಂಸದೀಯ ವಿಧಾನದಲ್ಲಿ ಅವರಿಗೆ ಅಪಾರ ನಂಬಿಕೆಯಿತ್ತು. ಅವರ ಮಾನವೀಯತೆ, ಜನರ ಮೇಲಿನ ಗಾಢವಾದ ಪ್ರೀತಿ ಮತ್ತು ಕಠಿನ ದುಡಿಮೆಯಲ್ಲಿ ಅವರ ಅದ್ಭುತ ಸಾಮರ್ಥ್ಯ—ಈ ಗುಣಗಳು ಅವರನ್ನು ಅವರ ಗುರುವಿನೊಂದಿಗೆ ಬಂಧಿಸಿದ್ದವು. ಆದರೆ ಅವರಿಬ್ಬರಲ್ಲೂ ಇದ್ದ ಸಾಮಾನ್ಯ ಅಂಶವೆಂದರೆ ಭಾರತದ ಭವಿಷ್ಯದ ಬಗ್ಗೆ ಭರವಸೆ.

——

ಸ್ವಾತಂತ್ರ್ಯ

ಸರ್ವಸಂಗಪರಿತ್ಯಾಗದಿಂದ ದೊರೆವ ಮೋಕ್ಷವನ್ನು ನಾನು ಬಯಸುವುದಿಲ್ಲ. ಆದರೆ ಜೀವನದ ಸಾವಿರಾರು ಹೊಣೆಗಾರಿಕೆಗಳನ್ನು ಹೊತ್ತು ಸ್ವಾತಂತ್ರ್ಯದ ಮಹದಾನಂದವನ್ನು ಪಡೆಯಲು ಶ್ರಮಿಸುವೆನು.

—ಕವೀಂದ್ರ ರವೀಂದ್ರ

——

ಭಾರತ—ಮಧ್ಯ ಏಶಿಯಾ ಸಂಬಂಧಗಳ ಮೇಲೆ ಬೆಳಕು ಬೀರುವ ಶೋಧನೆಗಳು

ಉಜ್‌ಬೆಕ್, ಅಜರ್‌ಬೈಜಾನಿಯನ್ ಮತ್ತು ತಾಜಿಕ್ ಭಾಷೆಗಳ ಪ್ರಾಚೀನ ಸಾಹಿತ್ಯಕ ಹಸ್ತಪ್ರತಿಗಳ ಶೋಧನೆ ಹಾಗೂ ಅಧ್ಯಯನದ ಬಗ್ಗೆ ಉಜ್‌ಬೆಕಿಸ್ತಾನ ವಿಜ್ಞಾನಗಳ ಅಕಾಡೆಮಿಯು ಭಾರತದಲ್ಲಿ ಸಂಶೋಧನಾ ಕಾರ್ಯ ನಿರ್ವಹಿಸಿತು. ಸಂಶೋಧನಾ ತಂಡದ ಮುಖ್ಯಸ್ಥ ಪ್ರೊ. ಖಮೀದ್ ಸುಲೈಮಾನೋವ್ ಡಾಕ್ಟರ್ ಆಫ್ ಫಿಲಾಲಜಿ, ಅವರು ಈ ಲೇಖನದಲ್ಲಿ ಸಂಶೋಧನೆಯ ಪ್ರಾಥಮಿಕ ಫಲಿತಾಂಶಗಳನ್ನು ವಿವರಿಸಿದ್ದಾರೆ.

ಪ್ರಾಚೀನ ಕಾಲದಲ್ಲೂ ಕೂಡ ಮಧ್ಯ ಏಶಿಯಾ ಹಾಗೂ ಭಾರತದ ಜನತೆಗಳ ನಡುವಣ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸಂಬಂಧಗಳು ಗಾಢವಾಗಿಯೇ ಇದ್ದುವು. ೧೬-೧೭ನೇ ಶತಮಾನಗಳಲ್ಲಿ ಇಂದಿನ ಉಜ್ಬೆಕ್ ಗಣರಾಜ್ಯದ ಫೆರ್ಘಾನಾ ಪ್ರದೇಶದಲ್ಲಿರುವ ಅಂದಿಝಾನ್‌ಗೆ ಸೇರಿದ ಜಹಿರುದ್ದೀನ್ ಬಾಬರ್ ಮತ್ತು ಆತನ ವಂಶಜರ ಕಾಲದಲ್ಲಿ ಅವು ಇನ್ನಷ್ಟು ವಿಸ್ತೃತಗೊಂಡಿದ್ದವು.

ಮಧ್ಯ ಏಶಿಯಾದ ಅನೇಕ ಕವಿಗಳು, ಲೇಖಕರು, ಖಗೋಳಶಾಸ್ತ್ರಜ್ಞರು, ವೈದ್ಯರು, ವರ್ಣ ಚಿತ್ರಕಾರರು, ಸಂಗೀತಗಾರರು, ನಿರ್ಮಾಪಕರು ಮೊದಲಾದವರನ್ನು ಬಾಬರನ ವಂಶಜರು ಭಾರತಕ್ಕೆ ಆಮಂತ್ರಿಸಿದ್ದರು. ಅವರು ಭಾರತದ ಸಾಧನೆಗಳನ್ನು ಅರಿತು ಪರಿಣತಿಯನ್ನು ಪಡೆದರು ಹಾಗೂ ಈ ಹೊಸ ಸಂಯೋಜಿತ ಜ್ಞಾನವು, ವಿಜ್ಞಾನ, ಸಾಹಿತ್ಯ ಮತ್ತು ಕಲೆಗಳ ಮಟ್ಟವನ್ನು ಒಂದು ಹೊಸ ಘಟ್ಟಕ್ಕೇರಿಸಲು ಸಹಾಯಕವಾಯಿತು. ಇನ್ನೊಂದೆಡೆ, ಬುಖಾರಾ, ಸಮರ್‌ಖಂಡ್ ಮತ್ತು ತಾಷ್ಕೆಂತ್‌ಗಳಲ್ಲಿ ವಾಸಿಸುತ್ತಿದ್ದ ಭಾರತದ ಅನೇಕ ಕರಕುಶಲ ಕರ್ಮಿಗಳು, ವೈದ್ಯರು, ವಿಜ್ಞಾನಿಗಳು ಮತ್ತು ವ್ಯಾಪಾರಿಗಳೂ ಕೂಡ ಮಧ್ಯ ಏಶಿಯಾದ ಜನತೆಗಳ ಸಾಂಸ್ಕೃತಿಕ ಬೆಳವಣಿಗೆಗೆ ಕಾಣಿಕೆ ನೀಡಿದರು.

ದೆಹಲಿ, ಮುಂಬೈ, ಮದರಾಸು, ಹೈದರಾಬಾದು, ಅಲೀಗಢ, ಲಖನೌ, ಆಗ್ರಾ, ಮತ್ತು ಶ್ರೀನಗರ, ಇಡೀ ಭಾರತದಲ್ಲಿರುವ ಭಾರತ–ಮಧ್ಯ ಏಶಿಯಾಗಳ ಅಧ್ಯಯನದ ಕೇಂದ್ರಗಳಾಗಿವೆ. ಪರ್ಷಿಯನ್, ತಾಜಿಕ್, ಅರಬಿಕ್, ಉಜ್‌ಬೆಕ್, ಅಜರ್‌ಬೈಜಾನಿಯನ್ ಮತ್ತು ಇತರ ಭಾಷೆಗಳ ಪ್ರಾಚೀನ ಹಸ್ತಪ್ರತಿಗಳನ್ನು ಇಲ್ಲಿ ಕಾಣಬಹುದು.

೧೭ನೇ ಶತಮಾನದಲ್ಲಿ ಪುನಃ ಬರೆಯಲ್ಪಟ್ಟ ಉಜ್‌ಬೆಕ್ ಭಾಷೆಯಲ್ಲಿರುವ, ಬಾಬರನ ಸ್ಮರಣೆಗಳನ್ನು ಕುರಿತ "ಬಾಬರ್ ನಾಮಾ" ಹಸ್ತ ಪ್ರತಿಯು ಇವುಗಳಲ್ಲಿ ವಿಶಿಷ್ಟವಾದುದು. ಬೆವರಿಜನ್–ಇಂಗ್ಲೀಷ್ ಅನುವಾದವು ಇದನ್ನೇ ಆಧರಿಸಿದುದಾಗಿದೆ. ೧೮ನೇ ಶತಮಾನದಲ್ಲಿ ಪುನಃ ಬರೆಯಲ್ಪಟ್ಟ ಬಾಬರನ "ದಿವಾನ್" (ಪದ್ಯಗಳ ಸಂಗ್ರಹ)ಗಳ ಎರಡು ಹೊಸ ಹಸ್ತ ಪ್ರತಿಗಳನ್ನು ಕೂಡ ನಾವು ಶೋಧಿಸಿದ್ದೇವೆ. ೧೬ನೇ ಶತಮಾನದ ಆರಂಭದಲ್ಲಿ ಪುನಃ ಬರೆಯಲ್ಪಟ್ಟ, ಆಲಿಷೇರ್ ನವೋಯಿಯವರ ಪರಂಪರೆಗೆ ಸೇರಿರುವ "ದಿವಾನ್–ಇ–ಫನಿ". "ಲಿಸಾನ್ ಅಲ್-ತಾಜೀರ್" ಹಸ್ತ ಪ್ರತಿಗಳು ಹಾಗೂ ಅವರ "ಮಜ್ಲಿಸ್ ಅಲ್-ನಫಾಯಿಸ್" ಎಂಬ ಕಾವ್ಯ ಮಂಜರಿಯ ಪರ್ಷಿಯನ್ ಭಾಷಾಂತರದ ಹಸ್ತಪ್ರತಿ–ಇವು ನಾವು ಶೋಧಿಸಿದ ಹಸ್ತಪ್ರತಿಗಳಲ್ಲಿ ಕೆಲವು.

೧೭ನೇ ಶತಮಾನದ ಉಜ್‌ಬೆಕ್ ಕವಿಗಳಾದ ದುರ್‌ಬೆಕ್ (ಯೂಸುಫ್ ಮತ್ತು ಜುಲೈಖಾ) ಖೈದರ್ ಖಾರೆಜಿಮಿ(ಗುಲ್ಶನ್ ಅಲ್–ಅಸ್ರಾರ್) ಹಾಗೂ ಮದ್ಲಾನ್ ಲುತ್ಫಿ (ಗುಲ್ ಮತ್ತು ನವ್‌ರೀಜ್) ಅವರುಗಳ ಕೃತಿಗಳ ಕಾಶ್ಮೀರಿ ಹಸ್ತಪ್ರತಿಗಳೂ ಕೂಡ ಅಷ್ಟೇ ಅಮೋಘವಾಗಿವೆ, ಭವ್ಯ ಪರ್ಷಿಯನ್–ತಾಜಿಕ್ ಶಾಸ್ತ್ರೀಯ ಸಾಹಿತ್ಯಕ್ಕೆ ಸೇರಿರುವ ಖಾಫೀಜ್ ಅವರ ಕೃತಿಯೊಂದು ನಮ್ಮ ದೃಷ್ಟಿಯಲ್ಲಿ ಅತ್ಯಮೂಲ್ಯವಾದ ಹಸ್ತಪ್ರತಿಯೆನಿಸಿದೆ. ಹಳೆಯ ಉಜ್ಬೆಕ್ ಭಾಷೆಯಲ್ಲಿ ಸಂಪೂರ್ಣ ಭಾಷಾಂತರಗೊಂಡಿರುವ ಈ ಹಸ್ತಪ್ರತಿಯು ೧೫ನೆ ಶತಮಾನದಲ್ಲಿ ಬರೆಯಲ್ಪಟ್ಟಿತು.

ಪ್ರಾಚೀನ ಪೌರಸ್ತ್ಯ ಲೇಖಕರ ಸ್ವಹಸ್ತಪ್ರತಿಗಳು ಅತ್ಯಂತ ಅಪರೂಪವಾದುವೆಂಬುದು ಸುಪರಿಚಿತ ಸಂಗತಿ. ಅದೇನೇ ಇರಲಿ, ಪರ್ಷಿಯನ್ ತಾಜಿಕ್ ಭಾಷೆಯಲ್ಲಿ ಅಬ್ದುರ್ ರಹಮಾನ್ (ದೀವಾನ್ ಅಲ್-ತಿಬ್ಯಾನ್ ಫಿ ತಫ್ಸೀರ್) ಅವರ ಮಹಾ ಕೃತಿಯೊಂದರ ಅರಾಬಿಕ್ ಹಸ್ತಪ್ರತಿಯ ಎರಡು ಸಂಪುಟಗಳನ್ನು ಹೈದರಾಬಾದಿನಲ್ಲಿ ಕಂಡು ಹಿಡಿದ ನಾವು ಸುದೈವಿಗಳೇ ಸರಿ. ಈ ಲೇಖಕರು ಸ್ವತಃ ತಮ್ಮ ಕೈಯಿಂದಲೇ ಉತ್ಕೃಷ್ಟವಾದ ಸೂಕ್ಷ್ಮ "ನಸ್ಖ" ಕೈಬರೆಹದಲ್ಲಿ ಪುನಃ ಬರೆದ ಸಂಪುಟಗಳು ಇವಾಗಿವೆ. ಎರಡೂ ಸಂಪುಟಗಳಲ್ಲಿ ಪುಟಗಳ ಸಂಖ್ಯೆ ಎರಡು ಸಾವಿರಕ್ಕಿಂತಲೂ ಹೆಚ್ಚೇ ಆಗುತ್ತದೆ. ಅಲೀಘಡದ ವಿದ್ವಾಂಸರಾದ ರಹಮತ್‌ಉಲ್ಲಾ ಅವರು ಖಾಸಗಿ

(೧೮ನೇ ಪುಟಕ್ಕೆ ಮುಂದುವರಿದಿದೆ)

ನಮ್ಮ ದೇಗುಲ

(೩ನೇ ಪುಟದಿಂದ ಮುಂದುವರಿದುದು)

ಸತ್ಯ ಅಹಿಂಸೆಗಳ ಮಾರ್ಗದಿಂದ ತೊಲಗಿ ಬರುತ್ತಾನೆ. ಈ ದೂರದ ಸರಿಯುವಿಕೆ ಏರುತ್ತಾ ಬಂದು ಬೆಳೆಯುವ ದಾರಿಗೆ ಅಡ್ಡ ಬಂದು ಎಲ್ಲೆಲ್ಲಿಯೂ ಬೇನೆ ಕಷ್ಟಗಳ ಬೆಳೆಯನ್ನು ಬೆಳೆಸುತ್ತಿರುವನು.

ಪ್ರಜಾಪ್ರಭುತ್ವ ಜೀವನದ ಏಳಿಗಾಗಿ ಆದಿ ಯಿಂದಲೇ ಧಾರ್ಮಿಕ ಹಿತಸಾಧನೆಯ ದೃಷ್ಟಿಯನ್ನು ವಿದ್ಯಾರ್ಥಿ ಕಾಲದಲ್ಲಿ ಹೊಂದಬೇಕು, ಅದಕ್ಕೆ ವಿದ್ಯಾರ್ಥಿಯು ಅಭ್ಯಾಸಗೊಳ್ಳಬೇಕು. ರಾಜನೀತಿಯು ಮತ್ತು ಅನ್ಯ ವಿಷಯಗಳ ಕಲಿಯುವಿಕೆ ಹೊಂದಬೇಕು. ಕ್ರಿಯಾತ್ಮಕ ಭಾಗಗೊಳ್ಳದೆ ರಾಜನೀತಿಯ ಅಭ್ಯಾಸಹೊಂದಬೇಕು. ವಿದ್ಯಾರ್ಥಿಗೆ ಆದರ್ಶ ಸಂಯಮ (ಆದರ್ಶದ ತಪಸ್ಸು) ಸ್ವೇಚ್ಛಾಚಾರವಲ್ಲ. ಆದರ್ಶದ ಬಾಳುವೆ ಹೊಂದಲು ವಿದ್ಯಾಭ್ಯಾಸ. ಸಹಕಾರದ ಬಾಳುವೆಯು ಜೀವನ ಐಕ್ಯತೆಗೆ ಕಾರಣವಾಗುತ್ತದೆ. ಸೇವಾ ಧರ್ಮ ಜಗತ್ತಿಗೆ, ಜನಾಂಗಕ್ಕೆ ಬೇಕಿದೆ.

ಮಾನವ ಜಗತ್ತು ಸೇವಾಧರ್ಮವನ್ನು ಸಾಧಿಸಬೇಕಿದೆ. ಪ್ರಪಂಚದ ಮಾನವನು ಇದಕ್ಕಾಗಿ ಸ್ವತಂತ್ರನು. ಸ್ವತಂತ್ರ ನಾಗರಿಕ ಸೇವಾಧರ್ಮವನ್ನು ತ್ಯಾಗಕಾರ್ಯದಿಂದ ಮಾಡುವನು. ಈ ಸೇವಾ ಕಾರ್ಯಕ್ಕಾಗಿ ದೇಹದ ಬಲಿದಾನವಾಗುವುದು. ದೇಹಸಂಬಂಧಕ್ಕಾಗಿ ಸೇವಾಧರ್ಮವನ್ನು ಬಿಡುವುದಲ್ಲ, ಸೇವಾಕಾರ್ಯಕ್ಕಾಗಿ ದೇಹ. ದೇಹಕ್ಕಾಗಿ ಸೇವೆಯಲ್ಲ. ಆರ್ಥಿಕ, ಮಾನಸಿಕ, ಆತ್ಮಿಕ ಸ್ವತಂತ್ರತೆಗಾಗಿ ನಮ್ಮ ಅನುದಿನದ ಸೇವಾಕಾರ್ಯ ನಡೆದು ಭೂದೇವಿಯ ದೇಗುಲದ ಮಾನವನು ಅದರ ಆರಾಧಕನಾಗುವನು. ಈ ಆರಾಧನಾ ಕಾರ್ಯ ಸ್ವತಂತ್ರ ಭಾರತದ ಸಂದೇಶ.

ಈ ಭೂಮಾತೆ ಪ್ರೇಮಣೆಯ ತಾಯಿ. ಎಲ್ಲರ ರಕ್ಷಿತೆ. ಈ ದೇವಿಯು ಗುಡಿಯೊಳಗಣ ಮಾನವ ಜೀವಿಯಾಗಿ ಬಾಳುವ ಪವಿತ್ರಕಾರ್ಯ ಭಾರತೀಯ ಸ್ವಾತಂತ್ರ್ಯದ ಉದ್ಘೋಷಣೆಯಾಗಿದ್ದು ಈ ಪವಿತ್ರತೆಯನ್ನು ಸಾಧಿಸಬೇಕಿದೆ. ಸತ್ಯ ಅಹಿಂಸೆಯ ಸಾಧನೆಗಳಿಂದ ನಿರ್ಭಯತೆ ಹೊಂದಿರುವ ನಿತ್ಯ ನಿಯಮ ಸಂಪನ್ನರಾಗಬೇಕಿದೆ. ಶ್ರೇಷ್ಠತೆ ಬಲಿಷ್ಠತೆ ಘನತೆ ನೈರ್ಮಲ್ಯತೆಗಳಿಗಾಗಿ ಆದರ್ಶ ಚಿಂತನೆ ಯೋಜನೆ ಮಹಿಮೆಗಳನ್ನು ತುಂಬುವ ಕರ್ತವ್ಯ ದೀಕ್ಷೆಯು. ಈ ದೇಗುಲದ ಆರಾಧಕ ಮಾನವನಲ್ಲವೇ?

ಭಾರತೀಯರ ಸದಾಚಾರ ಪರಿಪೂರ್ಣವಾದ ಜೀವಿತ ಸೌಧವು ಎಂದೂ ಪತನ ಭಂಗಗಳಿಗೆ ಬಲಿಯಾಗುವುದಲ್ಲ. ಅದನ್ನು ದಹಿಸಲು ಶೋಧಿತವಾದ ಯಾವ ಬೆಂಕಿಯಿಂದಲೂ ಸಾಧಿಸುವುದಲ್ಲ. ಅಚ್ಛೇದ್ಯವೂ ಅದಾಹ್ಯವೂ ಆದ ಆತ್ಮಸೌಂದರ್ಯ ಅದಕ್ಕಿದೆ. ಈ ಸೌಂದರ್ಯದ ಬೆಳಕನ್ನು ಭಾರತದ ಸ್ವಾತಂತ್ರ್ಯ ಹೊಂದಿದೆ. ರಾಜಕೀಯ, ಆರ್ಥಿಕ, ಮಾನಸಿಕ, ಆತ್ಮೀಯ ಸ್ವಾತಂತ್ರ್ಯ ಪಡೆಯುವ ದೇ...

(೧೭ನೇ ಪುಟದಿಂದ ಮುಂದುವರಿದುದು)

ಯಾಗಿ ಸಂಗ್ರಹಿಸಿರುವ ರಘುನಾಥ್‌ಪೇರಿಯವರ ಹಸ್ತಪ್ರತಿಯೊಂದರ ಶೀರ್ಷಿಕೆಯ ಪುಟದಲ್ಲಿ ಶಾದಿ ಷೆರಾಜಿಯವರ ಹಸ್ತಾಕ್ಷರವಿರುವುದನ್ನೂ ನಾವು ಕಂಡುಹಿಡಿದಿದ್ದೇವೆ. ಈ ಹಸ್ತಪ್ರತಿಯು ಅಕಬರ್, ಅನಂತರ ಷಹಾಜಹಾನ್ ಅವರ ಭಾಂಡಾರಕ್ಕೆ ಸೇರಿತ್ತು. ಮಧ್ಯ ಪ್ರಾಚ್ಯದ ಮೇಲೆ ಮಂಗೋಲರು ಆಕ್ರಮಣ ನಡೆಸಿದ ನಂತರ ತಾವು ಬಾಗ್ದಾದ್‌ಗೆ ವಲಸೆ ಹೋಗಬೇಕಾಯಿತೆಂದು ಶಾದಿ ಅವರಲ್ಲಿ ಬರೆದಿದ್ದಾರೆ. ಹಸ್ತಪ್ರತಿಯನ್ನು ಹೊಂದಿರುವವರು ಹೇಳುವಂತೆ ಈ ಅನ್ಯಾದೃಶ್ಯ ಸ್ವಹಸ್ತ ಕೃತಿಯು, ಕವಿಗಳು ಸ್ವತಃ ತಮ್ಮ ಕೈಯಿಂದಲೇ ಬರೆದ ಕೃತಿಗಳಲ್ಲಿ ಏಕಮಾತ್ರ ನಿದರ್ಶನವಾಗಿದೆ.

ನಿಜಾಮಿ, ಫಜೂಲಿ, ನಾಸಿಮ ಮತ್ತು ತಬ್ರೀಜ್ ಈ ಅಜರ್‌ಬೈಜಾನಿಯನ್ ಲೇಖಕರ ಕೃತಿಗಳ ಅನೇಕ ಹಸ್ತಪ್ರತಿಗಳನ್ನು ನಾವು ಭಾರತದ ವಾಚನಾಲಯಗಳಲ್ಲಿ ಕಂಡೆವು. ಇಂದಿನ ವರೆಗೆ ಸಂರಕ್ಷಿತವಾಗಿದ್ದ ಲಭ್ಯವಿರುವ ಹಸ್ತಪ್ರತಿಗಳಲ್ಲಿ ಸಾಯಿಬ್ ತಬ್ರೀಜ್ ಅವರು ಸ್ವತಃ ತಾವೇ ಪ್ರತಿ ಬರೆದ, ಅಜರ್‌ಬೈಜಾನಿಯನ್ ಸಾಹಿತ್ಯದಲ್ಲಿ ಸುಪ್ರಸಿದ್ಧವಾದ ಮಹಾಕೃತಿಗೆ ಸಂಬಂಧಪಟ್ಟ ಕಾವ್ಯಕೃತಿ ಸಂಗ್ರಹ(ಕುಳಿಜಾಟ್)ವು ಅತ್ಯಂತ ಅಮೋಘವಾದುದಾಗಿದೆ. ಡಾ। ಮಹಮ್ಮದ್ ಎಮಿರ್ ಹೈದರ್‌ಖಾನ್ ಅವರ ಖಾಸಗಿ ಸಂಗ್ರಹದಲ್ಲಿರುವ ಒಂದು ನೈಜ ಹಸ್ತಪ್ರತಿಯು ಕವಿಯ ಗಜಲ್‌ಗಳು ಮತ್ತು ಪದ್ಯಗಳ ೩,೩೦೮ ಸಹಸ್ರ ಸಾಲುಗಳನ್ನು ಒಳಗೊಂಡಿದೆ.

ನಾವು ಈ ಮೇಲೆ ವಿವರಿಸಿದಂತೆ ಪರ್ಷಿಯನ್ ಮತ್ತು ಉಜ್‌ಬೆಕ್ ಭಾಷೆಗಳ ಪ್ರಧಾನ ತಜ್‌ಕಿರಾ ಮತ್ತು ಬಜಾಜ್ (ಕಾವ್ಯಮಂಜರಿ)ಗಳ ಅನೇಕ ಹಸ್ತಪ್ರತಿಗಳು ಅಮೂಲ್ಯವಾದ ಸಮಾಚಾರವನ್ನೂ ಹಾಗೂ ಸಮೃದ್ಧವಾದ ವಿಷಯ ವಸ್ತುಗಳನ್ನೂ ಒದಗಿಸುತ್ತವೆ.

ಪ್ರಾಕೃತಿಕ ವಿಜ್ಞಾನಗಳ ಹಸ್ತಪ್ರತಿಗಳನ್ನು ಪರಿಶೀಲಿಸಿ ನೋಡಿದರೆ ಭಾರತದ ವೈದ್ಯ ವಿಜ್ಞಾನ ಮತ್ತು ಖಗೋಳ ವಿಜ್ಞಾನಗಳ ಬೆಳವಣಿಗೆಯ ಮೇಲೆ ತುಂಬ ಅನುಕೂಲಕರವಾದ ಪ್ರಭಾವವನ್ನು ಬೀರಿದ ಇಬ್ನ್ ಸಿನಾ, ಮಿರ್ಜಾ ಉಲುಗ್ ಬೇಗ್ ಮತ್ತು ಅಲಿಕುಷ್ಚಿ ಅವರುಗಳ ಕೃತಿಗಳು ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿದ್ದುವೆಂಬ ಸಂಗತಿ ವೇದ್ಯವಾಗುತ್ತದೆ.

—

ಕನ್ನಡ ಬರಹಗಾರರ ಬಳಗ

(೪ನೇ ಪುಟದಿಂದ ಮುಂದುವರಿದುದು)

"ಸಂಗ್ರಹಣ"ಕ್ಕಾಗಿಯೇ ಮೀಸಲಾಗಿಟ್ಟು ಹಗಲಿರುಳೂ ದುಡಿಯುತ್ತಿರುವರು. ಕಹಿ ಪ್ರಸಂಗಗಳನ್ನು ನುಂಗಿ ಸಿಹಿಯನ್ನೇ ಮೆಲುಕು ಹಾಕುತ್ತಾ ಇರುವ ಶ್ರೀಯುತರು ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ, ವಿಶೇಷ ಪುರವಣಿ–ಇತ್ಯಾದಿಗಳಲ್ಲಿ ಬಂದಂತಹ ಲೇಖಕರ ಭಾವಚಿತ್ರ ಮತ್ತು ಪರಿಚಯಗಳನ್ನು ಕತ್ತರಿಸಿ ತನ್ನ ಸಂಗ್ರಹಕ್ಕೆ ಸದ್ದಿಲ್ಲದೆ ಸೇರಿಸಿಕೊಳ್ಳುವರು. ಲೇಖಕರ ಕೃತಿಗಳ ಕುರಿತು ನಿಖರ ಯಾದಿಗಳನ್ನು ತಯಾರಿಸುವ ಶ್ರೀ। ಶೆಟ್ಟರು ತನ್ನ ಸಂಗ್ರಹವನ್ನು ಪರಿಪೂರ್ಣಗೊಳಿಸುವ ಉದ್ದೇಶದಿಂದ ಸಹಾಯಕ ಆಕರಗಳಿಂದ "ಅಪ್-ಟು-ಡೇಟ್" ಮಾಡುತ್ತಲೇ ಇರುವರು. ಎಷ್ಟೋ ಸಲ ಲೇಖಕರು ತಮ್ಮ "ಬಯೋಡೇಟ"ಇವರ ಸಂಗ್ರಹದಲ್ಲಿರಲಾರದು ಎಂದು ಸಂಪುಟಗಳನ್ನು ತೆರೆದು ನೋಡಿದಾಗ ಅಲ್ಲಿ ಅವರ ವಿಷಯ ಸಂಗ್ರಹಣೆಯಿರುವುದನ್ನು ಕಂಡು ಬೆರಗಾದವರು ಅನೇಕ ಮಂದಿ.

ವೃತ್ತಿಯಲ್ಲಿ ಅಧ್ಯಾಪಕರಾದ ಶ್ರೀ। ಶೆಟ್ಟಿಯವರು ಸ್ವಯಂ ಸೃಷ್ಟಿಶೀಲ ಸಾಹಿತಿಗಳು. ಮುಂದಿನ ಜನಾಂಗದವರಾದ ಮಕ್ಕಳ ಬೆಳವಣಿಗೆಗಾಗಿ, ಜ್ಞಾನವೃದ್ಧಿಗಾಗಿ ಸಾಕಷ್ಟು ಮಕ್ಕಳ ಸಾಹಿತ್ಯವನ್ನು ರಚಿಸಿದ್ದಾರೆ. ಬಾಲ ಸಹೋದರ ಸಂಘ... ವನ್ನು ಕಟ್ಟಿ ಬೆಳೆಸಿದ್ದಾರೆ. ಯುವಕರಿಗಾಗಿ ರಾತ್ರಿಶಾಲೆಯನ್ನು ತೆರೆದದ್ದಲ್ಲದೆ ಯುವಕರ ಸಂಘವನ್ನು ಕಟ್ಟಿದ ಅಭಿಮಾನ ಇವರ ಪಾಲಿಗಿದೆ. ಹಲವಾರು ಕಾದಂಬರಿ, ಪ್ರಬಂಧ, ಪತ್ರಿಕಾ ಲೇಖನ, ಕವಿತೆಗಳನ್ನೂ ಬರೆದಿರುವರು. ಮಾತ್ರವಲ್ಲದೆ ಯಕ್ಷಗಾನ, ಚಿತ್ರಕಲೆ, ಛಾಯಾಗ್ರಹಣ ಮತ್ತು ಅಂಚೆ ಚೀಟಿಗಳ ಸಂಗ್ರಹ ಶ್ರೀ। ಶೆಟ್ಟರ ಇತರ ಹವ್ಯಾಸಗಳು.

ಮುಂಬಯಿಯಲ್ಲಿ ನಡೆದ ಮುದ್ದಣ ಶತಮಾನೋತ್ಸವ, ಉಡುಪಿಯಲ್ಲಿ—ಕಾರಂತ ಅಭಿನಂದನೋತ್ಸವ ಮತ್ತು ಗ್ರಂಥೋತ್ಸವ, ಕಾಸರಗೋಡಿನಲ್ಲಿ ಕೇರಳ ಸಾಹಿತ್ಯ ಸಮ್ಮೇಳನ, ಕಿನ್ನಿಗೋಳಿಯಲ್ಲಿ ಯುಗಪುರುಷದ ರಜತೋತ್ಸವ, ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವ, ಮಂಗಳೂರಲ್ಲಿ ಸಂಜೆ ಶತಮಾನೋತ್ಸವ ಮತ್ತು ಇಂತಹ ಹತ್ತಾರು ಕಾರ್ಯಕ್ರಮಗಳಲ್ಲಿ ಶ್ರೀಯುತರು ತಮ್ಮ ಪ್ರದರ್ಶನವನ್ನು ಏರ್ಪಡಿಸಿದ್ದರು. ಇವರ ಪ್ರದರ್ಶನದಿಂದ ಮೂಲಕ ಸಂಗ್ರಹದಿಂದ ಆದ ಉಪಕಾರವನ್ನು ಅದರ ಬೆಲೆಯನ್ನು ಇಂತಿಷ್ಟೇ ಎಂದು ಹೇಳುವಂತಿಲ್ಲ. ಭಾರತದಲ್ಲಿ ಇಂತಹದೇ ಕಾರ್ಯವೊಂದನ್ನು ಕೈಗೊಂಡವರು ಮಾಡುವುದನ್ನು ಬಿಟ್ಟರೆ ಬೇರೆ ಯಾವ ಭಾಷೆಗಳಲ್ಲೂ ಇಂತಹ ಕೆಲಸಗಳು ನಡೆದಿಲ್ಲ. ನಮಗೀಗ ಇದು ಅವಶ್ಯವೇ ಆಗಿದೆ. ಇದು ಕೇವಲ ಸಂಶೋಧಕರಿಗೇ ಅಲ್ಲದೆ ಸಾಹಿತ್ಯ ಚರಿತ್ರಕಾರರಿಗೂ ಅತೀ ಅಮೂಲ್ಯವಾಗಿದೆ. ಇಂತಹ ಪ್ರದರ್ಶನಗಳನ್ನು ನಾಡಿನ ಉತ್ಸವಗಳಲ್ಲೆಲ್ಲಾ ಶ್ರೀ। ಶೆಟ್ಟರನ್ನು ಕರೆಸಿ ಏರ್ಪಡಿಸಿದಲ್ಲಿ ಜನರು ಸಾಕಷ್ಟು ವಿಷಯಗಳನ್ನು ಅರಿತುಕೊಳ್ಳಬಹುದು. ಜೊತೆಗೆ ಹಿರಿ–ಕಿರಿ–ಮರಿ ಸಾಹಿತಿಗಳ ನೆನಪೂ ನಮ್ಮಲ್ಲಿ ಅಜ್ಜಳಿಯದೆ ಉಳಿಯಲು ಸಹಕಾರಿಯೂಗುವುದು. ಶ್ರೀ। ಶೆಟ್ಟರಿಗೂ ಲೇಖಕರೊಡನೆ–ಸಮಾಜದೊಡನೆ ನಿಕಟ ಸಂಪರ್ಕವನ್ನಿರಿಸಿಕೊಳ್ಳುವುದಕ್ಕೂ ಸಾಧ್ಯವಾಗುವುದು. ಅವರ ಸಂಗ್ರಹ ಬೆಳೆದಷ್ಟು ನಮ್ಮ ಸಾಹಿತ್ಯ ದೃಷ್ಟಿಕೋಣ ವಿಶಾಲವಾಗುವುದು ಎಂಬುದನ್ನು ಗಮನದಲ್ಲಿಟ್ಟುಕೊಂಡು ತುಂಬು ಹೃದಯದಿಂದ ಅವರಿಗೆ ನಾವೆಲ್ಲಾ ಸಹಕರಿಸೋಣ.

ಸಮಾಜದ ಗಣ್ಯ ವ್ಯಕ್ತಿಗಳಿಂದ, ಹಿರಿಯ ಸಾಹಿತಿಗಳಿಂದ 'ಶಹಭಾಸ್' ಎಂದು ಪ್ರೋತ್ಸಾಹಿಸಲ್ಪಟ್ಟ ಶ್ರೀ। ಶೆಟ್ಟರನ್ನು ಹಲವಾರು ಸಂಘ ಸಂಸ್ಥೆಗಳು ಗೌರವಿಸಿವೆ, ಸನ್ಮಾನಿಸಿವೆ. ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಪಡಿಸುವ "ಕನ್ನಡದಲ್ಲಿ ಯಾರು ಯಾರು?" ಎಂಬ ಯೋಜನೆಯೂ ಶ್ರೀ। ಶೆಟ್ಟರ ಪ್ರಭಾವದಿಂದಲೇ. ಮಧುರ ವ್ಯಕ್ತಿತ್ವದ ಶ್ರೀ। ಶೆಟ್ಟರು ಅವಿರತವಾಗಿ ದುಡಿದು ನಾಡಿಗೆ ಈಯುತ್ತಿರುವ ಕಾಣ್ಕೆಗೆ ನಾವೆಷ್ಟು ಕೃತಜ್ಞರಾಗಿದ್ದರೂ ಅದು ಬರೀ ಅಲ್ಪವೇ ಸರಿ. ಇದು ಕನ್ನಡಿಯ ಸೌಭಾಗ್ಯವಲ್ಲದೆ ಮತ್ತೇನು?

(ಶ್ರೀ। ಟಿ. ಚಂದ್ರರಾಜ ಶೆಟ್ಟಿಯವರನ್ನು ಮಂಗಳೂರಿನ ಕನ್ನಡ ಸಂಘದವರು ಈ ತಿಂಗಳಲ್ಲಿ ಸನ್ಮಾನಿಸುವರು.)

———

... ಗುಲಕ್ಕೆ ಬಳಸಲಾಗಿಯೇ ಭೂದೇವಿಯ ಆರಾಧಕರಾಗಿ ಭಾರತೀಯರು ಜಗತ್ತಿನಲ್ಲಿ ಮೆರೆಯಲಿದ್ದಿದ್ದಾರೆ. ಇದನ್ನು ತುಂಬಿ ಬೆಳೆಸಿ ತರುವ ವಿಶ್ವಾಕಾಶದಲ್ಲಿ ನಮ್ಮ ಭಾರತದ ಕೇತನದ ಸಂದೇಶವನ್ನು ಮೆರೆಸಲಿರುವ ಶಕ್ತಿಯ ಅನುಗ್ರಹಕ್ಕೆ ಪಾತ್ರರಾಗುವುದು ನಮ್ಮೆಲ್ಲರ ಕರ್ತವ್ಯ. ಈ ಕರ್ತವ್ಯ ಸಾಧನೆ ಎಲ್ಲರಲ್ಲೂ ಬರುವ ಸನ್ಮತಿ ಮೊಳೆಯಲಿ. ಮೊಳೆ ಮೊಳೆದು ಅದು ಫಲಿಸಲಿ. ಈ ಆಶೆ ನಮಗಿರಲಿ. ಅದಕ್ಕೆ ಶ್ರಮ ತುಂಬಿ ಬರಲಿ. ಈ ಭದ್ರತೆಯ ಮಂಗಳ ಜಯಗಾನ ಮಂತ್ರ ಭಾರತದ ಸ್ವಾತಂತ್ರ್ಯ ಮಂತ್ರ.

ಎಸ್. ಸುಬ್ರಾಯನ್.
೧೫–೮–೧೯೭೩.

ಭಾರತದಲ್ಲಿ ಒಳನಾಡಿನ ಜಲಸಾರಿಗೆ

ಭಾರತದಲ್ಲಿ ಜಲಸಾರಿಗೆಗೆ ಅನುಕೂಲವಿರುವ ನದಿಗಳ ಉದ್ದ ೬೨೫೦ ಮೈಲಿ. ಸಣ್ಣ ದೊಡ್ಡ ಕಾಲುವೆಗಳೂ ಹಲವು—ಇಂತಹ ಕಾಲುವೆಗಳ ಒಟ್ಟು ಉದ್ದ ೩೦೦೦ ಮೈಲಿ; ಈ ದೊಡ್ಡ ಕಾಲುವೆಗಳು ಸೇರಿ, ದೇಶದಲ್ಲಿ ಒಟ್ಟು ೮೯೩೮ ಮೈಲುಗಳಷ್ಟು ಜಲಸಾರಿಗೆಯ ಮಾರ್ಗವಿದ್ದಂತಾಯಿತು.

ಗಂಗಾ–ಯಮುನಾ ನದಿಗಳು ಹರಿವ ಉತ್ತರ ಪ್ರದೇಶದಲ್ಲಿ ೧೪೩೮ ಮೈಲಿಗಳಷ್ಟು, ಅಸ್ಸಾಮಿನಲ್ಲಿ ೧೨೫೦ ಮೈಲಿ, ಪಶ್ಚಿಮ ಬಂಗಾಳದಲ್ಲಿ ೯೩೮ ಮೈಲಿ—ಹೀಗೆ ಜಲಸಾರಿಗೆಯ ಮಾರ್ಗಗಳಿವೆ.

ಮರದ ಸಣ್ಣ ರೆಂಬೆಯೊಂದು ನದಿಯಲ್ಲಿ ತೇಲುತ್ತಾ ಹೋಗುತ್ತಿದೆ; ಅದು ಕೇವಲ ಒಂದು ಕಪ್ಪೆಯನ್ನು ದಡಕ್ಕೆ ಕೊಂಡೊಯ್ಯಬಹುದು. ಅದೇ ಒಂದು ಮರದ ದಿಮ್ಮಿಯಾದರೆ, ಮನುಷ್ಯನನ್ನು ನದಿ ದಾಟಿಸಬಹುದು. ಅನೇಕ ಮರದ ದಿಮ್ಮಿಗಳನ್ನು ಸೇರಿಸಿ ಮಾಡಿದ ತೆಪ್ಪವು ಅನೇಕ ಜನರನ್ನು, ಅವರ ಸಾಮಾನುಗಳ ಸಮೇತ ನದಿ ದಾಟಿಸಬಲ್ಲುದು.

ತೆಪ್ಪ ಅಥವಾ ದೊಡ್ಡ ಮರದ ದಿಮ್ಮಿಯಲ್ಲಿ ಮಾಡಿದ "ಓಡು" ಜಲ ಸಾರಿಗೆಯ ಪ್ರಾಚೀನ ವಿಧಾನವಾಗಿರಬೇಕು. ಅದರ ತಯಾರಿಕೆಗೆ ಯಾವುದೇ ಉಪಕರಣಗಳಾಗಲೀ ಅಥವಾ ಬಡಗಿತನದ ಕುಶಲತೆಯಾಗಲೀ ಅಗತ್ಯವಿಲ್ಲ. ಇದು ಬಹುಶಃ ಚಕ್ರದ ಆವಿಷ್ಕಾರದ ಮೊದಲೇ ಹುಟ್ಟಿರಬೇಕು. ಇದನ್ನೇ ಪ್ರಾಚೀನ ಜನಾಂಗವು ನೈಲ್, ಯೂಫ್ರಟಿಸ್, ಟೈಗ್ರಿಸ್, ಗಂಗಾ ಅಥವಾ ಯಮುನಾ ನದಿಗಳ ಮೇಲೆ ತೇಲಿಹೋಗಿ ದಾಟಲು ಬಳಸುತ್ತಿದ್ದಿರಬೇಕು.

ತೆಪ್ಪವು ಕೇವಲ ನೀರಿನೊಡನೆ ಮಾತ್ರ ತೇಲಿಹೋಗಬಲ್ಲುದು. ಹುಟ್ಟಿನ ಆವಿಷ್ಕಾರದ ನಂತರ ದೋಣಿಯು ಹರಿವ ನೀರಿನ ವಿರುದ್ಧ ತೇಲಿ ಹೋಗಲು ಸಾಧ್ಯವಾಯಿತು. ಅಂದಿನಿಂದಲೇ ಹರಿಯುವ ನೀರಿನ ಎರಡೂ ಕಡೆಯೂ ಚಲಿಸಲು ಸಾಧ್ಯವಾಯಿತೆನ್ನಬೇಕು.

ಪ್ರಾಚೀನ ಭಾರತೀಯರು ತಮ್ಮ ನದಿಗಳನ್ನು ಪ್ರೀತಿಸುತ್ತಿದ್ದರಲ್ಲದೆ, ಪೂಜಿಸುತ್ತಿದ್ದರು. ಭಾರತೀಯ ಸಂಸ್ಕೃತಿಯ ಉಗಮ ನದಿಗಳ ದಡಗಳ ಮೇಲೆಯೇ ಆಯಿತು. ಭಾರತೀಯರು ಸಮುದ್ರದ ಮೂಲಕ ದೂರದೇಶಗಳ ಅನ್ವೇಷಣೆಗೆ ತೊಡಗುವ ಮೊದಲು, ಅವರು ದೇಶದ ತುಂಬಾ ಹರಡಿರುವ ನದಿಗಳಲ್ಲಿ ತೆಪ್ಪ, ದೋಣಿಗಳ ಮೂಲಕ ಪ್ರಯಾಣಮಾಡುತ್ತಿದ್ದರು.

ದೇಶದ ಮಧ್ಯಭಾಗದಲ್ಲಿ ಪೂರ್ವ, ಪಶ್ಚಿಮವಾಗಿ ನರ್ಮದಾ ನದಿಯು ಹರಿಯುತ್ತಿದ್ದರೆ, ಅದರಿಂದ ದಕ್ಷಿಣಕ್ಕೆ ಪಶ್ಚಿಮದಿಂದ ಪೂರ್ವದಿಕ್ಕಿಗೆ ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳು ಹರಿಯುತ್ತಿವೆ. ಉತ್ತರದ ಅನೇಕ ನದಿಗಳು ಹಿಮಾವೃತವಾದ ಹಿಮಾಲಯದಲ್ಲಿ ಹುಟ್ಟುತ್ತವೆ. ಅವುಗಳಲ್ಲಿ ಸಿಂಧೂ ನದಿಯು ಪಶ್ಚಿಮಕ್ಕೆ ಹರಿದರೆ, ಬ್ರಹ್ಮಪುತ್ರಾ, ಗಂಗಾ ಮತ್ತು ಯಮುನಾ ನದಿಗಳು ಪೂರ್ವದ ಕಡೆ ಪ್ರವಹಿಸುತ್ತವೆ. ಅವುಗಳ ಉಪನದಿಗಳು ಅಸಂಖ್ಯ.

ಜಲಸಾರಿಗೆಗೆ ಅನುಕೂಲವಿರುವ ಭಾರತೀಯ ನದಿಗಳ ಉದ್ದ ಹತ್ತು ಸಾವಿರ ಕಿಲೋ ಮೀಟರ್ (೬೨೫೦ ಮೈಲಿ)ಗಳಿಗೂ ಹೆಚ್ಚು. ನದಿನೀರನ್ನು ನೀರಾವರಿಗೆ ಉಪಯೋಗಿಸಲು ಅನೇಕ ಕಾಲುವೆಗಳನ್ನು ತೋಡಲಾಗಿದೆ. ಅವುಗಳಲ್ಲಿ ಕೆಲವು ಸಾರಿಗೆಗೆ ಅನುಕೂಲವಾಗುವಂತೆ ಗಾತ್ರದಲ್ಲಿ ದೊಡ್ಡದಾಗಿವೆ. ಇಂತಹ ಕಾಲುವೆಗಳ ಉದ್ದ ೪,೮೦೦ ಕಿ.ಮೀ.(೩೦೦೦ ಮೈಲಿ). ಆದ್ದರಿಂದ ದೇಶದಲ್ಲಿ ಒಟ್ಟು ೧೪,೩೦೦ ಕಿ.ಮೀ. (೮೯೩೮ ಮೈಲಿ) ಜಲಸಾರಿಗೆಯ ಮಾರ್ಗವಿದ್ದಂತಾಯಿತು.

ಗಂಗಾ, ಯಮುನೆಯರು ಹರಿಯುವ ಉತ್ತರ ಪ್ರದೇಶದಲ್ಲಿ ಅತಿಹೆಚ್ಚು ಎಂದರೆ ೨೩೦೦ ಕಿ.ಮೀ. (೧೪೩೮ ಮೈಲಿ) ಉದ್ದ ಜಲಸಾರಿಗೆಯ ಮಾರ್ಗವಿದೆ. ೨,೦೦೦ ಕಿ.ಮೀ.(೧೨೫೦ ಮೈಲಿ) ಉದ್ದದ ಜಲ ಸಾರಿಗೆ ಮಾರ್ಗವಿರುವ ಅಸ್ಸಾಂ ಎರಡನೆಯ ಸ್ಥಾನವನ್ನು, ೧,೫೦೦ ಕಿ. ಮೀ. (೯೩೮ ಮೈಲಿ) ಮಾರ್ಗವಿರುವ ಪಶ್ಚಿಮ ಬಂಗಾಳ ಮೂರನೆಯ ಸ್ಥಾನವನ್ನು ಪಡೆದಿವೆ.

ಜಲಸಾರಿಗೆಯ ಕಾಲುವೆಗಳ ಪ್ರಮಾಣವು ಆಂಧ್ರಪ್ರದೇಶದಲ್ಲಿ ಸುಮಾರು ೧,೭೦೦ ಕಿ.ಮೀ.(೧೦೬೨ ಮೈಲಿ) ಪಶ್ಚಿಮ ಬಂಗಾಳದಲ್ಲಿ ೮೦೦ ಕಿ.ಮೀ. ಮತ್ತು ಕೇರಳದಲ್ಲಿ ೭೦೦ ಕಿ.ಮೀ. (೪೩೮ ಮೈಲಿ) ಇದೆ.

ಭಾರತದ ಒಳನಾಡು ಜಲಸಾರಿಗೆಯ ಐದನೇ ಒಂದು ಭಾಗದಲ್ಲಿ ಯಾಂತ್ರೀಕೃತ ದೋಣಿ ಮತ್ತು ಸ್ಟೀಮರುಗಳನ್ನು ಬಳಸಲಾಗುತ್ತಿದೆ. ಬ್ರಹ್ಮಪುತ್ರಾ ನದಿಯಲ್ಲಿ ಘಲ್ಸಿಘಾಟ್‌ನಿಂದ ಧುಬ್ರಿಯ ವರೆಗಿನ ೭೦೦ ಕಿ.ಮೀ. (೪೩೮ ಮೈಲಿ) ಹೆಚ್ಚು ಉದ್ದದ ಮಾರ್ಗದಲ್ಲಿ ಯಾಂತ್ರೀಕೃತ ದೋಣಿಗಳನ್ನು ಓಡಿಸಲಾಗುತ್ತಿದೆ. ಅದರಂತೆ, ಗಂಗಾನದಿಯಲ್ಲಿ ಹರಿದ್ವಾರದಿಂದ ಗಿರಿಯದ್ವರೆಗೂ ಯಾಂತ್ರೀಕೃತ ದೋಣಿಗಳನ್ನು ನಡೆಸಲಾಗುತ್ತಿದೆ. ಫರಕ್ಕಾರ ಬಳಿ ಗಂಗಾ ನದಿ ಮತ್ತು ಜಂಗೀಪುರದ ಬಳಿ ಭಾಗೀರಥಿಯನ್ನು ಸೇರಿಸುವ ಕಾಲುವೆಯ ನಿರ್ಮಾಣ ಮುಗಿದಿದೆ. ಇದು ಜಲಸಾರಿಗೆಗೆ ಬಿಡುಗಡೆಯಾದಾಗ ಗಂಗಾನದಿಯಲ್ಲಿ ಕಲ್ಕತ್ತಾದ ವರೆಗೂ ಪ್ರಯಾಣ ಮಾಡಬಹುದು.

ಉತ್ತರಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳಗಳ ನದಿಗಳು ಹರಿಯುವ ಜಿಲ್ಲೆಗಳಲ್ಲಿ ನಿಶ್ಚಿತ ಜಲಸಾರಿಗೆ ಮಾರ್ಗಗಳ ನಿರ್ಮಾಣದ ಬಗ್ಗೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಇದರಿಂದಾಗಿ, ಕಲ್ಕತ್ತಾ ಮತ್ತು ಹಾಲ್ದಿಯಾ ಮೂಲಕ ರಫ್ತು ಉದ್ಯಮ ಬೆಳೆಯಲು ಸಹಾಯಕವಾಗುತ್ತದೆ.

ಗಂಗಾ ನದಿಯ ಉಪನದಿಯಾದ ಘಾಗ್ರಾ ನದಿಯಲ್ಲಿ ವರ್ಷದುದ್ದಕ್ಕೂ ಜಲ ಸಾರಿಗೆಯನ್ನು ನಡೆಸಬಹುದಾಗಿದ್ದು, ದೋಹರಿಘಾಟ್ ಮತ್ತು ರೆವೆಲ್‌ಗಂಜ್‌ಗಳ ಮಧ್ಯೆ ವಾಣಿಜ್ಯ ಸರಕು ಸಾಗಣೆಯನ್ನು ಕೈಗೊಳ್ಳುವ ಬಗ್ಗೆ ಸರ್ಕಾರವು ಯೋಚಿಸುತ್ತಿದೆ; ಅದರಂತೆಯೇ ಗೋದಾವರಿ, ಕೃಷ್ಣಾ, ನರ್ಮದಾ, ಮಾಂಡವಿ ನದಿಗಳಲ್ಲೂ ಇಂತಹ ಸಾರಿಗೆಯನ್ನು ಏರ್ಪಡಿಸಲು ಉದ್ದೇಶಿಸಲಾಗಿದೆ. ಆಗ ಈ ಮಾರ್ಗಗಳಲ್ಲಿ ನದಿಬಂದರುಗಳ ನಿರ್ಮಾಣವಾಗಬೇಕಿದ್ದು, ಅದಕ್ಕಾಗಿ ಸೂಕ್ತಸ್ಥಳಗಳನ್ನು ಆಯ್ಕೆಮಾಡಲಾಗುತ್ತಿದೆ.

ಸ್ವಾತಂತ್ರ್ಯಾನಂತರದಲ್ಲಿ ಸರ್ಕಾರವು ಒಳನಾಡು ಜಲಸಾರಿಗೆಯ ಅಭಿವೃದ್ಧಿಗೆ ಅನೇಕ ಕ್ರಮಗಳನ್ನು ಕೈಗೊಂಡಿದೆ. ೧೯೬೮ರಲ್ಲಿ ನೇಮಿಸಲಾಗಿದ್ದ ಭಗವತಿ ಸಮಿತಿಯು ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಕರಗತಮಾಡಲು ೧೨ ಕೋಟಿ ರೂ.ಗಳ ವೆಚ್ಚದ ೩೨ ಯೋಜನೆಗಳನ್ನು ಶಿಫಾರಸು ಮಾಡಿತ್ತು. ಕೇಂದ್ರದ ಸಹಾಯದಿಂದ ಇದರಲ್ಲಿ ೮ ಕೋಟಿ ರೂ. ವೆಚ್ಚದ ೨೪ ಯೋಜನೆಗಳನ್ನು ಕೈಗೆತ್ತಿಗೊಳ್ಳಲಾಗಿದೆ. ಇದರಲ್ಲಿ ಗೋವಾದ ಕಂಜರ್ಪಾ ಕಾಲುವೆಯನ್ನು ಆಳ ಮತ್ತು ಅಗಲಗೊಳಿಸುವ ಮತ್ತು ಒರಿಸ್ಸಾ ಮತ್ತು ಕೇರಳಗಳ ಕೆಲವು ಯೋಜನೆಗಳು ಸೇರಿವೆ.

ಐದನೇ ಯೋಜನೆಯ ಅವಧಿಯಲ್ಲಿ ಒಳನಾಡು ಜಲಸಾರಿಗೆಯ ಅಭಿವೃದ್ಧಿಗೆ ೪೦ ಕೋಟಿ ರೂ.ಗಳನ್ನೊದಗಿಸಲಾಗಿದೆ. ಇದರಲ್ಲಿ ೨೬ ಕೋಟಿ ರೂ.ಗಳನ್ನು ಕೇಂದ್ರ ಯೋಜನೆಗಳಿಗೂ, ಉಳಿದುದನ್ನು ಕೇಂದ್ರ ಸಹಾಯದ ಯೋಜನೆಗಳಿಗೂ ನೀಡಲಾಗಿದೆ. ಅಲ್ಲದೆ. ಇದರ ಜೊತೆಗೆ ರಾಜ್ಯದ ಯೋಜನೆಗಳಿಗೂ ೭ ಕೋಟಿ ರೂ.ಗಳನ್ನೊದಗಿಸಲಾಗಿದೆ.

——

(೧ನೇ ಪುಟದಿಂದ ಮುಂದುವರಿದುದು)

ಗಳನ್ನೂ ಮತ್ತು ದುರಾಕಾಂಕ್ಷೆಗಳನ್ನೂ ಭಂಗಗೊಳಿಸಿ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ನಾವು ಹೆಮ್ಮೆಯಿಂದ ತಲೆ ಎತ್ತುವಂತಾಗಿದ್ದರೆ ಅದಕ್ಕೆ ನಾವು ಸೋವಿಯತ್ ಒಕ್ಕೂಟದೊಡನೆ ಮಾಡಿಕೊಂಡ ಒಪ್ಪಂದ ಮತ್ತು ಅದರಿಂದ ಪಡೆದ ಬಲ, ಆತ್ಮವಿಶ್ವಾಸಗಳೇ ಕಾರಣ.

ಒಪ್ಪಂದಕ್ಕೆ ಅಂಕಿತ ಹಾಕಿದ ನಂತರದ ನಾಲ್ಕು ವರ್ಷಗಳಲ್ಲಿ ಸೋವಿಯತ್ ಒಕ್ಕೂಟದೊಡನೆಯ ನಮ್ಮ ಮೈತ್ರಿ ಹಾಗೂ ನಮ್ಮ ಸ್ವಾತಂತ್ರ್ಯ ಇನ್ನಷ್ಟು ಬಲಗೊಂಡಿದೆ. ಈ ಒಪ್ಪಂದದ ಫಲವಾಗಿಯೇ ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರಕ್ಕಾಗಿ ಭಾರತ—ಸೋವಿಯತ್ ಅಂತರ್–ಸರಕಾರಿ ಆಯೋಗ ರಚನೆಯ ನಿರ್ಣಯ ಕೈಕೊಳ್ಳಲಾಯಿತು. ಇದರಿಂದ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಇನ್ನಿಷ್ಟು

(೨೦ನೇ ಪುಟಕ್ಕೆ ಮುಂದುವರಿದಿದೆ)

ಕೃಷಿಕಾರ್ಮಿಕರ ಹಿತರಕ್ಷಣೆ

[ಶ್ರೀ। ಬಾಲಗೋವಿಂದ ವರ್ಮ, ಕೇಂದ್ರ ಕಾರ್ಮಿಕ ಶಾಖೆಯ ಉಪಮಂತ್ರಿಗಳು]

ನಮ್ಮದು ಕೃಷಿಪ್ರಧಾನವಾದ ದೇಶ. ಕೃಷಿ ಕಾರ್ಮಿಕರ ಸಂಖ್ಯೆ ಅಗಾಧವಾಗಿದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕೃಷಿ ಕಾರ್ಮಿಕರು ಸಮಾಜದಲ್ಲಿ ದುರ್ಬಲ ವರ್ಗಕ್ಕೆ ಸೇರುತ್ತಾರೆ. ಸರ್ಕಾರ ಕೈಗೊಂಡಿರುವ ಪಂಚವಾರ್ಷಿಕ ಯೋಜನೆಗಳ ಫಲವಾಗಿ ದೇಶದ ಆರ್ಥಿಕ ಅಭ್ಯುದಯ ಸಾಧ್ಯವಾಗಿದೆಯಲ್ಲದೇ. ಹೊಸ ನಮೂನೆಯ ಕೃಷಿ ಪದ್ಧತಿಗಳನ್ನು ರೂಢಿಸಿಕೊಳ್ಳಲಾಗಿದೆ. ಹೊಸ ಸುಧಾರಿಸಿದ ಜಾತಿಯ ಬಿತ್ತನೆಯ ಬೀಜಗಳನ್ನು ಒದಗಿಸಲಾಗಿದೆ. ಇಷ್ಟೆಲ್ಲಾ ಕೃಷಿ ಕಾರ್ಯಕ್ರಮಗಳ ಪ್ರಯೋಜನವನ್ನು ಉಚ್ಚ ಹಾಗೂ ಮಧ್ಯಮ ವರ್ಗದ ರೈತರೇ ಪಡೆದುಕೊಂಡರು.

ನೀರಾವರಿ ಕಾರ್ಯಕ್ರಮ ಗ್ರಾಮ ವಿದ್ಯುದೀಕರಣ, ರಸ್ತೆ ನಿರ್ಮಾಣ ಇತ್ಯಾದಿ ಕಾರ್ಯ ಯೋಜನೆಗಳಿಂದ ಬಹುಸಂಖ್ಯ ಕೃಷಿ ಕಾರ್ಮಿಕರಿಗೆ ಆಗಬೇಕಾಗಿದ್ದಷ್ಟು ಪ್ರಯೋಜನವಾಗಿಲ್ಲ,

ಕೃಷಿ ಕಾರ್ಮಿಕರಲ್ಲಿ ಸಂಘಟನಾಶಕ್ತಿಯನ್ನು ಅಭಿವೃದ್ಧಿಪಡಿಸಲು ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಕೃಷಿ ಕಾರ್ಮಿಕರಿಗಾಗಿ ಗ್ರಾಮಾಂತರ ಶಿಬಿರಗಳನ್ನು ಏರ್ಪಡಿಸುವ ಕಾರ್ಯಕ್ರಮ ಹಾಕಿಕೊಂಡಿದೆ. ಕೃಷಿ ಕಾರ್ಮಿಕರ ಸಂಘಟನೆಯಲ್ಲಿ ನಿರತರಾದ ಭೂರಹಿತ ಕಾರ್ಮಿಕರಿಗೆ ಈ ಶಿಬಿರಗಳಲ್ಲಿ ಭಾಗವಹಿಸುವಂತೆ ಆಹ್ವಾನಿಸಲಾಗುವುದು.

ಹಿತರಕ್ಷಣಾ ಕ್ರಮಗಳು

ಭೂರಹಿತ ಹಾಗೂ ಕೃಷಿ ಕಾರ್ಮಿಕರ ಹಿತರಕ್ಷಣೆಗಾಗಿ ಈಗ ಅನೇಕ ಕಾರ್ಯಕ್ರಮಗಳು ಜಾರಿಯಲ್ಲಿವೆ. ಗ್ರಾಮಾಂತರದಲ್ಲಿ ನಿವೇಶನವಿಲ್ಲದ, ಇರಲು ಸ್ವಂತ ಮನೆಯಿಲ್ಲದ ಭೂರಹಿತ ಕಾರ್ಮಿಕರ ಕುಟುಂಬಗಳಿಗೆ ಮನೆಕಟ್ಟಲು ಉಚಿತ ನಿವೇಶನಗಳ ನೀಡಿಕೆ, ಈ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಮನೆಕಟ್ಟಲು ತಗಲುವ ವೆಚ್ಚದ ನೂರಕ್ಕೆ ನೂರರಷ್ಟನ್ನು ಕೇಂದ್ರ ಸರ್ಕಾರ ಸಹಾಯಧನರೂಪದಲ್ಲಿ ಒದಗಿಸುವುದು. ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವಿನ ರೂಪದಲ್ಲಿ ಇದನ್ನು ನೀಡಲಾಗುವುದು.

ಕುಡಿಯಲು ಸಾಕಷ್ಟು ನೀರು ಪೂರೈಕೆಯಾಗದಿರುವ ಕಡೆಗಳಲ್ಲಿ ೪೦-೫೦ ಮನೆಗಳಿಗೆ ಒಂದರಂತೆ ಕುಡಿಯುವ ನೀರಿನ ಬಾವಿಯನ್ನು ನಿರ್ಮಿಸಲಾಗುವುದು. ಈ ಕಾರ್ಯ ಇನ್ನೂ ಆಗದಿರುವ ಕಡೆಗಳಲ್ಲಿ ಸಂಬಂಧಿಸಿದ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಈ ದಿಶೆಯಲ್ಲಿ ಸೂಕ್ತ ಶಾಸನಗಳನ್ನು ರೂಪಿಸಲು ತ್ವರಿತಕ್ರಮ ಕೈಗೊಳ್ಳಲಿವೆ.

ಕೃಷಿಕಾರ್ಮಿಕರ ತರಬೇತಿ

ಕೃಷಿಕಾರ್ಮಿಕರು ತಮ್ಮ ಕರ್ತವ್ಯಗಳೇನು? ಹಕ್ಕುಬಾಧ್ಯತೆಗಳೇನು? ದೇಶದ ಪುನರ್‌ನಿರ್ಮಾಣದಲ್ಲಿ ತಾವು ನಿರ್ವಹಿಸಬೇಕಾದ ಪಾತ್ರವೇನು? ಎಂಬುದನ್ನು ಕಾರ್ಮಿಕರು ತಿಳಿದುಕೊಂಡಿರಬೇಕು ಎಂದು ಸರ್ಕಾರ ಅಪೇಕ್ಷಿಸುತ್ತದೆ. ಈ ಗುರಿಸಾಧನೆಗಾಗಿ ಕಾರ್ಮಿಕರನ್ನೂ ಕಾರ್ಮಿಕ ಶಿಕ್ಷಣ ಕಾರ್ಯಯೋಜನೆಗೆ ಒಳಪಡಿಸಲಾಗಿದ್ದು ಕಾರ್ಮಿಕರ ಶಿಕ್ಷಣದ ಕೇಂದ್ರಮಂಡಳಿ ಈವರೆಗೆ ಒಟ್ಟು ೩,೭೦೦ ಕೃಷಿ ಕಾರ್ಮಿಕರಿಗೆ ತರಬೇತಿ ನೀಡಿದೆ. ಈ ಮಂಡಳಿಯು ಕೆಲವು ಕಾರ್ಯಕ್ರಮಗಳನ್ನೂ ಏರ್ಪಡಿಸಿದೆ.

ಕೃಷಿ ಕಾರ್ಮಿಕ ಸಂಘಟನೆ, ಭೂರಹಿತ ಕಾರ್ಮಿಕರಿಗೆ ಕನಿಷ್ಠ ಕೂಲಿ, ಉದ್ಯೋಗ ಭರವಸೆಯೋಜನೆ, ಕುಟುಂಬಯೋಜನೆ ಇತ್ಯಾದಿ ಈ ಶಿಕ್ಷಣಕ್ರಮದಲ್ಲಿ ಸೇರಿವೆ.

ರೈತರ ಋಣವಿಮೋಚನೆ

ಕೃಷಿಕಾರ್ಮಿಕರು ಸಾಲದ ಹೊರೆಯಿಂದ ನರಳುತ್ತಿದ್ದ ಸರ್ಕಾರ ಅವರ ಈ ಹೊರೆಯನ್ನು ನಿವಾರಿಸಲು ಉದ್ಯುಕ್ತವಾಗಿದೆ. ಬಡ್ಡಿ ವ್ಯಾಪಾರಿಗಳ ಕಪಿಮುಷ್ಟಿಯಿಂದ ಕೃಷಿ ಕಾರ್ಮಿಕರನ್ನು ವಿಮೋಚನೆಮಾಡಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತದೆ. ಕುಡಿತ, ಜೂಜಾಟ ಇತ್ಯಾದಿ ದುಶ್ಚಟಗಳಿಂದ ದೂರವಿರಬೇಕೆಂದು ಇದರಿಂದ ಹಣದ ಅಪವ್ಯಯ ತಪ್ಪುವುದೆಂದು ಕೃಷಿಕಾರ್ಮಿಕರಿಗೆ ಮನವರಿಕೆ ಮಾಡಿಕೊಡಲಾಗುವುದು.

ಕೃಷಿ ಕಾರ್ಮಿಕರಿಗೆ ಸುಲಭವಾಗಿ ಹಾಗೂ ನ್ಯಾಯಬೆಲೆಯಲ್ಲಿ ಅಗತ್ಯವಾದ ವಸ್ತುಗಳು ದೊರೆಯುವಂತೆ ಮಾಡಲು ಸಹಕಾರ ಸಂಘಗಳ ಜಾಲವನ್ನು ವಿಸ್ತರಿಸಲಾಗುತ್ತಿದೆ. ಮನೆಕಟ್ಟಲೂ ಇವರಿಗೆ ಸುಲಭದಲ್ಲಿ ಸಾಲ ಸಿಗುವಂತೆ ಏರ್ಪಾಟುಮಾಡಲಾಗುತ್ತಿದೆ.

ಕನಿಷ್ಠ ವೇತನ ಭರವಸೆ

ಕನಿಷ್ಠ ವೇತನ ಕಾನೂನಿನ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುತ್ತಿಲ್ಲವೆಂದು ಸರ್ಕಾರಕ್ಕೆ ದೂರುಗಳು ಬಂದಿವೆ. ಇದರಿಂದಾಗಿ ಕೃಷಿ ಕಾರ್ಮಿಕರಿಗೆ ಮತ್ತು ಭೂರಹಿತ–ಕಾರ್ಮಿಕರಿಗೆ ಅವರಿಗೆ ಸಿಗಬೇಕಾದ ವೇತನ ಸಿಗುತ್ತಿಲ್ಲ. ಈ ಕಾನೂನನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಆಡಳಿತ ಯಂತ್ರದ ಕಾರ್ಯ ನಿರ್ವಹಣೆಗೆ ಸುಧಾರಣೆಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕೆಲಸ ಒಂದೇ ಬಗೆಯದಾದರೂ ವೇತನ ನೀಡುವಲ್ಲಿ ಪುರುಷರು—ಮಹಿಳೆಯರು ಎಂಬ ಭೇದ ಎಣಿಸಲಾಗುತ್ತಿದೆಯೆಂದು ದೂರುಗಳು ಬಂದಿವೆ. ಪುರುಷರು ಹಾಗೂ ಮಹಿಳೆಯರಿಗೆ ಸಮಾನ ವೇತನ ನೀಡುವಂತೆ ಕಾನೂನನ್ನೂ ರೂಪಿಸಿ ಜಾರಿಗೆ ತರಲು ಸರಕಾರ ಉದ್ದೇಶಿಸಿದೆ.

——


(೧೯ನೇ ಪುಟದಿಂದ ಮುಂದುವರಿದುದು)

ಭದ್ರಗೊಳಿಸಿ ಬಲಪಡಿಸಲು ಸಾಧ್ಯವಾಯಿತು.

ಇದೂ ಅಲ್ಲದೆ. ಲಿಯೋನೀದ್ ಬ್ರೆಜ್ನೇವ್ ಅವರು ೧೯೭೩ರಲ್ಲಿ ಭಾರತಕ್ಕೆ ಕೊಟ್ಟ ಭೇಟಿಯು ಭಾರತ–ಸೋವಿಯತ್ ಸಂಬಂಧಗಳಲ್ಲಿ ಅಪೂರ್ವ ಮಹತ್ವದ ಸಂಗತಿಯಾಗಿದೆ. ಅವರ ಭೇಟಿಯ ಸಮಯದಲ್ಲಿ ಅಂಕಿತಹಾಕಲಾದ ೧೫ ವರ್ಷಗಳ ಆರ್ಥಿಕ ಒಪ್ಪಂದವು ಭಾರತ-ಸೋವಿಯತ್ ಸಹಕಾರಕ್ಕೆ, ಲಿಯೊನೀದ್ ಬ್ರೆಜ್ನೇವ್ ಅವರ ಮಾತಿನಲ್ಲೇ ಹೇಳಬೇಕೆಂದರೆ, "ಭದ್ರವಾದ ಮತ್ತು ದೀರ್ಘಾವಧಿಯ ಸ್ವರೂಪ"ವನ್ನು ಕೊಟ್ಟಿತು. ನಮ್ಮ ಎರಡೂ ದೇಶಗಳ ನಡುವಣ ವಾಣಿಜ್ಯ ವಹಿವಾಟಿಗೆ ಇದು ಇನ್ನಷ್ಟು ಚೇತನ ನೀಡಿತು.

ಆದುದರಿಂದ ಚಾರಿತ್ರಿಕವಾದ ಈ ಆಗಸ್ಟ್ ತಿಂಗಳಲ್ಲಿ ಭಾರತದ ೨೮ನೇ ಸ್ವಾತಂತ್ರ್ಯೋತ್ಸವವನ್ನು ಹಾಗೂ ಭಾರತ–ಸೋವಿಯತ್ ಒಪ್ಪಂದದ ೪ನೇ ವಾರ್ಷಿಕೋತ್ಸವವನ್ನೂ ಒಟ್ಟಿಗೆ ಆಚರಿಸಲು ನಮಗೆ ಸಂತೋಷವಾಗುತ್ತದೆ.

—೦—





*DIVINE FRAGRANCE...
FOR A LOVELY
DREAM*

An invisible veil of divine fragrance...SONA, homage to your silken complexion. Incomparable aroma of pure MYSORE SANDAL OIL, blended into a dream.

Sri Ramakrishna Oil Mills, Mangalore 3 India.

PratibhaSRO711

ಶುದ್ಧವಾದ ಮೈಸೂರು
ಶ್ರೀಗಂಧ ತೈಲದ ಶ್ರೀಮಂತ ಸುಗಂಧ.....

★ ಸೋನಾ ★

ನೀವು ಸ್ನಾನಮಾಡುವಾಗ ಸೋನಾ ತನ್ನ ಶುದ್ಧವಾದ ಮೈಸೂರು ಗಂಧದೆಣ್ಣೆಯ ಆಹ್ಲಾದಕರ ಪರಿಮಳವನ್ನು ಸುತ್ತಲೂ ಹರಡುತ್ತದೆ. ಸೋನಾ ಸಾಬೂನಿನ ನವುರಾದ ನೊರೆಯಲ್ಲಿ ನಾವೀನ್ಯತೆಯಿದೆ. ಯಾವಾಗಲೂ ಸೋನಾ ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ, ಘಮಘಮಿಸುವ ಪರಿಮಳದಲ್ಲಿ ತೇಲಾಡಿರಿ.

ತಯಾರಕರು:
ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್,
ಮಂಗಳೂರು.

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.